ಬುಧವಾರ, ಏಪ್ರಿಲ್ 20, 2022 | ₹ 6.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ಪ್ರತಿಭಟನೆ

ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಅಧ್ಯಕ್ಷರ ರಾಜೀನಾಮೆಗೆ ಒತ್ತಾಯಿಸಿ ಕೊಲಂಬೊದಲ್ಲಿ ಮಂಗಳವಾರ ನಡೆದ ಪ್ರತಿಭಟನೆ ವೇಳೆ ಯುವತಿಯೊಬ್ಬರು ಭಿತ್ತಿಫಲಕ ಪ್ರದರ್ಶಿಸಿದರು



ಶೇ 30 ಕಮಿಷನ್ ಆರೋಪ: ಮುಖ್ಯಮಂತ್ರಿ, ಸಚಿವರ ಹೇಳಿಕೆಗೆ ದಿಂಗಾಲೇಶ್ವರ ಶ್ರೀ ತಿರುಗೇಟು

ಲಂಚ ತೆಗೆದುಕೊಂಡವರು ರಶೀದಿ ಕೊಡುತ್ತಾರೆಯೇ?

ಪ್ರಜಾವಾಣಿ ವಾರ್ತೆ

ಶಿರಹಟ್ಟಿ (ಗದಗ ಜಿಲ್ಲೆ): 'ಮಠ, ಮಂದಿರಗಳಿಗೆ ದೇಣಿಗೆ ನೀಡಿದರೆ ಅಲ್ಲಿ ರಶೀದಿ ಕೊಡುತ್ತಾರೆ. ಆದರೆ, ಲಂಚ ಪಡೆದ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ದೇಣಿಗೆ ಪಾವತಿ ನೀಡುತ್ತಾರೆಯೇ?' ಎಂದು ಲಂಚದ ಬಗ್ಗೆ ದಾಖಲೆ ಕೇಳಿದ ಮುಖ್ಯಮಂತ್ರಿ ಹಾಗೂ ಸಚಿವರಿಗೆ ದಿಂಗಾಲೇಶ್ವರ ಶ್ರೀ ತಿರುಗೇಟು ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಮಠಕ್ಕೆ ಮಂಜೂರಾದ ₹75 ಲಕ್ಷ ಅನುದಾನದಲ್ಲಿ ಅಧಿಕಾರಿಗಳು ₹25 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾರೆ. ಇದಕ್ಕಿಂತ ಹೆಚ್ಚಿನ ದಾಖಲೆಯ ಅವಶ್ಯಕತೆ ಇದೆಯೇ' ಎಂದು ಕೇಳಿದರು.

'ರಾಜ್ಯದಲ್ಲಿ ಮುಜರಾಯಿ ಇಲಾಖೆ ಹೊರತುಪಡಿಸಿದರೆ ಎಲ್ಲಾ ಇಲಾಖೆಗಳಲ್ಲಿ ಅನುದಾನ ತೆಗೆದುಕೊಳ್ಳಲು ಎಲ್ಲ ಮಠಾಧೀಶರು ಕಮಿಷನ್ ನೀಡಿದ್ದಾರೆ. ಅದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಮುಂದಾಗುತ್ತಿಲ್ಲ. ಅವರನ್ನೆಲ್ಲಾ ಮಂಪರು ಪರೀಕ್ಷೆಗೆ ಒಳಪಡಿಸಿದರೆ ಸತ್ಯ ಹೊರಬರುತ್ತದೆ' ಎಂದು ಹೇಳಿದರು.

ಸಚಿವ ಸಿ.ಸಿ.ಪಾಟೀಲ ಹೇಳಿಕೆಗೆ ಪ್ರತಿಕ್ರಿಯಿಸಿದ ಶ್ರೀಗಳು, 'ಸಿ.ಸಿ.ಪಾಟೀಲರಿಗೆ ರಾಜಕೀಯ ಮಾಡಲು ಮಠಗಳು ಸಾಲುತ್ತಿಲ್ಲ. ದಿಂಗಾಲೇಶ್ವರ ಶ್ರೀಗಳನ್ನು ಬಲ್ಲೆವು ಎಂಬ ಹೇಳಿಕೆ ನೀಡಿರುವುದು ಖಂಡನೀಯ' ಎಂದರು.

'ಜವಾಬ್ದಾರಿ ಸ್ಥಾನದಲ್ಲಿರುವ ಅವರು ಇತಿಹಾಸ, ಸೈದ್ಧಾಂತಿಕತೆಯನ್ನು ಮೊದಲು ಅರಿತುಕೊಳ್ಳಬೇಕು. ನಾವು ರಾಜ್ಯದಲ್ಲಿನ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ; ಅವರು ವೈಯಕ್ತಿಕವಾಗಿ ಮಾತನಾಡಿದ್ದಾರೆ' ಎಂದರು.

'ವೈಯಕ್ತಿಕ ಚರ್ಚೆಗೆ ವೇದಿಕೆ ನಿರ್ಮಿಸಿದರೆ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ನಾನು ಸಿದ್ಧನಿದ್ದೇನೆ. ತೋಂಟದಾರ್ಯ ಮಠ ಹಾಗೂ ಫಕೀರೇಶ್ವರ ಮಠದ ನಡುವೆ ಮಧ್ಯೆ ಬೆಂಕಿ ಹಚ್ಚುವ ಕೆಲಸವನ್ನು ಅವರು ಕೈಬಿಡಬೇಕು' ಎಂದರು.

ನಯಾಪೈಸೆ ಕೊಟ್ಟಿಲ್ಲ: ಕಾಗಿನೆಲೆ ಶ್ರೀ

ಗಜೇಂದ್ರಗಡ: 'ಕಾಗಿನೆಲೆ ಕನಕ ಗುರುಪೀಠ ಸೇರಿದಂತೆ ಹಲವು ಮಠಗಳು ಸರ್ಕಾರದಿಂದ ಅನುದಾನ ಪಡೆದಿವೆ. ಆದರೆ, ಯಾರೂ ಕಮಿಷನ್ ಕೊಟ್ಟಿಲ್ಲ' ಎಂದು ಹಾವೇರಿಯ ಕಾಗಿನೆಲೆ ಮಹಾಸಂಸ್ಥಾನಮಠದ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

'ಈ ಭಾಗದ ಸ್ವಾಮೀಜಿಯೊಬ್ಬರು ಮಠಗಳಿಂದ ಕಮಿಷನ್ ಪಡೆಯಲಾಗುತ್ತಿದೆ ಎಂದು ಸರ್ಕಾರದ ಮೇಲೆ ಗೂಬೆ ಕೂರಿಸಿರುವುದು ಸತ್ಯಕ್ಕೆ ದೂರ' ಎಂದು ಅವರು ಮಂಗಳವಾರ ಶಿರಹಟ್ಟಿ ಫಕೀರ ದಿಂಗಾಲೇಶ್ವರ ಶ್ರೀಗಳ ಹೆಸರು ಉಲ್ಲೇಖಿಸದೇ ತಿರುಗೇಟು ನೀಡಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟಕ್ಕೆ ₹119 ಕೋಟಿ ಅನುದಾನ ನೀಡಿದ್ದಾರೆ. ಹಿಂದೆ ಸದಾನಂದಗೌಡ, ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ಅವಧಿಯಲ್ಲೂ ನೂರಾರು ಕೋಟಿ ರೂಪಾಯಿ ಅನುದಾನ ನೀಡಿದ್ದಾರೆ. ಅನುದಾನವು ಜಿಲ್ಲಾಧಿಕಾರಿಗಳ ಖಜಾನೆಗೆ ಬಂದು ಅಲ್ಲಿಂದ ನೇರವಾಗಿ ಮಠಗಳ ಖಾತೆಗೆ ಜಮೆಯಾಗಿ ಅಭಿವೃದ್ಧಿಗೆ ಬಳಕೆಯಾಗಿದೆ' ಎಂದು ಹೇಳಿದರು.

'ಪ್ರಚಾರಕ್ಕಾಗಿ ಸ್ವಾಮೀಜಿ ಹೇಳಿಕೆ'

ತಿಪಟೂರು: 'ಹಣ ಬಿಡುಗಡೆಗೆ ಕಮಿಷನ್ ನೀಡಬೇಕಾಗಿದೆ' ಎಂದು ದಿಂಗಾಲೇಶ್ವರ ಸ್ವಾಮೀಜಿ ಹೇಳಿಕೆಯಿಂದ ಸಮಾಜದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಅವರು ಮಠಗಳ ಸ್ವಾಸ್ಥ್ಯ ಹಾಳು ಮಾಡುತ್ತಿದ್ದಾರೆ ಎಂದು ಷಡಕ್ಷರ ಮಠದ ರುದ್ರಮುನಿ ಸ್ವಾಮೀಜಿ ಹೇಳಿದರು.

ನಗರದ ಷಡಕ್ಷರ ಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ವಿವಾದಾತ್ಮಕ ಹೇಳಿಕೆ ನೀಡಿ ಪ್ರಚಾರ ಪಡೆಯಲು ದಿಂಗಾಲೇಶ್ವರ ಸ್ವಾಮೀಜಿ ಮುಂದಾಗಿದ್ದಾರೆ. ಮಠಗಳ ವಿಚಾರಕ್ಕೆ ಬಂದಾಗ ಪ್ರತಿಕ್ರಿಯೆ ನೀಡುವುದು ಅನಿವಾರ್ಯ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಯಾರಿಂದಲೂ ಕಿಂಚಿತ್ತೂ ಆಪೇಕ್ಷಿಸಿರಲಿಲ್ಲ' ಎಂದು ಹೇಳಿದರು.

'ದಿಂಗಾಲೇಶ್ವರ ಸ್ವಾಮೀಜಿಯ ಪೂರ್ವಾಶ್ರಮ ಜನರಿಗೆ ಗೊತ್ತು'

ಬೆಂಗಳೂರು: ಗದುಗಿನ ತೋಂಟದ ಸಿದ್ದಲಿಂಗ ಸ್ವಾಮೀಜಿ ಲಿಂಗೈಕ್ಯರಾದ ದಿನವನ್ನು 'ಭಾವೈಕ್ಯ ದಿನ'ವೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿರುವುದಕ್ಕೆ ತಗಾದೆ ತೆಗೆದಿರುವ ದಿಂಗಾಲೇಶ್ವರ ಸ್ವಾಮೀಜಿಯವರನ್ನು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ತರಾಟೆಗೆ ತೆಗೆದುಕೊಂಡಿದ್ದಾರೆ.

ಮಂಗಳವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹುಬ್ಬಳ್ಳಿಯ ಮೂರು ಸಾವಿರ ಮಠದ ಪೀಠಾಧ್ಯಕ್ಷರಾಗುವುದನ್ನು ತಪ್ಪಿಸಿದ್ದೇ ತೋಂಟದ ಸಿದ್ದಲಿಂಗ ಸ್ವಾಮೀಜಿ ಎಂಬ ಗ್ರಹಿಕೆಯಿಂದ ಮತ್ತು ಅಸೂಯೆಯಿಂದ ಈಗಲೂ ದಿಂಗಾಲೇಶ್ವರ ಸ್ವಾಮೀಜಿ ಹಗೆತನ ಸಾಧಿಸುತ್ತಿದ್ದಾರೆ ಎಂದು ಹೇಳಿದರು.

'ದಿಂಗಾಲೇಶ್ವರ ಸ್ವಾಮೀಜಿಯವರ ಪೂರ್ವಾಶ್ರಮ ಹೇಗಿತ್ತು ಎಂಬುದು ಇಡೀ ಗದಗದ ಜನರಿಗೆ ಗೊತ್ತು. ಇವರ ವಿರುದ್ಧ ಮೂರು ಮೊಕದ್ದಮೆಗಳಿದ್ದವು. ಎರಡರಲ್ಲಿ ಜಾಮೀನು ಪಡೆದುಕೊಂಡಿದ್ದಾರೆ. ಹುಬ್ಬಳ್ಳಿಯ ಮೂರು ಸಾವಿರ ಮಠದ ಗದ್ದುಗೆ ಹಿಡಿಯಬೇಕು ಎಂದು ಗೂಂಡಾ ಬಲ ಮತ್ತು ತೋಳ್ಬಲ ಬಳಸಿದ ಈ ವ್ಯಕ್ತಿಗೆ ಈಗ ತೋಂಟದ ಸಿದ್ದಲಿಂಗ ಸ್ವಾಮೀಜಿ ಬಗ್ಗೆ ಮಾತನಾಡುವ ನೈತಿಕ ಅಧಿಕಾರವಿಲ್ಲ' ಎಂದು ಸಿ.ಸಿ.ಪಾಟೀಲ ಕಿಡಿ ಕಾರಿದರು.


'ಒಂದು ಮಠದ ಸಮಾಧಿಯನ್ನು ಉದ್ಘಾಟನೆ ಮಾಡಲು ಹೋಗಿ ಇನ್ನೊಂದು ಮಠವನ್ನು ಸಮಾಧಿ ಮಾಡಿದ್ದಾರೆಂದು ಮುಖ್ಯಮಂತ್ರಿಯವರನ್ನು ಉದ್ದೇಶಿಸಿ ಹೇಳಿದ್ದಾರೆ. ಒಬ್ಬ ಮಠಾಧೀಶರಾಗಿ ಇನ್ನೊಂದು ಮಠದ ಬಗ್ಗೆ ಈ ರೀತಿ ವಿಷ ಕಾರುವುದು ಸರಿಯಲ್ಲ ಎಂದರು.

'ಶಿರಹಟ್ಟಿ ಮಠಕ್ಕೆ ಒಳ್ಳೆಯ ಹೆಸರಿದೆ. ಹಿಂದಿನ ಸ್ವಾಮೀಜಿಗಳು ಗೌರವ ಸಂಪಾದಿಸಿದ್ದರು. ಈಗಿನ ಸ್ವಾಮೀಜಿ ಬಸವಣ್ಣ ಅವರ ವಚನ ಹೇಳುವ ನೈತಿಕತೆ ಉಳಿಸಿಕೊಂಡಿಲ್ಲ. ಸರ್ಕಾರ ಮತ್ತು ಸಚಿವರ ಬಗ್ಗೆ ಟೀಕೆ ಮಾಡಲಿ. ಅಡ್ಡಿ ಇಲ್ಲ. ಆದರೆ, ಗದಗಿನ ತೋಂಟದ ಸಿದ್ದಲಿಂಗ ಸ್ವಾಮೀಜಿಯವರ ಬಗ್ಗೆ ಮಾತು ಬೇಸರ ಮೂಡಿಸಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

₹5,000 ಕೋಟಿ ಮೊತ್ತದ ಬಿಲ್ ಪಾವತಿ: ಸಚಿವ ಸಿ.ಸಿ.ಪಾಟೀಲ

ಬೆಂಗಳೂರು: ಎಚ್.ಸಿ. ಮಹದೇವಪ್ಪ ಸಚಿವರಾಗಿದ್ದ ಕಾಲದಿಂದ ಲೋಕೋಪಯೋಗಿ ಇಲಾಖೆಯಲ್ಲಿ ಒಟ್ಟು ₹4,000 ಕೋಟಿ ಬಿಲ್ ಬಾಕಿ ಇತ್ತು. ಆ ಮೊತ್ತವೂ ಸೇರಿ ಈವರೆಗೆ ₹5,000 ಕೋಟಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು.



ಮಂಗಳವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನಗಿಂತ ಹಿಂದೆ 5-6 ಲೋಕೋಪಯೋಗಿ ಸಚಿವರು ಇದ್ದರು. ಇವರು ಹಾಸಿಗೆ ಇದ್ದಷ್ಟು ಕಾಲು ಚಾಚದೇ ಇದ್ದ ಪರಿಣಾಮ ₹4,000 ಕೋಟಿ ಬಾಕಿ ಉಳಿಸಿ ಹೋಗಿದ್ದರು. ಅದನ್ನು ನಾವು ತೀರಿಸಿದ್ದೇವೆ' ಎಂದು ತಿಳಿಸಿದರು.

ಆರ್‌ಟಿಇ ಪ್ರವೇಶ ನಿರಾಕರಣೆ ರುಪ್ಸ ಎಚ್ಚರಿಕೆ

ಬೆಂಗಳೂರು: 'ವಾರ್ಷಿಕ ಮಾನ್ಯತೆ ನವೀಕರಣ ನೆಪವೊಡ್ಡಿ ಆರ್‌ಟಿಇ ಶುಲ್ಕ ಮರುಪಾವತಿ ಸ್ಥಗಿತಗೊಳಿಸಿದರೆ ಮುಂದಿನ ವರ್ಷದಿಂದ ಆರ್‌ಟಿಇ ಕೋಟಾದಡಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಎಚ್ಚರಿಕೆ ನೀಡಿದೆ.

ಈ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಗೆ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಪ್ರತಿ ವರ್ಷ ಮಾನ್ಯತೆ ನವೀಕರಣ ಕೇಳಬಾರದು ಎಂದು ಹೈಕೋರ್ಟ್ ತೀರ್ಪು ನೀಡಿದೆ. ಆದರೂ ಅಧಿಕಾರಿಗಳು ಮಾನ್ಯತೆ ನವೀಕರಣ ಮಾಡಿದರೆ ಮಾತ್ರ ಆರ್‌ಟಿಇ ಶುಲ್ಕ ಮರು ಪಾವತಿಸುವುದಾಗಿ ಹೇಳುತ್ತಿದ್ದಾರೆ' ಎಂದಿದ್ದಾರೆ.

'ಕರ್ನಾಟಕ ಶಿಕ್ಷಣ ಕಾಯ್ದೆಯ ಪ್ರಕಾರ ಒಂದು ಬಾರಿ ಮಾನ್ಯತೆ ನವೀಕರಣ ಮಾಡಿದರೆ ನಂತರ 10 ವರ್ಷದವರೆಗೆ ಮತ್ತೆ ಮಾನ್ಯತೆ ನವೀಕರಣ ಕೇಳಬಾರದು. ಹೈಕೋರ್ಟ್ ಕೂಡಾ ಇದನ್ನೇ ಪುನರುಚ್ಚರಿಸಿದೆ. ಆದರೆ, ಅಧಿಕಾರಿಗಳು ನ್ಯಾಯಾಲಯದ ತೀರ್ಪು ಉಲ್ಲಂಘಿಸುತ್ತಿದ್ದಾರೆ' ಎಂದು ದೂರಿದ್ದಾರೆ.

ಹಣ ಕೇಳಿದ್ದು ಯಾರು –ಕೋಟ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಉಡುಪಿ: 'ಸರ್ಕಾರದಿಂದ ಮಠಗಳಿಗೆ ಬಿಡುಗಡೆಯಾದ ಅನುದಾನ ಪಡೆಯಲು ಯಾವ ಇಲಾಖೆಯ ಅಧಿಕಾರಿ ಹಣ ಕೇಳಿದ್ದಾರೆ ಎಂಬುದನ್ನು ದಿಂಗಾಲೇಶ್ವರ ಶ್ರೀಗಳು ಸ್ಪಷ್ಟಪಡಿಸಿದರೆ, ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹಿಂದುಳಿದ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಏಪ್ರಿಲ್ ಮೊದಲ ವಾರದಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ 65 ಮಠಗಳಿಗೆ ₹119 ಕೋಟಿ ಹಣ ಬಿಡುಗಡೆ ಮಾಡಲು ಮುಖ್ಯಮಂತ್ರಿ ಆದೇಶ ನೀಡಿದ್ದಾರೆ. ಇಲ್ಲಿಯವರೆಗೆ ಒಂದು ಪೈಸೆಯೂ ಇಲಾಖೆಯಿಂದ ಬಿಡುಗಡೆಯಾಗಿಲ್ಲ' ಎಂದು ತಿಳಿಸಿದರು.

'ಸಮಾಜಕ್ಕೆ ಸಂದೇಶ ನೀಡುವಾಗ ಗೊಂದಲಗಳಿರಬಾರದು. ದಿಂಗಾಲೇಶ್ವರ ಶ್ರೀಗಳು ನಿರ್ದಿಷ್ಟವಾಗಿ ಯಾವ ವಿಚಾರ, ಕಾಮಗಾರಿ, ಇಲಾಖೆ, ಅಧಿಕಾರಿಯ ಹೆಸರು ಹೇಳಬೇಕು. ತನಿಖೆ ನಡೆಸಲಾಗುವುದು' ಎಂದರು.

'ಹುಬ್ಬಳ್ಳಿ ಗಲಭೆಕೋರರಿಂದಲೇ ಹಾನಿಯ ನಷ್ಟ ವಸೂಲಿ'

ಶಿವಮೊಗ್ಗ: 'ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ಆಸ್ತಿಗಳಿಗೆ ಆದ ಹಾನಿಯ ನಷ್ಟವನ್ನು ಗಲಭೆಕೋರರಿಂದಲೇ ವಸೂಲಿ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೋಮುಗಲಭೆಗಳ ನಿಯಂತ್ರಣಕ್ಕೆ ಉತ್ತರ ಪ್ರದೇಶದ ಬುಲ್ಡೋಜರ್ ಮಾದರಿ ಅನಗತ್ಯ. ಸಮಾಜದ ಶಾಂತಿಗೆ ಭಂಗ ತರುವವರ ವಿರುದ್ಧ ಕಾನೂನು ಪ್ರಕಾರವೇ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರತಿಕ್ರಿಯಿಸಿದರು.

'ಉತ್ತರ ಪ್ರದೇಶದಲ್ಲಿ ಅಲ್ಲಿನ ಪರಿಸ್ಥಿತಿ ಅನುಗುಣವಾಗಿ ಕೆಲವು ನಿರ್ಧಾರಗಳನ್ನು ಕೈಗೊಂಡಿದ್ದಾರೆ. ನಾವು ನಮ್ಮ ನೆಲದ ನೀತಿ–ನಿಯಮಗಳ ಅನ್ವಯ ಕ್ರಮ ಕೈಗೊಂಡಿದ್ದೇವೆ' ಎಂದು ಅವರು ಪ್ರತಿಕ್ರಿಯಿಸಿದರು.



ಶೃಂಗೇರಿ ಶಾರದಾ ಪೀಠಕ್ಕೆ ಮಂಗಳವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾರತೀ ತೀರ್ಥ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ವಿಧುಶೇಖರಭಾರತೀ ಸ್ವಾಮೀಜಿ ಇದ್ದರು

ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಸಂಗ್ರಹ • ಬಂಧಿತರ ಸಂಖ್ಯೆ 116ಕ್ಕೆ

ಗಲಭೆ: ಪ್ರಚೋದಕರ ಬೆನ್ನತ್ತಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹಳೇ ಹುಬ್ಬಳ್ಳಿಯಲ್ಲಿ ನಡೆದ ಗಲಭೆಗೆ ಪ್ರಚೋದನೆ ನೀಡಿದ ಹಾಗೂ ಕಾಣದ ಕೈಗಳ ಪಾತ್ರವಿರುವ ಕುರಿತು ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಗಲಭೆಗೆ ಸಂಬಂಧಿಸಿ ಮತ್ತೆ 12 ಮಂದಿಯನ್ನು ಬಂಧಿಸಿದ್ದು, ಬಂಧಿತರ ಸಂಖ್ಯೆ 116ಕ್ಕೆ ಏರಿದೆ.

ಹಳೇ ಹುಬ್ಬಳ್ಳಿ ಠಾಣೆ ಎದುರು ಪೊಲೀಸ್ ವಾಹನ ಏರಿ ಉದ್ರಿಕ್ತರಿಗೆ ಪ್ರಚೋದನೆ ನೀಡಲಾಗಿದೆ ಎಂಬ ವಿಡಿಯೊದಲ್ಲಿದ್ದ ಕೆಲವರಿಗೆ ಪೊಲೀಸರು ಬಲೆ ಬೀಸಿದ್ದಾರೆ. ಹುಬ್ಬಳ್ಳಿ–ಧಾರವಾಡ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಲ್ತಾಫ್ ಹಳ್ಳೂರ, ವಸೀಂ ಪಠಾಣ್, ಮೊಹಮ್ಮದ್ ಆರೀಫ್ ಇದ್ದರು ಎಂದು ಪೊಲೀಸರು ಗುರುತಿಸಿದ್ದಾರೆ.

'ಗಲಭೆ ನಿಯಂತ್ರಿಸಲು ಪೊಲೀಸ್ ವಾಹನದ ಮೇಲೆ ಹತ್ತಿದ್ದೆ. ಪ್ರಚೋದನೆ ನೀಡುವಂತಹ ದೇಶದ್ರೋಹದ ಕೆಲಸ ಮಾಡಿಲ್ಲ' ಎಂದು ಅಲ್ತಾಫ್ ಅವರು ಸ್ಪಷ್ಟನೆ ನೀಡಿದ್ದಾರೆ. ವಸೀಂ ಮತ್ತು ಆರೀಫ್ ತಲೆ ಮರೆಸಿಕೊಂಡಿದ್ದಾರೆ. ತನಿಖಾ ತಂಡಗಳು ಇಬ್ಬರ ಬೆನ್ನತ್ತಿವೆ ಎಂದು ಮೂಲಗಳು ತಿಳಿಸಿವೆ.

ವಿಡಿಯೊ ಆಧರಿಸಿ ವಿಚಾರಣೆ: 'ಪೊಲೀಸ್ ವಾಹನದ ಮೇಲೆ ಹತ್ತಿದ್ದವರ ಹಾಗೂ ಘಟನಾ ಪ್ರದೇಶದ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳ ಆಧರಿಸಿ ಗಲಭೆಗೆ ಪ್ರಚೋದನೆ ನೀಡಲಾಗಿದೆಯೇ ಎಂಬ ಬಗ್ಗೆ ತನಿಖೆ ನಡೆದಿದ್ದು, ಕೆಲವರ ವಿಚಾರಣೆ ನಡೆಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಲಾಭೂ ರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಳೇ ಹುಬ್ಬಳ್ಳಿಯ ಸುತ್ತಮುತ್ತ ಅಳವಡಿಸಿದ್ದ 48 ಕ್ಯಾಮೆರಾಗಳಲ್ಲಿ 21 ನಿರ್ವಹಿಸುತ್ತಿದ್ದು, 20 ನಿಷ್ಕ್ರಿಯವಾಗಿವೆ. ಉಳಿದ 7 ಕ್ಯಾಮೆರಾಗಳು ನಾಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳು ಕಲಬುರಗಿಗೆ ಸ್ಥಳಾಂತರ: ಗಲಭೆಗೆ ಸಂಬಂಧಿಸಿ ಬಂಧಿಸಲಾಗಿರುವ 103 ಆರೋಪಿಗಳನ್ನು ಮಂಗಳವಾರ ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕೇಂದ್ರ ಕಾರಾಗೃಹದ ಅಧೀಕ್ಷಕ ಮರಿಗೌಡ ಎಂ.ಎ 'ಪ್ರಜಾವಾಣಿ'ಗೆ ತಿಳಿಸಿದರು.

ಏ.16ರ ಗಲಭೆ ಘಟನೆಗೆ ಸಂಬಂಧಿಸಿ ಆರೋಪಿಗಳನ್ನು ಏ.30ರವರೆಗೆ ನ್ಯಾಯಾಂಗ ಬಂಧನಕ್ಕೆ ಕೋರ್ಟ್ ಒಪ್ಪಿಸಿದೆ. ಆರೋಪಿ ಅಭಿಷೇಕ ಹಿರೇಮಠ ವಿರುದ್ಧ ಸಲ್ಲಿಕೆಯಾಗಿರುವ ಜಾಮೀನು ಅರ್ಜಿಗೆ ಪ್ರತಿಯಾಗಿ ಬುಧವಾರ ತಕರಾರು ಅರ್ಜಿ ಸಲ್ಲಿಸಲು ಸರ್ಕಾರದ ಪರ ವಕೀಲರು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

> **'ಹಳೇ ಹುಬ್ಬಳ್ಳಿಯಲ್ಲಿ ನಡೆದ ಗಲಾಟೆಗೂ–ಕಾಂಗ್ರೆಸ್‌ಗೂ ಸಂಬಂಧವಿಲ್ಲ. ಗಲಾಟೆ ಬೇಡ ಎಂದು ನಮ್ಮ ಮುಖಂಡರು ಕೋರಿಕೊಂಡಿದ್ದಾರೆ. ಅವರಿಗೂ ಗಾಯಗಳಾಗಿವೆ'**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ರಾಜ್ಯದಲ್ಲಿ ಅಧಿಕಾರವಿಲ್ಲದೆ ಹತಾಶವಾಗಿರುವ ಕಾಂಗ್ರೆಸ್ ಅರಾಜಕತೆ ಸೃಷ್ಟಿಸುತ್ತಿದೆ. ಹುಬ್ಬಳ್ಳಿಯಲ್ಲಿ ನಡೆದ ಘಟನೆಗಳ ಹಿಂದೆ ಆ ಪಕ್ಷದ ಕೈವಾಡವಿದೆ**
> **ನಳಿನ್ ಕುಮಾರ್ ಕಟೀಲ್**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಬೇರೆ, ಬೇರೆ ಸಂಘಟನೆಯವರ ಕೈವಾಡ'



ಅಲ್ತಾಫ್ ಹಳ್ಳೂರ

'ಕಲ್ಲು ತೂರಿದವರೂ ಸೇರಿದಂತೆ ಗಲಭೆಯಲ್ಲಿದ್ದ ಹೆಚ್ಚಿನವರು ಸ್ಥಳೀಯರಲ್ಲ. ಬೇರೆ ಬೇರೆ ಸಂಘಟನೆಯವರ ಕೈವಾಡವಿದೆ' ಎಂದು ಹುಬ್ಬಳ್ಳಿ- ಧಾರವಾಡ ಮಹಾನಗರ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಅಲ್ತಾಫ್ ಹಳ್ಳೂರ ಆರೋಪಿಸಿದರು.

'ಗಲಾಟೆ ಮಾಡಬೇಡಿ ಎಂದು ನಮ್ಮವರಿಗೆ ಸಮಾಧಾನ ಮಾಡುತ್ತಿದ್ದೆ. ಎತ್ತರದಲ್ಲಿ ನಿಂತು ಮಾತನಾಡಿದ್ರೆ ಕೇಳುತ್ತದೆ ಎಂದು ಪೊಲೀಸ್ ವಾಹನವನ್ನು ಏರಿದ್ದೆ. ಪೊಲೀಸರ ಅನುಮತಿ ಪಡೆದು ಅವರ ಮೈಕ್‌ನಲ್ಲೇ ಮಾತನಾಡಿದೆ' ಎಂದು ಪೊಲೀಸ್ ವಾಹನದ ಮೇಲೆ ತಾವು ಹತ್ತಿರುವ ವಿಡಿಯೊ ವೈರಲ್ ಆದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮೌಲ್ವಿ ಅಲ್ಲ...': 'ಪೊಲೀಸ್ ವಾಹನ ಹತ್ತಿದ್ದ ವಸೀಂ ಪಠಾಣ್ ಮೌಲ್ವಿ ಅಥವಾ ಧರ್ಮಗುರು ಅಲ್ಲ. ಆತ ಸ್ಥಳೀಯ ಮಸೀದಿಯೊಂದರಲ್ಲಿ ಅಜಾನ್ ಕೂಗುವ ಕೆಲಸ ಮಾಡುತ್ತಾನೆ. ಆತ ಆತ ಪ್ರಚೋದನೆ ನೀಡುವಂತಹ ಮಾತುಗಳನ್ನು ಆಡಿಲ್ಲ' ಎಂದು ಹಳ್ಳೂರ ತಿಳಿಸಿದರು.

'ಯಾರು ಅಮಾಯಕರು?'

ದಾವಣಗೆರೆ: 'ಹುಬ್ಬಳ್ಳಿಯ ಘಟನೆಯಲ್ಲಿ ಮಂಗಳವಾರ ಅಮಾಯಕರನ್ನು ಬಂಧಿಸಬೇಡಿ ಎಂದು ಕಾಂಗ್ರೆಸಿಗರು ಹೇಳುತ್ತಾರೆ. ಯಾರು ಅಮಾಯಕರು? ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಪ್ರಶ್ನಿಸಿದರು.

'ಪೊಲೀಸ್ ಠಾಣೆಗೆ ದಾಳಿ ಮಾಡಿ 12 ಪೊಲೀಸರಿಗೆ ಗಾಯವಾಗುವಂತೆ ಮಾಡಿದವರು, ಇನ್‌ಸ್ಪೆಕ್ಟರ್ ಅವರ ತಲೆ ಒಡೆದವರು ಅಮಾಯಕರೇ' ಎಂದು ಅವರು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಅಲ್ತಾಫ್ ಹಳ್ಳೂರು ಘಟನೆಗೆ ಕಾರಣ ಎಂಬುದು ಜಗಜ್ಜಾಹೀರಾಗಿದೆ. ಅಮಾಯಕರನ್ನು ಬಂಧಿಸಬೇಡಿ ಎಂದು ಸಿದ್ದರಾಮಯ್ಯ ಇಂಥ ಘಟನೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅವರು ಸತ್ಯ ತಿಳಿದು ಮಾತನಾಡಲಿ' ಎಂದರು.

ಕೆ.ಎಸ್.ಈಶ್ವರಪ್ಪ ತಪ್ಪು ಮಾಡದೇ ರಾಜೀನಾಮೆ ನೀಡಿದ್ದಾರೆ. ಅವರ ಪಾತ್ರ ಇಲ್ಲ ಎಂಬುದು ತನಿಖೆಯಲ್ಲಿ ಸಾಬೀತಾಗಲಿದೆ. ಮತ್ತೆ ಸಚಿವರಾಗಲಿದ್ದಾರೆ ಎಂದರು.

'ಬಿಜೆಪಿಯವರೇ ಮೀರ್ ಸಾದಿಕ್‌ರು'

ಚಾಮರಾಜನಗರ: 'ನಾನು ಮೀರ್ ಸಾದಿಕ್ ಕೆಲಸ ಮಾಡಿಲ್ಲ. ಆರ್‌ಎಸ್‌ಎಸ್, ಸಂಘ ಪರಿವಾರ, ಬಿಜೆಪಿಯವರು ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿರುಗೇಟು ನೀಡಿದರು.

'ಹುಬ್ಬಳ್ಳಿ ಗಲಭೆಯಲ್ಲಿ ಕಾಂಗ್ರೆಸ್ ಪಿತೂರಿ ಇದೆ' ಎಂದು ಆರೋಪಿಸಿ ಹಾಗೂ ಸಿದ್ದರಾಮಯ್ಯ ಅವರನ್ನು ಮೀರ್ ಸಾದಿಕ್ ಎಂದು ಉಲ್ಲೇಖಿಸಿ ರಾಜ್ಯ ಬಿಜೆಪಿ ಮಾಡಿದ್ದ ಟ್ವೀಟ್‌ಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

'ಹುಬ್ಬಳ್ಳಿಯಲ್ಲಿ ಮೊದಲು ಗಲಭೆ ಹುಟ್ಟು ಹಾಕಿದ್ದು ಯಾರು? ಮೊದಲು ವಿಡಿಯೊ ಪೋಸ್ಟ್ ಮಾಡಿದವನು ಯಾರು? ಆತ ಬಜರಂಗದಳದ ಕಾರ್ಯಕರ್ತ. ಆತನನ್ನು ಬಂಧಿಸಲಾಗಿದೆ' ಎಂದು ಅವರು ಹೇಳಿದರು.

'ಸಂತೋಷ್ ಪಾಟೀಲ ಮೃತಪಟ್ಟ ವಿಷಯಕ್ಕೆ ಕಾಂಗ್ರೆಸ್ ಹೋರಾಟ ನಡೆಸುವುದು ಸಣ್ಣ ವಿಚಾರವೇ? ಶಿವಮೊಗ್ಗದಲ್ಲಿ ಹರ್ಷನ ಶವ ಇಟ್ಟುಕೊಂಡು, ನಿಷೇಧಾಜ್ಞೆ ಇದ್ದರೂ ಶವಯಾತ್ರೆ ಮಾಡಿದ್ದರು. ಬೆಳ್ತಂಗಡಿಯಲ್ಲಿ ದಿನೇಶ್ ಸತ್ತಾಗ, ನರಗುಂದ ಮುಸ್ಲಿಂ ವ್ಯಕ್ತಿ ಸತ್ತಾಗ ಯಾಕೆ ಮಾಡಲಿಲ್ಲ? ಹರ್ಷನ ಕುಟುಂಬಕ್ಕೆ ₹ 25 ಲಕ್ಷ ಕೊಟ್ಟರು. ದಿನೇಶ್ ಕುಟುಂಬಕ್ಕೆ ಏಕೆ ಕೊಡಲಿಲ್ಲ? ಬಿಜೆಪಿಯವರದು ದ್ವೇಷದ ರಾಜಕಾರಣ' ಎಂದು ಟೀಕಿಸಿದರು.

'ಟಿಪ್ಪು ಸುಲ್ತಾನ್ ಪಠ್ಯ ಕೈಬಿಡುವುದಿಲ್ಲ'

ಬೆಂಗಳೂರು: ಪಠ್ಯದಿಂದ ಟಿಪ್ಪು ಸುಲ್ತಾನ್ ಕುರಿತ ವಿಷಯ ಕೈಬಿಡುವುದಿಲ್ಲ. ಸಾಕ್ಷ್ಯಾಧಾರ ಇಲ್ಲದ ಅಂಶಗಳಿದ್ದರೆ ಕೈಬಿಡಲಾಗುವುದು. 'ಮೈಸೂರು ಹುಲಿ' ಎಂಬ ಬಿರುದು ಕೈಬಿಡುವುದಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಶಾಸಕ ಅಪ್ಪಚ್ಚು ರಂಜನ್ ಅವರು ಟಿಪ್ಪುವಿನ ಕುರಿತ ಪಠ್ಯ ಕೈಬಿಡಬೇಕು. ಉಳಿಸಿದರೆ ಆತನ ಎಲ್ಲ ಅಂಶವನ್ನು ಸೇರಿಸಬೇಕು ಎಂದು ಒತ್ತಾಯಿಸಿದ್ದರು. ಅವರು ಪೂರಕವಾದ ಮಾಹಿತಿಗಳನ್ನೂ ನೀಡಿದ್ದಾರೆ. ಟಿಪ್ಪು ಆಡಳಿತದಲ್ಲಿ ಕನ್ನಡ ತೆಗೆದು ಪರ್ಷಿಯನ್ ಭಾಷೆ ಜಾರಿ ತಂದದ್ದು ಮತ್ತು ಕೊಡವರ ಮೇಲೆ ದೌರ್ಜನ್ಯ ಎಸಗಿದ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ವಿವರಿಸಿದರು.

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ

ಹಿಂದಿನ ಪಿಡಿಒ, ಅಧ್ಯಕ್ಷರ ವಿಚಾರಣೆ, ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ತನಿಖೆ ತೀವ್ರಗೊಳಿಸಿರುವ ಉಡುಪಿ ಜಿಲ್ಲೆ ಪೊಲೀಸರು, ತಾಲ್ಲೂಕಿನ ಹಿಂಡಲಗಾ ಗ್ರಾ.ಪಂ. ಅಧ್ಯಕ್ಷ ನಾಗೇಶ ಮನ್ನೋಳಕರ ಮತ್ತು ನಿಕಟಪೂರ್ವ ಪಿಡಿಒ ಗಂಗಾಧರ ನಾಯಿಕ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

ಪೊಲೀಸರ ತಂಡ ಗ್ರಾಮ ಪಂಚಾಯಿತಿಯಲ್ಲಿ ಕಡತಗಳನ್ನು ಪರಿಶೀಲಿಸಿ, ರಸ್ತೆಗಳ ಅಳತೆ ಮಾಡಿಸಿದರು. ಕಾಮಗಾರಿ ನಡೆದಾಗ ಪಿಡಿಒ ಆಗಿದ್ದ ಗಂಗಾಧರ ನಾಯಿಕ ಅವರನ್ನು ಕರೆಸಿ ವಿಚಾರಣೆ ನಡೆಸಿದರು.

ಇನ್‌ಸ್ಪೆಕ್ಟರ್ ಶರಣಗೌಡ ಪಾಟೀಲ ನೇತೃತ್ವದ ತಂಡದವರು, ಹಿಂಡಲಗಾದಲ್ಲಿನ ನಾಗೇಶ ಮನೆಗೆ ಭೇಟಿ ನೀಡಿ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದರು. ಹೇಳಿಕೆ ದಾಖಲಿಸಿ, ಕೆಲವು ದಾಖಲೆಗಳನ್ನು ಪಡೆದರು.

ಸಂತೋಷ್ ಮಾತಿನ ಮೇರೆಗೆ ಕಾಮಗಾರಿ ಮಾಡಿದ್ದ 12 ಉಪ ಗುತ್ತಿಗೆದಾರರು ಹಾಜರಾಗಿ ಮಾಹಿತಿ ನೀಡಿದ್ದಾರೆ. ತಾವು ನಿರ್ವಹಿಸಿದ ಕೆಲಸ ಹಾಗೂ ಬರಬೇಕಾದ ಹಣದ ಬಗ್ಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ನಾಗೇಶ, 'ಸಂತೋಷ್ ₹ 50 ಲಕ್ಷ ಮೊತ್ತದ ಕಾಮಗಾರಿ ಸ್ವತಃ ನಿರ್ವಹಿಸಿದ್ದ. ಉಳಿದವುಗಳನ್ನು 12 ಮಂದಿಗೆ ಉಪ ಗುತ್ತಿಗೆ ಕೊಟ್ಟಿದ್ದ. ಕಾರ್ಯಾದೇಶದ ಬಗ್ಗೆ ನನಗೆ ಮಾಹಿತಿ ಇಲ್ಲ. ಜಾತ್ರೆ ಹಿನ್ನೆಲೆಯಲ್ಲಿ ಕಾಮಗಾರಿ ನಡೆದಿರುವುದು ನಿಜ' ಎಂದರು.

ಹೋರಾಟ ಮುಗಿದಿಲ್ಲ: ಡಿ.ಕೆ.ಶಿವಕುಮಾರ್

ಬೆಳಗಾವಿ: ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಸಂತೋಷ್ ಪಾಟೀಲ ಅವರ ಕುಟುಂಬ ದವರಿಗೆ ಕೆಪಿಸಿಸಿಯಿಂದ ₹ 11 ಲಕ್ಷ ಪರಿಹಾರವನ್ನು ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೀಡಿದರು.

ತಾಲ್ಲೂಕಿನ ಬಡಸ ಕೆ.ಎಚ್. ಗ್ರಾಮದ ಮನೆಯಲ್ಲಿ ಮಂಗಳವಾರ ಸಂತೋಷ್ ಪತ್ನಿ ಜಯಶ್ರೀ ಹಾಗೂ ತಾಯಿ ಪಾರ್ವತಿ ಪಾಟೀಲ ಅವರಿಗೆ ಚೆಕ್ ನೀಡಿದರು. ಪಕ್ಷದ ಮುಖಂಡ ಪ್ರಕಾಶ ಹುಕ್ಕೇರಿ ಅವರೂ ವೈಯಕ್ತಿಕವಾಗಿ ₹ 5 ಲಕ್ಷ ಪರಿಹಾರ ನೀಡಿ ಸಾಂತ್ವನ ಹೇಳಿದರು. ಕುಟುಂಬದವರೊಂದಿಗೆ ಗೋಪ್ಯವಾಗಿ ಮಾತುಕತೆ ನಡೆಸಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಶಿವಕುಮಾರ್, 'ನಮ್ಮ ಹೋರಾಟ ಇಲ್ಲಿಗೆ ಮುಗಿದಿಲ್ಲ. ಆ ಕುಟುಂಬಕ್ಕೆ ₹4 ಕೋಟಿ ಕೊಡಿಸುವವರೆಗೂ ಹೋರಾಟ ಮುಂದುವರಿಯಲಿದೆ' ಎಂದರು.

ಸಂತೋಷ್ ಹಣ ಹಾಕಿಲ್ಲ: ಸಚಿವ ಅಶೋಕ

ದಾವಣಗೆರೆ: ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಸಂತೋಷ್ ಪಾಟೀಲ ಕಾಂಗ್ರೆಸ್‌ನಲ್ಲಿದ್ದವರು. ಅವರು ಕಾಮಗಾರಿ ಮಾಡಿಲ್ಲ. ಬೇರೆ 12–13 ಮಂದಿ ಮಾಡಿರುವುದು ಗೊತ್ತಾಗಿದೆ. ಈ ಮಂದಿಯೇ ಕಾಮಗಾರಿಗೆ ಹಣ ಹಾಕಿದ್ದಾರೆ. ಸಂತೋಷ್ ಪಾಟೀಲ ಹಣ ಹಾಕಿಲ್ಲ' ಎಂದು ಸಚಿವ ಆರ್. ಅಶೋಕ ಅವರು ಇಲ್ಲಿ ಪ್ರತಿಕ್ರಿಯಿಸಿದರು.

'ವರ್ಕ್ ಆರ್ಡರ್ ಇಲ್ಲ, ಟೆಂಡರ್ ಇಲ್ಲ, ಅಪ್ರೂವಲ್ ಇಲ್ಲ. ಯಾವುದೂ ಇಲ್ಲದೇ ಹೇಗೆ ಕಾಮಗಾರಿ ಮಾಡಿದ್ದಾರೆ? ತನಿಖೆ ಮುಗಿಯಲಿ, ಆಮೇಲೆ ಮಾತನಾಡುತ್ತೇನೆ' ಎಂದು ಸಚಿವ ಗೋವಿಂದ ಕಾರಜೋಳ ಪ್ರತಿಕ್ರಿಯಿಸಿದರು.



ಶ್ರೀಲಂಕಾ ರಾಜಧಾನಿ ಕೊಲಂಬೊದಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷದ ಕಾರ್ಯಕರ್ತರು ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು. –ಎಪಿ ಚಿತ್ರ

ಶ್ರೀಲಂಕಾ: ಇಂಧನ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಗುಂಡೇಟಿಗೆ ಪ್ರತಿಭಟನಕಾರ ಸಾವು

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ದ್ವೀಪರಾಷ್ಟ್ರದಲ್ಲಿ ಪ್ರತಿಭಟನೆಗಳು ತೀವ್ರಗೊಂಡಿವೆ. ಇಂಧನದ ಬೆಲೆ ಏರಿಕೆ ವಿರುದ್ಧ ಮಂಗಳವಾರ ಪ್ರತಿಭಟನೆ ನಡೆಸುತ್ತಿದ್ದ ಜನರನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದ್ದು, ಘಟನೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, 24 ಜನರು ಗಾಯಗೊಂಡಿದ್ದಾರೆ.

ರಂಬುಕ್ಕಾನ ಎಂಬಲ್ಲಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು. ರಾಜಧಾನಿ ಕೊಲಂಬೊದಲ್ಲಿ ರೈಲು ಹಳಿಗಳು ಹಾಗೂ ರಾಷ್ಟ್ರೀಯ ಹೆದ್ದಾರಿಯನ್ನು ತಡೆದ ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಐದು ಸುತ್ತು ಗುಂಡು ಹಾರಿಸಿದರು. ಈ ಘಟನೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡವರನ್ನು ಕೆಗಲ್ಲೆ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ನಾಲ್ವರ ಪರಿಸ್ಥಿತಿ ಗಂಭೀರವಾಗಿದೆ. ಕ್ಯಾಂಡಿಯಲ್ಲಿ ಸಹ ಭಾರಿ ಪ್ರತಿಭಟನೆ ನಡೆದಿದೆ.

ಶನಿವಾರಸಂತೆ: ಹಿಂದೂ–ಮುಸ್ಲಿಂ ಯುವಕರ ಗಲಾಟೆ

ಶನಿವಾರಸಂತೆ (ಕೊಡಗು): ಪಟ್ಟಣದಲ್ಲಿ ಮಂಗಳವಾರ ಸಂಜೆ ಹಿಂದೂ ಹಾಗೂ ಮುಸ್ಲಿಂ ಯುವಕರ ನಡುವೆ ಗಲಾಟೆ ನಡೆದು, ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಹಿಂದೂ ಯುವತಿ ಜೊತೆಗೆ ಮುಸ್ಲಿಂ ಯುವಕರು ಅಸಭ್ಯವಾಗಿ ವರ್ತಿಸಿದ್ದರು ಎನ್ನಲಾಗಿದೆ. ಪ್ರಶ್ನಿಸಿದ ಹಿಂದೂ ಜಾಗರಣ ವೇದಿಕೆಯ ಸಚಿನ್ ಮತ್ತು ತನ್ಮಯ್ ಅವರ ಮೇಲೆ ಅಜರ್, ರಶೀದ್, ಬಾಷಾ, ಇಮ್ರಾನ್ ಎಂಬುವವರು ಬಾಟಲಿ ಹಾಗೂ ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಮಂಗಳವಾರ ರಾತ್ರಿ, ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಶನಿವಾರಸಂತೆ ಠಾಣೆಗೆ ತೆರಳಿ, ಪ್ರಕರಣ ದಾಖಲಿಸುವಂತೆ ಪಟ್ಟು ಹಿಡಿದರು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಯುವಕರ ಗುಂಪು ಆಕ್ರೋಶ ಹೊರಹಾಕಿತು. ಸದ್ಯ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಪಟ್ಟಣದಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಸೂಕ್ಷ್ಮ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಮಡಿಕೇರಿ, ಕುಶಾಲನಗರದಿಂದ ಹೆಚ್ಚುವರಿ ಪೊಲೀಸರನ್ನು ಕರೆಸಿಕೊಳ್ಳಲಾಗಿದೆ.

ಮಳೆ: ಮರ ಉರುಳಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ, ಮಂಡ್ಯ ಸೇರಿ ಕೆಲ ಜಿಲ್ಲೆಗಳಲ್ಲಿ ಮಂಗಳವಾರ ಮಳೆಯಾಗಿದೆ. ಪ್ರತ್ಯೇಕ ಘಟನೆಗಳಲ್ಲಿ ಮರ ಬಿದ್ದು ಇಬ್ಬರು ವಾಹನ ಸವಾರರು ಮೃತಪಟ್ಟಿದ್ದಾರೆ. ಮಂಡ್ಯ, ಹಾಸನ ಜಿಲ್ಲೆಯಲ್ಲಿ ಆಲಿಕಲ್ಲು ಮಳೆಯಾಗಿದೆ.

ಬೆಳಗಾವಿ ವರದಿ: ನಗರ, ತಾಲ್ಲೂಕಿನ ವಿವಿಧೆಡೆ ಮಂಗಳವಾರ ಸಂಜೆ ಜೋರು ಮಳೆಯಾಗಿದೆ. ಕ್ಲಬ್ ರಸ್ತೆಯಲ್ಲಿ ಮರಬಿದ್ದು ದ್ವಿಚಕ್ರ ಸವಾರ ಕಾಳಿಅಂಬ್ರಾಯಿ ನಿವಾಸಿ ವಿಜಯ ಕೊಲ್ಹಾಪುರೆ (63) ಮೃತಪಟ್ಟರು.

ಡಾ.ಬಿ.ಆರ್. ಅಂಬೇಡ್ಕರ್ ರಸ್ತೆಯಲ್ಲಿ ಎರಡು ಮರಗಳು ಉರುಳಿದ್ದು, ಪಾರ್ಕಿಂಗ್ ಸ್ಥಳದಲ್ಲಿದ್ದ 30ಕ್ಕೂ ಹೆಚ್ಚು ದ್ವಿಚಕ್ರವಾಹನಗಳು ಜಖಂಗೊಂಡಿವೆ. ಹಲವೆಡೆಗೆ ವಿದ್ಯುತ್ ಕಂಬ ಬಿದ್ದಿವೆ. ವಿದ್ಯುತ್ ವ್ಯತ್ಯಯವಾಗಿತ್ತು.

ರಾಮದುರ್ಗ ಮತ್ತು ಸವದತ್ತಿ ತಾಲ್ಲೂಕು, ಹುಬ್ಬಳ್ಳಿ ನಗರ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ಭಾರಿ ಗಾಳಿ ಮತ್ತು ಸಿಡಿಲಿನ ಆರ್ಭಟದೊಂದಿಗೆ ಧಾರಾಕಾರ ಮಳೆಯಾಗಿದೆ.

ಮರ ಬಿದ್ದು ಸವಾರ ಸಾವು ದಾವಣಗೆರೆ ವರದಿ: ಮಳೆ ಸುರಿಯುತ್ತಿದೆ ಎಂದು ತಾಲ್ಲೂಕಿನ ಬೋರಗೊಂಡನಹಳ್ಳಿ ಬಳಿ ಸೋಮವಾರ ರಾತ್ರಿ ಮರದಡಿ ಬೈಕ್ ನಿಲ್ಲಿಸಿದ್ದಾಗ ಮರ ಬಿದ್ದು ಬೈಕ್ ಸವಾರ ಹಿರೇಕುಂಬಳಗುಂಟೆ ಗ್ರಾಮದ ನಿವಾಸಿ ಸಿದ್ದಪ್ಪ (57) ಮೃತಪಟ್ಟಿದ್ದಾರೆ. ಮಳೆ ಸಂಬಂಧಿತ ಅವಘಡದಲ್ಲಿ ಎರಡು ಕಾರುಗಳು ಜಖಂಗೊಂಡಿವೆ.

ಚಿತ್ರದುರ್ಗದಲ್ಲಿ ಜಿಲ್ಲೆಯ ಹಲವೆಡೆ ಸೋಮವಾರ ಮಧ್ಯರಾತ್ರಿ ಧಾರಾಕಾರ ಮಳೆ ಸುರಿದಿದೆ. ಬಾಳೆ, ಮೆಕ್ಕೆಜೋಳ, ತೆಂಗು, ಅಡಿಕೆ ಸೇರಿ ಹಲವು ಬೆಳೆಗಳಿಗೆ ಹಾನಿಯುಂಟಾಗಿದೆ. ನಾಯಕನಹಟ್ಟಿಯಲ್ಲಿ ಆರು ಎಕರೆ ಬಾಳೆ ತೋಟ, ಬೆಳಗಟ್ಟ ಗ್ರಾಮದಲ್ಲಿ ಮೆಕ್ಕೆಜೋಳ ನೆಲಕ್ಕೆ ಬಿದ್ದಿದೆ.

ಬಿರುಗಾಳಿ ಸಹಿತ ಮಳೆ ಮೈಸೂರು ವರದಿ: ನಗರದಲ್ಲಿ ಮಂಗಳವಾರ ರಾತ್ರಿ ಬಲವಾದ ಬಿರುಗಾಳಿ ಸಹಿತ ಮಳೆಯಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಕುವೆಂಪುನಗರದ ಉದಯರವಿ ರಸ್ತೆ, ಜಯನಗರದ ಇಸ್ಕಾನ್ ದೇವಸ್ಥಾನದ ಬಳಿ ಮರಗಳು ಉರುಳಿದವರು. ವಿವಿಧೆಡೆ ವಿದ್ಯುತ್ ವ್ಯತ್ಯಯವಾಯಿತು.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯಲ್ಲಿ ಆಲಿಕಲ್ಲು ಸಹಿತ ಮಳೆ ಸುರಿಯಿತು. ಮೈಸೂರು– ಕಿಕ್ಕೇರಿ ರಸ್ತೆಯಲ್ಲಿ ಮರ ಉರುಳಿದೆ. ಜಿಲ್ಲೆಯ ಕೊಪ್ಪ ಮತ್ತು ಅರಕಲಗೂಡಿನ ಕಾಳೇನಹಳ್ಳಿಯಲ್ಲಿ ಅರಳಿ ಮರ ಗಾಳಿಗೆ ನೆಲಕಚ್ಚಿತು.

ಸಂಕ್ಷಿಪ್ತ ಸುದ್ದಿ

'ಕೆಪಿಟಿಸಿಎಲ್: 1550 ಹುದ್ದೆ ಭರ್ತಿ ಶೀಘ್ರ'

ಬಾಗಲಕೋಟೆ: 'ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ (ಕೆಪಿಟಿಸಿಎಲ್) ಖಾಲಿ ಇರುವ 1,550 ಹುದ್ದೆಗಳ ಭರ್ತಿಗೆ ಮೇ ತಿಂಗಳಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು' ಎಂದು ಇಂಧನ ಸಚಿವ ವಿ. ಸುನಿಲ್‌ಕುಮಾರ್ ಅವರು ಹೇಳಿದರು.

'ಇಲಾಖೆಯಲ್ಲಿ ಬಹಳಷ್ಟು ವರ್ಷಗಳಿಂದ ಖಾಲಿ ಹುದ್ದೆಗಳ ಭರ್ತಿ ಮಾಡುವ ಕೆಲಸ ನಡೆದಿರಲಿಲ್ಲ. ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಎಂಜಿನಿಯರ್, ಪವರ್ ಮ್ಯಾನ್, ಲೈನ್ ಮ್ಯಾನ್ ಹುದ್ದೆಗಳು ಬಹಳಷ್ಟು ಖಾಲಿ ಇವೆ. ಅವುಗಳನ್ನು ತುಂಬಿಕೊಳ್ಳಲಾಗುವುದು' ಎಂದರು.

15 ಸಾವಿರ ಶಿಕ್ಷಕರ ನೇಮಕ: ಅವಧಿ ವಿಸ್ತರಿಸಲು ಆಗ್ರಹ

ಬೆಂಗಳೂರು: ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ (6ರಿಂದ 8 ತರಗತಿವರೆಗೆ) 15 ಸಾವಿರ ಪದವೀಧರ ಶಿಕ್ಷಕರ (ಜಿಪಿಟಿ) ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನವನ್ನು (ಏಪ್ರಿಲ್ 22) ವಿಸ್ತರಿಸುವಂತೆ ಉದ್ಯೋಗಾಕಾಂಕ್ಷಿಗಳು ಆಗ್ರಹಿಸಿದ್ದಾರೆ. ಈ ಹುದ್ದೆಗಳಿಗೆ ನೇಮಕಾತಿಗೆ ಮೇ 21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆ (ಸಿಇಟಿ) ನಡೆಯಲಿದೆ.

'ಮಾರ್ಚ್ 23ರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಒಂದು ತಿಂಗಳ ಅವಕಾಶ ನೀಡಿದರೂ, ಈ ಮಧ್ಯೆ ಹಲವು ಸರ್ಕಾರಿ ರಜೆಗಳು ಬಂದಿವೆ. ಹೀಗಾಗಿ, ಕನ್ನಡ, ಗ್ರಾಮೀಣ ಅಭ್ಯರ್ಥಿ, ಜಾತಿ ಮೀಸಲಾತಿ ಅಡಿ ಸಂಬಂಧಿಸಿದ ಇಲಾಖೆಗಳಿಂದ ಪ್ರಮಾಣಪತ್ರ ಪಡೆದುಕೊಂಡು ಈ ಅವಧಿಯ ಒಳಗೆ ಸಲ್ಲಿಸಲು ಸಾಧ್ಯವಿಲ್ಲ. ಹೀಗಾಗಿ, ಕೊನೆ ದಿನವನ್ನು ವಿಸ್ತರಿಸಬೇಕು' ಎಂದು ಶಿಕ್ಷಣ ಇಲಾಖೆಗೆ ಹಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದಾರೆ.

'ತುಂಡು ಬಟ್ಟೆಗಾಗಿ ಶಿಕ್ಷಣ ನಿರಾಕರಿಸಬೇಡಿ'

ಉಡುಪಿ: 'ತುಂಡು ಬಟ್ಟೆಯ (ಹಿಜಾಬ್) ಕಾರಣಕ್ಕೆ ನಮಗೆ ಶಿಕ್ಷಣ ನಿರಾಕರಿಸುವುದು ಸರಿಯೇ' ಎಂದು ಹಿಜಾಬ್ ಹೋರಾಟಗಾರ್ತಿ ಅಲ್ಮಾಸ್ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರನ್ನು ಟ್ವಿಟ್ಟರ್‌ನಲ್ಲಿ ಪ್ರಶ್ನಿಸಿದ್ದಾರೆ.

'ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹಿಜಾಬ್ ಧರಿಸಲು ಅವಕಾಶ ಇಲ್ಲ ಎಂದು ಹೇಳಿರುವುದರಿಂದ ದೀರ್ಘಕಾಲದಿಂದ ನಾವು ಪರೀಕ್ಷೆಗೆ ಮಾಡಿಕೊಂಡಿರುವ ಸಿದ್ಧತೆ ವ್ಯರ್ಥವಾಗಲಿದೆ. ದಯವಿಟ್ಟು ನಮಗೆ ಅನ್ಯಾಯ ಮಾಡಬೇಡಿ, ಪರೀಕ್ಷೆ ಬರೆಯಲು ಅವಕಾಶ ಕೊಡಿ' ಎಂದು ಅಲ್ಮಾಸ್ ಅವರು ಮನವಿ ಮಾಡಿದ್ದಾರೆ.

'ಪಂಚಮಸಾಲಿಗೆ 2ಎ ಮೀಸಲಾತಿ: ವರದಿ ಆಧರಿಸಿ ಕ್ರಮ'

ಶಿವಮೊಗ್ಗ: ಪಂಚಮಸಾಲಿಗಳಿಗೆ '2 ಎ' ಮೀಸಲಾತಿ ಸೌಲಭ್ಯ ನೀಡುವ ವಿಷಯ ಹಿಂದುಳಿದ ವರ್ಗಗಳ ಆಯೋಗದ ಮುಂದಿದೆ. ಸಮೀಕ್ಷಾ ವರದಿ ನೀಡಿದ ತಕ್ಷಣ ಕ್ರಮಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.


ಸುದ್ದಿಗಾರರ ಜೊತೆ ಮಾತನಾಡಿದ ಅವರು, ವೀರಶೈವ ಲಿಂಗಾಯತ ಸಮಾಜದ ಮೃತ ಗುತ್ತಿಗೆದಾರ ಸಂತೋಷ್ ಪಾಟೀಲ ಕುಟುಂಬಕ್ಕೆ ನೆರವಿನ ಹಣ ಸಂಗ್ರಹಿಸುತ್ತಿರುವುದು ಸಂಘಟನೆಗಳ ವೈಯಕ್ತಿಕ ವಿಚಾರ ಎಂದರು.

ಬುಧವಾರ, ಏಪ್ರಿಲ್ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 109 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವೈರಲ್ ಸೋಂಕುಗಳು ಮತ್ತು ಸ್ವಯಂ ನಿರೋಧಕ ಕಾಯಿಲೆಗಳಲ್ಲಿ ಮೈಕ್ರೋ ಆರ್‌ಎನ್‌ಎ 'ದ್ವಿಪಾತ್ರ'ದಲ್ಲಿ ಕೆಲಸ ಮಾಡುತ್ತದೆ.



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,463	16,958	₹55,040 (ಬೆಂಗಳೂರು)	₹72,400 (ಬೆಂಗಳೂರು)	76.50

ರಾಜ್ಯದ ನಾಲ್ಕೂ ಶಾಖೋತ್ಪನ್ನ ಸ್ಥಾವರಗಳಲ್ಲಿ ದಾಸ್ತಾನು ಸ್ಥಿತಿ ಚಿಂತಾಜನಕ

ಕಲ್ಲಿದ್ದಲು ಕೊರತೆ: ವಿದ್ಯುತ್ ಅಭಾವ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬೇಸಿಗೆಯಲ್ಲಿ ಪ್ರತಿದಿನವೂ ವಿದ್ಯುತ್ ಬೇಡಿಕೆ ಹೆಚ್ಚುತ್ತಿದೆ. ಆದರೆ, ಕರ್ನಾಟಕವೂ ಸೇರಿ ದೇಶದಾದ್ಯಂತ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ ಹಲವು ಸ್ಥಾವರಗಳು ಕಲ್ಲಿದ್ದಲಿನ ತೀವ್ರ ಕೊರತೆ ಎದುರಿಸುತ್ತಿವೆ.

ಏಪ್ರಿಲ್ 18ರಂದು ದೇಶದಲ್ಲಿನ ಕಲ್ಲಿದ್ದಲು ದಾಸ್ತಾನು ಕುರಿತು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸಿಇಎ) ನೀಡಿರುವ ವರದಿಯ ಪ್ರಕಾರ, ದೇಶದ ಒಟ್ಟು 173 ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಪೈಕಿ 100ರಲ್ಲಿ ಕಲ್ಲಿದ್ದಲಿನ ಕೊರತೆ ತೀವ್ರವಾಗಿದೆ. ಸ್ಥಾವರದ ಸಾಮಾನ್ಯ ದಾಸ್ತಾನಿಗೆ ಹೋಲಿಸಿದಾಗ ಶೇ 25ಕ್ಕಿಂತ ಕಡಿಮೆ ಕಲ್ಲಿದ್ದಲು ದಾಸ್ತಾನು ಇದ್ದರೆ ಆ ಸ್ಥಾವರವು ಚಿಂತಾಜನಕ ಸ್ಥಿತಿಯಲ್ಲಿದೆ ಎಂದು ಸಿಇಎ ಗುರುತಿಸುತ್ತದೆ.

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿನ ಒಟ್ಟು ಕಲ್ಲಿದ್ದಲು ಸಾಮಾನ್ಯ ದಾಸ್ತಾನು 66.72 ದಶಲಕ್ಷ ಟನ್. ಆದರೆ, ಸದ್ಯ ಇರುವುದು 22.52 ದಶಲಕ್ಷ ಟನ್. ಇದು ಸಾಮಾನ್ಯ ದಾಸ್ತಾನಿಗೆ ಹೋಲಿಸಿದರೆ ಕೇವಲ ಶೇ 34 ಎಂದು ಸಿಇಎ ವರದಿ ಹೇಳಿದೆ.

ಎನ್‌ಟಿಪಿಸಿ ನಿರ್ವಹಣೆಯ ಕೂಡಗಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸೇರಿ ಕರ್ನಾಟಕದ ಎಲ್ಲ 4 ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಲ್ಲಿದ್ದಲು ದಾಸ್ತಾನು ಇದೆ. ಇವುಗಳನ್ನು ತೀವ್ರ ಚಿಂತಾಜನಕ ಸ್ಥಿತಿಯಲ್ಲಿರುವ ಸ್ಥಾವರಗಳೆಂದು ಗುರುತಿಸಿದೆ. ರಾಜ್ಯ ಸರ್ಕಾರ ನಿರ್ವಹಿಸುತ್ತಿರುವ 3 ಸ್ಥಾವರಗಳು ಕೇವಲ 1.87 ಲಕ್ಷ ಟನ್ ಕಲ್ಲಿದ್ದಲು ದಾಸ್ತಾನು ಹೊಂದಿವೆ. ಇವುಗಳಲ್ಲಿ ಸಾಮಾನ್ಯ ದಾಸ್ತಾನು 16.99 ಲಕ್ಷ ಟನ್ ಇರಬೇಕಿತ್ತು. ಕೇವಲ ಶೇ 11ರಷ್ಟು ಕಲ್ಲಿದ್ದಲು ದಾಸ್ತಾನು ಇದೆ. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಶೇ 13ರಷ್ಟು ದಾಸ್ತಾನು ಇದ್ದರೆ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಶೇ 11ರಷ್ಟು ಹಾಗೂ ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಶೇ 9ರಷ್ಟು ಕಲ್ಲಿದ್ದಲು ದಾಸ್ತಾನು ಇದೆ. ಮೂರು ವಿದ್ಯುತ್ ಸ್ಥಾವರಗಳು ಪ್ರತಿದಿನ 60,000 ಟನ್ ಕಲ್ಲಿದ್ದಲು ಪಡೆಯುತ್ತಿವೆ.

ಆದರೆ, 37,000 ಟನ್ ಮಾತ್ರ ಬಳಸಿಕೊಳ್ಳುತ್ತಿವೆ ಎಂದು ವರದಿ ಹೇಳಿದೆ.

ಎನ್‌ಟಿಪಿಸಿ ನಿರ್ವಹಣೆಯಲ್ಲಿರುವ ಕೂಡಗಿ ಶಾಖೋತ್ಪನ್ನ ವಿದ್ಯುತ್ ಸ್ಥಾವರವು ಕೇವಲ 60,000 ಟನ್ ದಾಸ್ತಾನು ಹೊಂದಿದೆ. ಇದರ ಸಾಮಾನ್ಯ ದಾಸ್ತಾನು 7.99 ಲಕ್ಷ ಟನ್. ಸದ್ಯ ಈ ಸ್ಥಾವರದಲ್ಲಿರುವ ಕಲ್ಲಿದ್ದಲಿನ ದಾಸ್ತಾನು ಪ್ರಮಾಣ ಶೇ 8 ಮಾತ್ರ. ಕಲ್ಲಿದ್ದಲಿನ ಕೊರತೆ ನೀಗಿಸಲು ಎನ್‌ಟಿಪಿಸಿ, ಕಲ್ಲಿದ್ದಲು ಸಾಗಾಟದ ರೈಲುಗಳನ್ನು ಒಂದು ಸ್ಥಾವರದಿಂದ ಮತ್ತೊಂದು ಸ್ಥಾವರಕ್ಕೆ ಕಳುಹಿಸುತ್ತಿದೆ ಎಂದು ಸಿಇಎ ತಿಳಿಸಿದೆ.

ಖಾಸಗಿ ವಿದ್ಯುತ್ ಸ್ಥಾವರಗಳ ಪೈಕಿ ಉಡುಪಿ ಶಾಖೋತ್ಪನ್ನ ವಿದ್ಯುತ್ ಸ್ಥಾವರವು ಶೇ 17ರಷ್ಟು ಕಲ್ಲಿದ್ದಲು ದಾಸ್ತಾನು ಹೊಂದಿದ್ದರೆ, ತೋರಣಗಲ್ಲು ಸ್ಥಾವರದ ದಾಸ್ತಾನು ಶೂನ್ಯವಾಗಿದೆ. ತೋರಣಗಲ್ಲು ಟಿಪಿಎಸ್ ಶೇ 71ರಷ್ಟು ದಾಸ್ತಾನು ಹೊಂದಿದೆ. ಈ ಸ್ಥಾವರಗಳು ಆಮದು ಕಲ್ಲಿದ್ದಲಿನಿಂದ ಕಾರ್ಯ ನಿರ್ವಹಿಸುತ್ತಿವೆ.

'ರಾಜ್ಯದಲ್ಲಿ ಲೋಡ್‌ಶೆಡ್ಡಿಂಗ್ ಇಲ್ಲ'

ಬಾಗಲಕೋಟೆ: 'ರಾಜ್ಯದಲ್ಲಿ ಕಲ್ಲಿದ್ದಲಿನ ಕೊರತೆ ಇಲ್ಲ. ಯಾವುದೇ ಕಾರಣಕ್ಕೂ ಲೋಡ್‌ಶೆಡ್ಡಿಂಗ್ ಮಾಡುವುದಿಲ್ಲ. ಇಲಾಖೆ ಅಥವಾ ಸರ್ಕಾರದ ಮುಂದೆ ಅಂತಹ ಚಿಂತನೆ ಇಲ್ಲ' ಎಂದು ಇಂಧನ ಸಚಿವ ವಿ. ಸುನಿಲ್‌ಕುಮಾರ್ ಹೇಳಿದರು.

ಇಲ್ಲಿನ ನವನಗರದ ಯುನಿಟ್ 2ರಲ್ಲಿ ಮಂಗಳವಾರ 110/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟನೆಗೆ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು 7 ತಾಸು ವಿದ್ಯುತ್ ಪೂರೈಸಲು ಸಿದ್ಧತೆ ನಡೆದಿದೆ' ಎಂದು ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ ಬೆಳಕು ಯೋಜನೆಯಡಿ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಮ ಪಂಚಾಯಿತಿಯ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಬೇಕಿತ್ತು. ಈಗ ಕಡ್ಡಾಯವಲ್ಲ. ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ಇದ್ದರೆ ಸಾಕು. ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.

> **ದೇಶದಲ್ಲಿ ಕಲ್ಲಿದ್ದಲು ಪೂರೈಕೆ ಪರಿಸ್ಥಿತಿಯನ್ನು ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ. ಕೆಪಿಸಿಎಲ್‌ಗೆ ಹೆಚ್ಚುವರಿ 10 ಲಕ್ಷ ಟನ್ ಕಲ್ಲಿದ್ದಲು ಪೂರೈಸಲಾಗುವುದು.**
> **ಪ್ರಲ್ಹಾದ್ ಜೋಶಿ,** ಕೇಂದ್ರ ಕಲ್ಲಿದ್ದಲು ಸಚಿವ

50 ಅಭ್ಯರ್ಥಿಗಳಿಗೆ ಸಿಐಡಿ ಬುಲಾವ್

ಪಿಎಸ್‌ಐ ಅಕ್ರಮ: ಕಾರ್ಲ್‌ಟನ್ ಕಚೇರಿಗೆ ಬರಲು ಸೂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ, ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿರುವ ಎಲ್ಲ ಅಭ್ಯರ್ಥಿಗಳ ವಿಚಾರಣೆ ನಡೆಸಲು ಸಿಐಡಿ ಅಧಿಕಾರಿಗಳು ಮುಂದಾಗಿದ್ದಾರೆ.

'ಏಪ್ರಿಲ್ 20ರಂದು ಬೆಳಿಗ್ಗೆ 10 ಗಂಟೆಗೆ 50 ಅಭ್ಯರ್ಥಿಗಳು ಬೆಂಗಳೂರಿನ ಕಾರ್ಲ್‌ಟನ್ ಕಟ್ಟಡದಲ್ಲಿರುವ ಸಿಐಡಿ ಕಚೇರಿಗೆ ಹಾಜರಾಗಬೇಕು' ಎಂದು ಅಧಿಕಾರಿಗಳು ಈ ಅಭ್ಯರ್ಥಿಗಳಿಗೆ ಪತ್ರ ಬರೆದಿದ್ದಾರೆ.

'545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪರೀಕ್ಷೆ ವೇಳೆ ಅಕ್ರಮ ನಡೆದಿದೆ ಎಂಬ ಬಗ್ಗೆ ತನಿಖೆ ನಡೆದಿದೆ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಕಾರಣ ವಿಚಾರಣೆ ಮಾಡಬೇಕಾಗಿದೆ. ಹಾಗಾಗಿ, ತನಿಖಾಧಿಕಾರಿ ಮುಂದೆ ತಪ್ಪದೇ ಹಾಜರಾಗಬೇಕು' ಎಂದು ಸಿಐಡಿ ಡಿವೈಎಸ್ಪಿ ಪಿ.ನರಸಿಂಹಮೂರ್ತಿ ಅವರು ಪತ್ರಮುಖೇನ ತಿಳಿಸಿದ್ದಾರೆ.

ವಿಚಾರಣೆಗೆ ಬರುವಾಗ ಹಾಲ್ ಟಿಕೆಟ್‌ನ ಮೂಲಪ್ರತಿ ಹಾಗೂ ಪರೀಕ್ಷೆಯ ದಿನ ತೆಗೆದುಕೊಂಡ ಒಎಂಆರ್ ಶೀಟ್‌ನ ಕಾರ್ಬನ್ ಪ್ರತಿ (ಕ್ಯಾಂಡಿಡೇಟ್ಸ್ ಕಾಪಿ) ತರುವಂತೆಯೂ ಸೂಚನೆ ನೀಡಿದ್ದಾರೆ.

ಎಂಟು ಅಭ್ಯರ್ಥಿಗಳ ಪಟ್ಟಿ ನೀಡಿದ್ದರೇ?: 'ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆ ಮುಖ್ಯ ಶಿಕ್ಷಕ ಕಾಶೀನಾಥ ಬಂಧನಕ್ಕೆ ಬಲೆ ಬೀಸಿದ್ದೇವೆ. ಪ್ರಕರಣ ಬೆಳಕಿಗೆ ಬಂದಾಗಿನಿಂದಲೂ ಅವರು ತಲೆಮರೆಸಿಕೊಂಡಿದ್ದಾರೆ. ಸಹ ಶಿಕ್ಷಕಿಯೊಬ್ಬರು ಸಹ ಪರಾರಿಯಾಗಿದ್ದಾರೆ' ಎನ್ನುವುದು ಸಿಐಡಿ ಮೂಲಗಳ ಮಾಹಿತಿ.

'ಪರೀಕ್ಷಾ ಅಕ್ರಮದಲ್ಲಿ ಮುಖ್ಯಶಿಕ್ಷಕ ಪ್ರಮುಖ ಪಾತ್ರ ವಹಿಸಿರಬಹುದು. ಪರೀಕ್ಷಾ ಕೇಂದ್ರದ ಮೇಲ್ವಿಚಾರಕಿಯರಿಗೆ ಎಂಟು ಅಭ್ಯರ್ಥಿಗಳ ಪಟ್ಟಿ ಕೊಟ್ಟು, ಮುಂಚಿತವಾಗಿ ಅವರೇ ಉತ್ತರ ನೀಡಿರಬಹುದು. ಇವರ ಸೂಚನೆಯಂತೆ ಮೇಲ್ವಿಚಾರಕಿಯರು ಒಎಂಆರ್ ಶೀಟ್‌ನಲ್ಲಿ ಸರಿ ಉತ್ತರ ಟಿಕ್ ಮಾಡಿದ್ದಾರೆ' ಎಂದು ಸಿಐಡಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಪ್ರಮುಖ ಆರೋಪಿ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರ ಪತ್ತೆಗೆ ವಿಜಯಪುರ, ಮುಂಬೈ ಮುಂತಾದ ಸ್ಥಳಗಳಲ್ಲೂ ತಪಾಸಣೆ ಮಾಡಲಾಗಿದೆ. ಆದರೆ, ಅವರ ಸುಳಿವು ಪತ್ತೆಯಾಗಿಲ್ಲ ಎಂದೂ ತಿಳಿಸಿದ್ದಾರೆ.

ಎಂಜಿನಿಯರ್ ಭಾಗಿಯಾದ ಶಂಕೆ

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರಬಹುದಾದ ಅಕ್ರಮದಲ್ಲಿ ಕಲಬುರಗಿಯ ನೀರಾವರಿ ಇಲಾಖೆಯ ಎಂಜಿನಿಯರ್ ಒಬ್ಬರ ಹೆಸರು ಮಂಗಳವಾರ ಕೇಳಿಬಂದಿದೆ. ಮೊದಲಿಗೆ ಬಂಧಿತನಾದ ವೀರೇಶ ನಿಡಗುಂದಾ ಈ ವಿಷಯ ಬಾಯಿಬಿಟ್ಟಿದ್ದಾರೆ. ಆದರೆ, ಇದನ್ನು ಖಚಿತಪಡಿಸಿಕೊಳ್ಳಬೇಕಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಈಗಾಗಲೇ ಬಂಧಿತರಾದ ಮೂವರು ಅಭ್ಯರ್ಥಿಗಳು, ಪರೀಕ್ಷಾ ಕೇಂದ್ರದ ಮೂವರು ಮೇಲ್ವಿಚಾರಕಿಯರ ಪೊಲೀಸ್ ಕಸ್ಟಡಿ ಅವಧಿ ಬುಧವಾರ (ಏ. 20) ಮುಗಿಯಲಿದೆ. ಹೀಗಾಗಿ, ಮಂಗಳವಾರ ಇಡೀ ದಿನ ಅವರ ವಿಚಾರಣೆ ನಡೆಯಿತು.

4ನೇ ಪುಟ ನೋಡಿ

₹3,500 ಕೋಟಿ ಬಿಲ್ ಬಾಕಿ– ಗುತ್ತಿಗೆದಾರರ ಸಂಘ ಆರೋಪ

ಬಿಬಿಎಂಪಿಯಲ್ಲೂ ಶೇ 40ರಷ್ಟು ಲಂಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ವಿರುದ್ಧ ರಾಜ್ಯ ಮಟ್ಟದ ಗುತ್ತಿಗೆದಾರರ ಸಂಘ ಮತ್ತು ಮಠಾಧೀಶರು ಲಂಚದ ಆರೋಪ ಹೊರಿಸುತ್ತಿರುವ ಬೆನ್ನಲ್ಲೇ, ಶೇ 40ರಷ್ಟು ಕಮಿಷನ್ ನೀಡಿದರೆ ಮಾತ್ರ ಬಿಲ್ ಪಾವತಿ ಮಾಡಿಸಿಕೊಳ್ಳಲು ಸಾಧ್ಯ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಬಿಬಿಎಂಪಿ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಿಗೆ 2019ರ ನವೆಂಬರ್‌ನಿಂದ ₹3,500 ಕೋಟಿ ಬಿಲ್ ಬಾಕಿ ಉಳಿದಿದೆ. ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಗುತ್ತಿಗೆದಾರರು ಎಚ್ಚರಿಸಿದ್ದಾರೆ.

'ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಡಿ ಗುತ್ತಿಗೆದಾರರಿಗೆ ₹300 ಕೋಟಿ ಬಾಕಿ ಬರಬೇಕಿದೆ. ಸಂಘವು 2 ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರನ್ನು ಹೊಂದಿದ್ದು, ಅದರಲ್ಲಿ 200ರಿಂದ 300 ಗುತ್ತಿಗೆದಾರರು ₹10,000 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿ ಕೈಗೆತ್ತಿಕೊಂಡಿದ್ದಾರೆ. ಮಾತುಕತೆ ವಿಫಲವಾದರೆ ಪ್ರತಿಭಟನೆ ಅನಿವಾರ್ಯ' ಎಂದು ಸಂಘ ತಿಳಿಸಿದೆ.

3ನೇ ಪುಟ ನೋಡಿ

'ಇನ್ನೂ ಎಷ್ಟು ಜನ ಸಾಯಬೇಕು?'

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಸಾವನ್ನು ಪ್ರಕರಣವೊಂದರ ವಿಚಾರಣೆ ವೇಳೆ ಪ್ರಸ್ತಾಪಿಸಿರುವ ಹೈಕೋರ್ಟ್, 'ಇನ್ನೂ ಎಷ್ಟು ಜನ ಸಾಯಬೇಕು ಎಂದುಕೊಂಡಿದ್ದೀರಿ' ಎಂದು ಕಟುವಾಗಿ ಪ್ರಶ್ನಿಸಿದೆ.



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ನಡೆಸಲಾಗಿರುವ ಕಾಮಗಾರಿಯ ಗುತ್ತಿಗೆ ಹಣ ಪಾವತಿಗೆ ಸಂಬಂಧಿಸಿದಂತೆ ಬಿ.ಬಿ. ಉಮೇಶ್ ಹಾಗೂ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಡಿ.ಪ್ರಶಾಂತ್ ಕುಮಾರ್, 'ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ನೀಡಲಾಗಿದೆ. ಅದರೂ, ಹಣ ಪಾವತಿಯಾಗಿಲ್ಲ' ಎಂದು ಆಕ್ಷೇಪಿಸಿದರು. ಈ ಮಾತಿಗೆ ಬಿಬಿಎಂಪಿ ಪರ ವಕೀಲರನ್ನು ತರಾಟೆಗೆ ತೆಗೆದುಕೊಂಡ ನ್ಯಾಯ ಪೀಠ, 'ಇನ್ನೂ ಎಷ್ಟು ಜನ ಗುತ್ತಿಗೆದಾರರು ಸಾಯಬೇಕು ಎಂದುಕೊಂಡಿದ್ದೀರಿ, ಕೆಲಸ ಮಾಡಿದರೂ ಹಣ ಪಾವತಿಗೆ ಯಾಕೆ ಮೀನಮೇಷ ಎಣಿಸುತ್ತಿದ್ದೀರಿ? ಒಂದು ವೇಳೆ ಗುತ್ತಿಗೆದಾರರು ಮಾಡಿರುವ ಕೆಲಸದಲ್ಲಿ ಲೋಪವಿದೆ ಅಥವಾ ಸರಿಯಾಗಿಲ್ಲ ಎಂದರೆ ಆ ಮಾತು ಬೇರೆ, ಆದರೆ ಕಾಮಗಾರಿ ಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರ ಇದ್ದರೂ ನೀವು ಹಣ ಪಾವತಿಸದೇ ಇರುವುದು ತರವಲ್ಲ' ಎಂದು ಗುಡುಗಿತು.

'ಸಂವಿಧಾನ ಇರುವುದು ತತ್ವಾಚರಣೆಗೆ ಅಲ್ಲ. ಅದರಲ್ಲಿನ ತತ್ವಗಳನ್ನು ನ್ಯಾಯದಾನಕ್ಕೆ ಉಪಯೋಗಿಸಬೇಕು ಎಂಬುದು ಸಂವಿಧಾನ ನಿರ್ಮಾತೃಗಳ ಆಶಯವಾಗಿತ್ತು. ನೀವು ತತ್ವ ಹೇಳಿದರೆ ಅದನ್ನು ಕೇಳುತ್ತಾ ಕೂರಲು ಆಗುವುದಿಲ್ಲ' ಎಂದು ವಕೀಲರಿಗೆ ಚಾಟಿ ಬೀಸಿದ ನ್ಯಾಯಪೀಠ, ವಿಚಾರಣೆ ಮುಂದೂಡಿತು.

ಒಳ ಪುಟಗಳು

ಪಿಯು ಪರೀಕ್ಷೆ: ಹಿಜಾಬ್‌ಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 22ರಿಂದ ಮೇ 18ರವರೆಗೆ ನಡೆಯುವ ದ್ವಿತೀಯ ಪಿಯು ಅಂತಿಮ ಪರೀಕ್ಷೆಗೆ ಹಾಜರಾಗುವವರು ಪರೀಕ್ಷಾ ಕೊಠಡಿಯೊಳಗೆ ಹಿಜಾಬ್ ಅಥವಾ ಇತರ ಯಾವುದೇ ಧಾರ್ಮಿಕ ಆಚರಣೆಯ ಸಂಕೇತಗಳನ್ನು ಧರಿಸಿಕೊಂಡು ಬರುವಂತಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಪರೀಕ್ಷಾ ಸಿದ್ಧತೆಯ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದ ಅವರು, ಪರೀಕ್ಷಾ ಕೊಠಡಿಗಳಿಗೆ ಶಿಕ್ಷಕಿಯರೂ ಹಿಜಾಬ್ ಧರಿಸಿ ಬರುವಂತಿಲ್ಲ. ಇವುಗಳ ಬಗ್ಗೆ ಈಗಾಗಲೇ ಸುದೀರ್ಘ ಸುತ್ತೋಲೆ ಹೊರಡಿಸಿದ್ದು, ಅದರಲ್ಲಿ ಎಲ್ಲ ವಿಷಯಗಳನ್ನು ಸ್ಪಷ್ಟಪಡಿಸಲಾಗಿದೆ ಎಂದರು.

ಯಾವ ಪಿಯು ಕಾಲೇಜುಗಳಲ್ಲಿ ಸಮವಸ್ತ್ರ ನಿಗದಿ ಮಾಡಲಾಗಿದೆಯೋ ಆ ಕಾಲೇಜಿನ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿಕೊಂಡು ಹಾಜರಾಗಬೇಕು. ಯಾವ ಕಾಲೇಜುಗಳಲ್ಲಿ ಎಸ್‌ಡಿಎಂಸಿ ಸಮವಸ್ತ್ರ ನಿಗದಿ ಮಾಡಿಲ್ಲವೋ ಅಲ್ಲಿನ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿಕೊಂಡು ಬರುವ ಅಗತ್ಯವಿಲ್ಲ. ಆದರೆ, ಎಲ್ಲೂ ಕೂಡ ಹಿಜಾಬ್ ಅಥವಾ ಧಾರ್ಮಿಕ ಆಚರಣೆಯ ಸಂಕೇತಗಳನ್ನು ಪರೀಕ್ಷಾ ಕೊಠಡಿಯೊಳಗೆ ಧರಿಸಿ ಬರುವಂತಿಲ್ಲ. ಈ ಬಗ್ಗೆ ಗೊಂದಲ ಸೃಷ್ಟಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಮತ್ತು ಇತರ ಶ್ರವಣ ಸಾಧನಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದರು.

ಸೋರಿಕೆ ತಡೆಗೆ ಕಟ್ಟುನಿಟ್ಟಿನ ಕ್ರಮ: ಪ್ರಶ್ನೆಗಳ ಸೋರಿಕೆ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಹಿಂದಿನ ವರ್ಷಗಳ ಅನುಭವದ ಆಧಾರದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ

9ನೇ ಪುಟ ನೋಡಿ

> **ವಿದ್ಯಾರ್ಥಿಗಳು ಯಾವುದೇ ಭಯ ಇಲ್ಲದೇ ಪರೀಕ್ಷೆ ಬರೆಯಬೇಕು. ಪೋಷಕರೂ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಬೇಕು. ಸಿಲೆಬಸ್ ಹೊರತಾದ ಪ್ರಶ್ನೆಗಳನ್ನು ಕೇಳುವುದಿಲ್ಲ**
> **ಬಿ.ಸಿ.ನಾಗೇಶ್,** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಡಿಪ್ಲೊಮಾ ಪರೀಕ್ಷೆ: ಎರಡೂ ಭಾಷೆಯಲ್ಲಿ ಉತ್ತರಕ್ಕೆ ಅವಕಾಶ

ಬೆಂಗಳೂರು: ಡಿಪ್ಲೊಮಾ ಕೋರ್ಸ್ ಕಲಿಯುತ್ತಿರುವ ವಿದ್ಯಾರ್ಥಿಗಳು ಈ ಶೈಕ್ಷಣಿಕ ಸಾಲಿನಿಂದ ಪರೀಕ್ಷೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡನ್ನೂ ಬಳಸಿ ಉತ್ತರ ಬರೆಯಲು ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆ ಅವಕಾಶ ಕಲ್ಪಿಸಲಿದೆ. ಅಂದರೆ, ವಿದ್ಯಾರ್ಥಿಗಳು ಎರಡೂ ಭಾಷೆಗಳನ್ನು 'ಮಿಶ್ರಣ' ಮಾಡಿ ಉತ್ತರ ಬರೆಯಬಹುದು!

'ಡಿಪ್ಲೊಮಾ ಕೋರ್ಸ್ ಸೇರುವ ವಿದ್ಯಾರ್ಥಿಗಳ ಪೈಕಿ ಬಹುತೇಕರು ಎಸ್ಸೆಸ್ಸೆಲ್ಸಿ ಪಾಸಾದವರು. ಹೀಗಾಗಿ, ಈ ವಿದ್ಯಾರ್ಥಿಗಳಿಗೆ ವಿಷಯವನ್ನು ಅರ್ಥ ಮಾಡಿಕೊಡಲು ಶಿಕ್ಷಕರು ಕನ್ನಡದಲ್ಲಿ ಪಾಠ ಮಾಡುತ್ತಾರೆ. ಬಹುತೇಕ ಕೋರ್ಸ್‌ಗಳಲ್ಲಿ ತಾಂತ್ರಿಕ ವಿಷಯಗಳಿರುತ್ತವೆ. ಇಲ್ಲಿ ಸಂವಹನಕ್ಕೆ ಮಾತ್ರ ಇಂಗ್ಲಿಷ್ ಬೇಕಾಗಿದೆ. ಹೀಗಾಗಿ, ಪರೀಕ್ಷೆಯಲ್ಲಿ ಎರಡೂ ಭಾಷೆಗಳ ಮಿಶ್ರಣ ಮಾಡಿ ಉತ್ತರ ಬರೆಯಲು ಅವಕಾಶ ನೀಡಲು ತೀರ್ಮಾನಿಸಲಾಗಿದೆ' ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ.

'ಡಿಪ್ಲೊಮಾ ಕೋರ್ಸ್‌ಗಳ ಎಲ್ಲ ಸೆಮಿಸ್ಟರ್‌ಗಳ ಪರೀಕ್ಷೆಗಳಲ್ಲಿ ಈ ಬದಲಾವಣೆ ತರಲಾಗುವುದು. ಈಚೆಗೆ ನಡೆದ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಳಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಗಿದೆ' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



2018ರ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ – ಕಟಕಟೆಯಲ್ಲಿ ಮುಂದುವರಿದ ಮುನಿರಾಜುಗೌಡ ಸಾಕ್ಷಿ

ಲಾರಿ ತುಂಬಾ ಮುನಿರತ್ನ ಚಿತ್ರದ ಟಿ–ಶರ್ಟ್..!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡು ನೋಂದಣಿ ಸಂಖ್ಯೆಯ ಲಾರಿ ಆ ರಾತ್ರಿ ನಮ್ಮವರ ಕಣ್ಣಿಗೆ ಬಿದ್ದಿದ್ದೇ ತಡ ಯಶವಂತಪುರದ ಹಾದಿ ಹಿಡಿದೆವು. ಅಲ್ಲಿಂದ ಅಂಬೇಡ್ಕರ್ ಪ್ರತಿಮೆ ಬಳಿ ನಿಂತೆವು. ನಾವು ಹತ್ತಿರ ಹೋಗುತ್ತಿದ್ದಂತೆ ಲಾರಿ ಅಲ್ಲಿಂದ ಮತ್ತೆ ಮುಂದಕ್ಕೋಡಿತು. ನಾವೂ ನಮ್ಮ ವಾಹನದಲ್ಲಿ ಹಿಂಬಾಲಿಸಿದೆವು. ಯಶವಂತಪುರ ಠಾಣೆ ಮುಂದೆ ಸಾಗಿದ ಲಾರಿ ಅಲ್ಲಿಂದ ಡಾಲರ್ಸ್ ಕಾಲೊನಿ ಬಳಿ ಹೋಗುತ್ತಿದ್ದಾಗ ಕಡೆಗೂ ಒಂದೆಡೆ ಅಡ್ಡಹಾಕಿ ನಿಲ್ಲಿಸಿದೆವು. ಅದರ ತುಂಬಾ ಮುನಿರತ್ನ ಅವರ ಚಿತ್ರವಿದ್ದ ಟಿ-ಶರ್ಟ್‌ಗಳಿದ್ದವು...!'

ಈಗ ಸಚಿವರಾಗಿರುವ ಮುನಿರತ್ನ ಅವರು 2018ರ ಚುನಾವಣೆಯಲ್ಲಿ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಅಂದು ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಪಿ.ಎಂ. ಮುನಿರಾಜು ಗೌಡ, ಹೈಕೋರ್ಟ್‌ನ ಸಾಕ್ಷಿ ಮುಂದುವರಿಸುವ ವೇಳೆ ಕಟಕಟೆಯಲ್ಲಿ ನಿಂತು ಮುಖ್ಯ ವಿಚಾರಣೆಯ ಪ್ರಶ್ನೆಗೆ ಉತ್ತರಿಸುತ್ತಾ ಈ ಘಟನೆಯನ್ನು ನ್ಯಾಯಪೀಠಕ್ಕೆ ವಿವರಿಸಿದ್ದು ಹೀಗೆ.

'ಮುನಿರತ್ನ ಅವರ ಅಂದಿನ ಆಯ್ಕೆಯನ್ನು ಜನತಾ ಪ್ರತಿನಿಧಿ ಕಾಯ್ದೆ–1951ರ ಕಲಂ 123ರ ಅನುಸಾರ ಅನೂರ್ಜಿತ ಎಂದು ಸಾರಬೇಕು' ಎಂದು ಕೋರಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯರೂ ಆಗಿರುವ ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮುಂದುವರೆಸಿತು.

ಅರ್ಜಿದಾರರ ಪರ ವಕೀಲ ಎಂ. ಶಿವಪ್ರಕಾಶ್ ಪ್ರಶ್ನೆಗಳಿಗೆ ಉತ್ತರಿಸಿದ ಮುನಿರಾಜು ಗೌಡ, 'ಲಾರಿ ಡ್ರೈವರ್ ದೊರೈ ಕಡೆಗೂ ನಮ್ಮವರ ಕೈಗೆ ಸಿಕ್ಕಿಬಿದ್ದ. ನಮ್ಮವರು ಪೊಲೀಸರಿಗೆ ಮುಂಚಿತವಾಗಿಯೇ ತಿಳಿಸಿದ್ದರಿಂದಾಗಿ ಅಲ್ಲಿದ್ದ ಕಡೆಗಳನ್ನು ಅವರನ್ನು ಸುತ್ತುವರೆದರು..' ಎಂದು ವಿವರಿಸಿದರು.

'ಇದಕ್ಕೂ ಮುನ್ನ ಜಾಲಹಳ್ಳಿ, ಲಗ್ಗೆರೆ ಮುಂತಾದ ಕಡೆ ಕುಕ್ಕರ್‌ಗಳು, ತವಾ ಮತ್ತು ಸೀರೆಗಳನ್ನು ಹಂಚಿದ್ದು ಹಾಗೂ ಈ ಸಂಗತಿಯನ್ನು ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿರುವುದನ್ನು ಮುನಿರಾಜುಗೌಡ ನ್ಯಾಯಪೀಠಕ್ಕೆ ವಿವರಿಸಿದರು. ಅಲ್ಲದೆ ಎಲ್ಲೆಲ್ಲಿ ಚುನಾವಣಾ ಅಕ್ರಮಗಳು ನಡೆದಿದ್ದವು, ಮುನಿರತ್ನ ಯಾವ ಪ್ರದೇಶಗಳಲ್ಲಿ ಮತದಾರರ ಗುರುತಿನ ಚೀಟಿಗಳನ್ನು ಪಡೆದುಕೊಂಡು ಕುಕ್ಕರ್ ಹಾಗೂ ಇತರ ವಸ್ತುಗಳನ್ನು ಹಂಚಿದ್ದರು ಎಂಬ ಬಗ್ಗೆ ಖಚಿತ ಧ್ವನಿಯಲ್ಲಿ ಉತ್ತರಿಸಿದರು.

ಆಕ್ಷೇಪ: ಈ ಘಟನೆಗಳ ಫೋಟೊ ಮತ್ತು ಫೇಸ್‌ಬುಕ್‌ಗೆ ಅಪ್‌ಲೋಡ್ ಆಗಿದ್ದ ವಿವರಗಳನ್ನು ಸಿಡಿಗಳನ್ನು ದಾಖಲಿಸಿಕೊಳ್ಳುವಾಗ ಮುನಿರತ್ನ ಪರ ವಕೀಲ ಆರ್.ಹೇಮಂತರಾಜ್, ವಿಜಯ್ ಆಕ್ಷೇಪ ವ್ಯಕ್ತಪಡಿಸಿದರು. 'ಈ ಸಾಕ್ಷ್ಯಗಳು ಮಾಹಿತಿ ತಂತ್ರಜ್ಞಾನ ಕಾಯ್ದೆ-2000ದ ಕಲಂ 65ಬಿ ಅನ್ವಯ ಪರಿಶೀಲನೆಗೆ ಒಳಪಡಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ರಸ್ತೆಗುಂಡಿ ಮುಚ್ಚುವ ಕಾಮಗಾರಿ ಆದೇಶ ನೀಡಲು ತಾಕೀತು

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಗುಂಡಿ ಮುಚ್ಚುವ ಕಾಮಗಾರಿ ನಡೆಸಲು ಅಮೆರಿಕನ್ ರೋಡ್ ಟೆಕ್ನಾಲಜೀಸ್ ಅಂಡ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ಗೆ (ಎಆರ್‌ಟಿಎಸ್) ಕಾರ್ಯಾದೇಶ ನೀಡದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿರುದ್ಧ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ನಗರದ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಸರ್ಕಾರ ಹಾಗೂ ಪಾಲಿಕೆಗೆ ನಿರ್ದೇಶಿಸುವಂತೆ ಕೋರಿ ಬೆಂಗಳೂರಿನ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಈಗಾಗಲೇ ಮಳೆ ಆರಂಭವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ನಾಲ್ಕೈದು ತಿಂಗಳು ಕಾಮಗಾರಿ ನಡೆಸಲಾಗುವುದಿಲ್ಲ. ಪ್ರತಿ ವಾರ್ಡಿಯೂ ಒಂದಲ್ಲ ಒಂದು ಸಣ್ಣ ಹೇಳಿಕೆ ಎಂದು ತಾಕತ್ತೆ. ಮುಂದಿನ 36 ಗಂಟೆಯೊಳಗೆ ಕಾಮಗಾರಿ ಕಾರ್ಯಾದೇಶ ನೀಡಬೇಕು' ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪ್ರಕರಣ ರದ್ದಾದರೂ ಸಾಕ್ಷ್ಯ ಜೀವಂತ...!

ವಿಚಾರಣೆ ವೇಳೆ ಮುನಿರಾಜುಗೌಡ ವಿವರಿಸುತ್ತಿದ್ದ ಪ್ರಕರಣಕ್ಕೆ ಪ್ರತಿಕ್ರಿಯಿಸಿದ ಮುನಿರತ್ನ ಪರ ಹಾಜರಿದ್ದ ಹಿರಿಯ ವಕೀಲ ಜಿ.ಕೃಷ್ಣಮೂರ್ತಿ, 'ಈಗಾಗಲೇ ಆ ಕುರಿತ ಆರೋಪದ ಕ್ರಿಮಿನಲ್ ಪ್ರಕರಣ (ಸಿಆರ್‌ಎಲ್‌ಪಿ-8219/2019) ರದ್ದಾಗಿದೆ' ಎಂದು ಅರ್ಜಿದಾರರ ಪರ ವಕೀಲರ ಮಾತಿಗೆ ಪ್ರತಿಕ್ರಿಯಿಸಿದರು. ಇದಕ್ಕೆ ನ್ಯಾಯಪೀಠ, 'ಕ್ರಿಮಿನಲ್ ಪ್ರಕರಣ ರದ್ದಾದರೂ ಸಾಕ್ಷ್ಯ ಜೀವಂತವಾಗಿರುತ್ತದೆ ಎಂಬುದನ್ನು ಮರೆಯಬೇಡಿ' ಎಂದು ಕುಟುಕಿತು.

ನಿಮ್ಮ ಸಾಕ್ಷ್ಯ 'ಮುನಿರತ್ನ ಕುರುಕ್ಷೇತ್ರ'ದಂತಿರಬಾರದು..!

ಮುನಿರಾಜು ಗೌಡ ಹೇಳುತ್ತಿದ್ದ ಸಂಗತಿಗಳ ಬಗ್ಗೆ ನ್ಯಾಯಪೀಠ, 'ನೀವು ನುಡಿಯುವ ಸಾಕ್ಷ್ಯ ಮುನಿರತ್ನ ಕುರುಕ್ಷೇತ್ರ ಸಿನಿಮಾದಂತಿರಬಾರದು. ನೀವು ಹೇಳುವ ಘಟನಾವಳಿಗಳಿಗೆ ಸಂಬಂಧಿಸಿದಂತೆ ಸಮರ್ಥ ಸಾಕ್ಷ್ಯಗಳನ್ನು ನ್ಯಾಯಪೀಠಕ್ಕೆ ಹಾಜರುಪಡಿಸಬೇಕು ಅಥವಾ ನಿಮ್ಮ ದಾವೆಯಲ್ಲಿ ಆ ಕುರಿತು ನಿಖರವಾಗಿ ಉಲ್ಲೇಖಿಸಿರಬೇಕು. ನೀವು ಕೇವಲ ನಿಮ್ಮ ಹೇಳಿಕೆಯನ್ನು ಇಲ್ಲಿ ದಾಖಲಿಸಿಕೊಂಡರೆ ಅದು ಫಲ ನೀಡುವುದಿಲ್ಲ' ಎಂದು ಸೂಕ್ಷ್ಮವಾಗಿ ಎಚ್ಚರಿಸಿತು.

ಹೈಕೋರ್ಟ್: 25ರಿಂದ ಬೇಸಿಗೆ ರಜೆ

ಬೆಂಗಳೂರು: ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠ, ಧಾರವಾಡ ಹಾಗೂ ಕಲಬುರಗಿ ಪೀಠಗಳಿಗೆ ಇದೇ 25ರಿಂದ ಮೇ 21ರವರೆಗೆ ಬೇಸಿಗೆ ರಜೆ ಘೋಷಿಸಲಾಗಿದೆ.

ರಜಾ ಅವಧಿಯಲ್ಲಿ 7 ದಿನ ರಜಾ ಕಾಲದ ನ್ಯಾಯಪೀಠಗಳು ಬೆಂಗಳೂರು ಪ್ರಧಾನ ಪೀಠದಲ್ಲಿ ಕಾರ್ಯ ನಿರ್ವಹಿಸಲಿದ್ದು, ಧಾರವಾಡ ಹಾಗೂ ಕಲಬುರಗಿ ಪೀಠಗಳಲ್ಲಿ ಭೌತಿಕ ವಿಚಾರಣೆ ಇರುವುದಿಲ್ಲ. ಈ ಪೀಠಗಳಲ್ಲಿ ದಾಖಲಾಗುವ ತುರ್ತು ಪ್ರಕರಣಗಳು ಬೆಂಗಳೂರಿನ ಪ್ರಧಾನ ಪೀಠದಲ್ಲಿ ಆನ್‌ಲೈನ್ ಮೂಲಕ ವಿಚಾರಣೆಗೆ ಒಳಪಡಲಿವೆ. ಹೆಚ್ಚಿನ ವಿವರಗಳಿಗೆ HTTPS:// KARNATAKAJUDICIARY.KAR.NIC.IN ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸುದ್ದಿ 2 ನಿಮಿಷ

ದಿನಪೂರ್ತಿ ಹೋಟೆಲ್ ತೆರೆಯಲು ಅವಕಾಶ ನೀಡುವಂತೆ ಮನವಿ

ಬೆಂಗಳೂರು: 'ಹೋಟೆಲ್ ಸೇರಿದಂತೆ ಎಲ್ಲ ವಾಣಿಜ್ಯ ಮಳಿಗೆಗಳನ್ನು ದಿನದ 24 ಗಂಟೆಯೂ ತೆರೆಯಬಹುದು ಎಂದು ಸರ್ಕಾರವೇ ಆದೇಶದಲ್ಲಿ ತಿಳಿಸಿದೆ. ಆದರೆ, ಪೊಲೀಸರು ರಾತ್ರಿ 11ರ ನಂತರ ಹೋಟೆಲ್‌ಗಳನ್ನು ಬಲವಂತವಾಗಿ ಮುಚ್ಚಿಸುತ್ತಿದ್ದಾರೆ. ಪೊಲೀಸ್ ಇಲಾಖೆಯೇ ಒಂದು ಸ್ಪಷ್ಟ ಆದೇಶ ಹೊರಡಿಸಬೇಕು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಪತ್ರ ಬರೆದಿದೆ.

'ಹೋಟೆಲ್‌ಗಳು, ಬೇಕರಿ, ಐಸ್‌ಕ್ರೀಂ ಪಾರ್ಲರ್ ಸೇರಿದಂತೆ ಎಲ್ಲ ರೀತಿಯ ವಾಣಿಜ್ಯ ಮಳಿಗೆಗಳನ್ನು ದಿನವಿಡೀ ತೆರೆಯಬಹುದು ಎಂದು ಸರ್ಕಾರ 2021ರಲ್ಲೇ ಆದೇಶಿಸಿತ್ತು. ಕೋವಿಡ್ ಕಾರಣದಿಂದ ಅದರ ಅನುಷ್ಠಾನ ಸಾಧ್ಯವಾಗಿಲ್ಲ. ಅವಕಾಶವಿದ್ದರೂ ರಾತ್ರಿ ವೇಳೆ ಹೋಟೆಲ್‌ಗಳನ್ನು ಪೊಲೀಸರು ಮುಚ್ಚಿಸುತ್ತಿರುವುದು ಸರಿಯಲ್ಲ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಹೇಳಿದ್ದಾರೆ.

'ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ರಾತ್ರಿ ವೇಳೆ ಸೇವೆ ಒದಗಿಸಲು ಪೊಲೀಸ್ ಇಲಾಖೆಯಿಂದ ಹೊಸ ಆದೇಶ ಹೊರಡಿಸಬೇಕು' ಎಂದೂ ಮನವಿ ಮಾಡಿದ್ದಾರೆ.

ಕನ್ನಡ ಸಂಘಗಳು ಸಾಂಸ್ಕೃತಿಕ ತಿಳಿವಳಿಕೆ ನೀಡಲಿ: ಬರಗೂರು



ಬೆಂಗಳೂರು: 'ಕನ್ನಡ ಕೇಂದ್ರಿತವಾಗಿ ಕೆಲಸ ಮಾಡುತ್ತಿರುವ ಸಂಸ್ಥೆ ಅಥವಾ ಸಂಘಟನೆಗಳ ಅಗತ್ಯ ಹಿಂದಿಗಿಂತಲೂ ಈಗ ಹೆಚ್ಚಿದೆ. ವಿದ್ಯಾರ್ಥಿಗಳು ಮತ್ತು ಹೊರಗಿನವರಿಗೆ ಸಾಂಸ್ಕೃತಿಕ ತಿಳಿವಳಿಕೆ ಕೊಡುವ ಕೆಲಸವನ್ನು ಕಾಲೇಜು ಕನ್ನಡ ಸಂಘಗಳು ಮಾಡಬೇಕಿದೆ' ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಂಗಳವಾರ ಮಾತನಾಡಿದರು.

'ಚಿ.ಶ್ರೀನಿವಾಸರಾಜು ನೇತೃತ್ವದಲ್ಲಿ ಜನ್ಮತಾಳಿದ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಹೆಮ್ಮರವಾಗಿ ಬೆಳೆದಿದೆ. ಕರ್ನಾಟಕದಲ್ಲಿ ಹೆಸರಿಸಬಹುದಾದ ಕೆಲವೇ ಕನ್ನಡ ಸಂಘಗಳಲ್ಲಿ ಇದು ಕೂಡ ಒಂದು. ರಾಜ್ಯದಲ್ಲಿರುವ ಎಲ್ಲ ಕಾಲೇಜುಗಳಲ್ಲಿಯೂ ಕನ್ನಡ ಅಥವಾ ಸಾಂಸ್ಕೃತಿಕ ಸಂಘ ಇರಲೇಬೇಕು. ಆಗ ಅಲ್ಲಿನ ವಿದ್ಯಾರ್ಥಿಗಳಿಗೆ ಪಠ್ಯಬದ್ಧ ವ್ಯಾಸಂಗದ ಆಚೆಗೂ ಬದುಕು ನೋಡುವುದಕ್ಕೆ, ಒಟ್ಟು ಸಾಂಸ್ಕೃತಿಕ ವಲಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯ' ಎಂದರು.

'ಶಿಕ್ಷಣ ತಜ್ಞರ ಜಾಗವನ್ನು ಈಗ ಶಿಕ್ಷಣೋದ್ಯಮಿಗಳು ಆಕ್ರಮಿಸಿಕೊಂಡಿದ್ದಾರೆ. ಎಲ್ಲಿಯವರೆಗೆ ಜ್ಞಾನಮುಖಿ ಶಿಕ್ಷಣವಿರಬೇಕು, ಎಲ್ಲಿಂದ ಉದ್ಯೋಗಮುಖಿ ಶಿಕ್ಷಣವಿರಬೇಕು ಎಂಬ ಚಿಂತನೆ ಮಾಡದೆ, ಏಕಕಾಲದಲ್ಲಿ ಇಡೀ ವ್ಯವಸ್ಥೆಯೊಳಗೆ ಎಲ್ಲವನ್ನೂ ಕೊಡಬೇಕು ಎಂಬ ಕಲಬೆರಕೆ ಪದ್ಧತಿ ತರಲು ಪ್ರಯತ್ನಿಸಲಾಗುತ್ತಿದೆ' ಎಂದು ದೂರಿದರು.

ಸಾಹಿತಿ ಡಾ.ಕೆ.ಮರುಳಸಿದ್ದಪ್ಪ, 'ತಮ್ಮ ಆಡಳಿತ ಭದ್ರಪಡಿಸಿಕೊಳ್ಳಲು ಆಂಗ್ಲರು ಇಂಗ್ಲಿಷ್ ಮಾಧ್ಯಮ ಹೇರಿದರು. ಬರ್ಮಿಂಗ್‌ಹ್ಯಾಮ್‌ನ ಬಟ್ಟೆ ಗಿರಣಿಗಳನ್ನು ಭದ್ರಪಡಿಸುವುದಕ್ಕಾಗಿ ಕೈಮಗ್ಗಗಳನ್ನು ನಾಶಪಡಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಕ್ರೈಸ್ತ ಪಾದ್ರಿಗಳು ನಮ್ಮ ದೇಶದ ಕೆಳಜಾತಿಯ ಜನರಿಗೆ ಆಮಿಷ ಒಡ್ಡಿ ಮತಾಂತರ ಮಾಡಿದ್ದರು. ಇವೆಲ್ಲಾ ಸತ್ಯ ಸಂಗತಿಗಳು. ಇದರ ಜೊತೆಗೆ ಅವರು ಮಾಡಿದ ಒಳ್ಳೆಯ ಕೆಲಸಗಳನ್ನೂ ನಾವು ಸ್ಮರಿಸಬೇಕು' ಎಂದು ಹೇಳಿದರು.

24ರಿಂದ 'ಕರ್ನಾಟಕ ಜನಚೈತನ್ಯ ಯಾತ್ರೆ'

ಬೆಂಗಳೂರು: 'ರಾಜ್ಯದಲ್ಲಿನ ಭ್ರಷ್ಟ ರಾಜಕಾರಣ ಮತ್ತು ದುರಾಡಳಿತದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಏ.24ರಿಂದ ಮೇ 21ರವರೆಗೆ 'ಕರ್ನಾಟಕ ಜನಚೈತನ್ಯ ಯಾತ್ರೆ'ಯನ್ನು ರಾಜ್ಯದಾದ್ಯಂತ ಹಮ್ಮಿಕೊಂಡಿದೆ' ಎಂದು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಎಚ್.ಎಚ್. ಲಿಂಗೇಗೌಡ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ದುರಾಡಳಿತದಿಂದ ರಾಜ್ಯದ ಸ್ಥಿತಿ ಅಧೋಗತಿ ತಲುಪಿದೆ. ಈ ಬಗ್ಗೆ ಜನರನ್ನು ಎಚ್ಚರಗೊಳಿಸುವ ಉದ್ದೇಶದೊಂದಿಗೆ ನಡೆಯುವ ಯಾತ್ರೆಯು ಪಕ್ಷದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ನೇತೃತ್ವದಲ್ಲಿ ಮೊದಲ ಹಂತದಲ್ಲಿ 11 ಜಿಲ್ಲೆಗಳಲ್ಲಿ ಸಾಗಲಿದೆ' ಎಂದರು.

'ಏಪ್ರಿಲ್ 24ರಂದು ಈ ಯಾತ್ರೆಯು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಿಂದ ಆರಂಭಗೊಳ್ಳಲಿದೆ. ಈ ಚಾಲನಾ ಕಾರ್ಯಕ್ರಮದಲ್ಲಿ ಜೆಡಿಯು ಮುಖಂಡ ಮಹಿಮ ಪಟೇಲ್, ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ರಾಜ್ಯ ಘಟಕದ ಅಧ್ಯಕ್ಷ ತಾಹಿರ್ ಹುಸೇನ್ ಸೇರಿದಂತೆ ಸಮಾನ ಮನಸ್ಕ ಪಕ್ಷಗಳ ಮುಖಂಡರು ಭಾಗಹಿಸಲಿದ್ದಾರೆ' ಎಂದರು.

'ಯಾತ್ರೆಯು ಯಲಹಂಕ–ದೊಡ್ಡಬಳ್ಳಾಪುರ ಮಾರ್ಗವಾಗಿ ಗೌರಿಬಿದನೂರು ತಾಲ್ಲೂಕಿನ ವಿಧುರಾಶ್ವತ್ಥ ತಲುಪಲಿದೆ. ಏ.25ರಂದು ಅಲ್ಲಿ ಹುತಾತ್ಮರ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಳಿಕ ಚಿಂತಾಮಣಿ, ಕೋಲಾರ, ಹೊಸಕೋಟೆ, ಆನೇಕಲ್, ರಾಮನಗರ, ಕುಣಿಗಲ್, ಚಾಮರಾಜನಗರ, ಮೈಸೂರು, ಹಾಸನ, ತಿಪಟೂರು, ಹಿರಿಯೂರು, ಶಿರಾ ಮಾರ್ಗವಾಗಿ ಮೇ 21ಕ್ಕೆ ತುಮಕೂರು ತಲುಪಲಿದೆ. ಅಲ್ಲಿ ಸಮಾರೋಪ ಕಾರ್ಯಕ್ರಮ ನಡೆಯಲಿದೆ' ಎಂದು ಮಾಹಿತಿ ನೀಡಿದರು.

15 ವರ್ಷಗಳಿಗೂ ಹೆಚ್ಚು ಒಂದೇ ಕಡೆ ಕೆಲಸ ಮಾಡುತ್ತಿರುವ ಶಿಕ್ಷಕರು

ವರ್ಗಾವಣೆಗೆ ಒತ್ತಾಯಿಸಿ ಶಿಕ್ಷಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹದಿನೈದು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಕಡೆ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಸ್ವಂತ ಜಿಲ್ಲೆ ಅಥವಾ ಪಕ್ಕದ ಜಿಲ್ಲೆಗಳಿಗೆ ವರ್ಗಾವಣೆ ನೀಡಬೇಕು' ಎಂದು ಒತ್ತಾಯಿಸಿ ವರ್ಗಾವಣೆ ವಂಚಿತ ಶಿಕ್ಷಕರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿ ಎದುರು ಸೇರಿದ್ದ ಶಿಕ್ಷಕರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು. 'ವರ್ಗಾವಣೆ ಕೊಡಿ, ಇಲ್ಲವೇ ವಿಷ ಕೊಡಿ', 'ಸೇವಾ ಅವಧಿಯಲ್ಲಿ ಒಮ್ಮೆಯಾದರೂ ಸ್ವಂತ ಜಿಲ್ಲೆಗೆ ವರ್ಗಾವಣೆ ಕೊಡಿ' ಎಂಬ ಬರಹವುಳ್ಳ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'15 ವರ್ಷವಾದರೂ ವರ್ಗಾವಣೆ ಸಿಗದಿದ್ದರಿಂದ ಶಿಕ್ಷಕರು ಹಾಗೂ ಅವರ ಕುಟುಂಬದವರು ಮಾನಸಿಕವಾಗಿ ನೊಂದಿದ್ದಾರೆ. ಕೌಟುಂಬಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ವೃತ್ತಿ ಜೀವನದಲ್ಲಿ ಒಂದು ಸಲವಾದರೂ ಸ್ವಂತ ಜಿಲ್ಲೆ ಅಥವಾ ಪಕ್ಕದ ಜಿಲ್ಲೆಗಳಿಗೆ ವರ್ಗಾವಣೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ವರ್ಗಾವಣೆ ವಂಚಿತ ಶಿಕ್ಷಕರ ಸಂಘ, ಪ್ರೌಢಶಾಲಾ (ಗ್ರಾಮೀಣ) ಶಿಕ್ಷಕರ ಸಂಘದ ಪದಾಧಿಕಾರಿಗಳೂ ಪ್ರತಿಭಟನೆಯಲ್ಲಿದ್ದರು. ಶಾಸಕ ಸತೀಶ ಜಾರಕಿಹೊಳಿ ಭೇಟಿ ನೀಡಿ ಬೆಂಬಲ ಸೂಚಿಸಿದರು.



'ಸ್ವಂತ ಜಿಲ್ಲೆ ಅಥವಾ ಪಕ್ಕದ ಜಿಲ್ಲೆಗಳಿಗೆ ವರ್ಗಾವಣೆ ನೀಡಬೇಕು' ಎಂದು ಒತ್ತಾಯಿಸಿ ನಗರದಲ್ಲಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿ ಎದುರು ಶಿಕ್ಷಕರು ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ವಿಮಾನ ನಿಲ್ದಾಣದಲ್ಲಿ ಎಲೆಕ್ಟ್ರಿಕ್ ಬಸ್

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1 ಮತ್ತು ಟರ್ಮಿನಲ್ 2ರ ನಡುವೆ ಪ್ರಯಾಣಿಕರ ಓಡಾಟಕ್ಕೆ ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಬಿಐಎಎಲ್) ನಿರ್ಧರಿಸಿದೆ.

ಖಾಸಗಿ ಸಹಭಾಗಿತ್ವದಲ್ಲಿ ಬಸ್‌ಗಳನ್ನು ಪಡೆದುಕೊಳ್ಳಲು ಮುಂದಾಗಿದ್ದು, ಆಸಕ್ತ ಕಂಪನಿಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಏ.25ರೊಳಗೆ ಪ್ರಸ್ತಾವನೆ ಸಲ್ಲಿಸಲು ಕಂಪನಿಗಳಿಗೆ ಅವಕಾಶ ಕಲ್ಪಿಸಿದೆ.

'ನಿರಂತರವಾಗಿ ಹೆಚ್ಚಾಗುತ್ತಿರುವ ವಾಯು ಸಾರಿಗೆಯ ಅಗತ್ಯಕ್ಕೆ ತಕ್ಕಂತೆ ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸುವ ಉದ್ದೇಶವಿದೆ' ಎಂದು ಬಿಐಎಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯರಾಜ್ ಷಣ್ಮುಗಂ ತಿಳಿಸಿದರು.

'ನವೀಕರಿಸಬಹುದಾದ ಇಂಧನ ಬಳಕೆ, ಸೌರಶಕ್ತಿ ಮೇಲ್ಛಾವಣಿಗಳ ಅಳವಡಿಕೆ ಮತ್ತು ಪವನ ವಿದ್ಯುತ್ ಖರೀದಿ ಸಂಬಂಧ ಒಪ್ಪಂದಗಳನ್ನು 2020ರ ಡಿಸೆಂಬರ್‌ನಲ್ಲೇ ಮಾಡಿಕೊಳ್ಳಲಾಗಿದೆ. ಇಂಧನ ಉಳಿತಾಯ ಕಾರ್ಯಕ್ರಮದ ಅಡಿಯಲ್ಲಿ 9 ಸಾವಿರ ಮನೆಗಳಿಗೆ ಪೂರೈಕೆ ಮಾಡುವಷ್ಟು ಇಂಧನ ಉಳಿತಾಯ ಮಾಡಲಾಗುತ್ತಿದೆ' ಎಂದು ಅವರು ಹೇಳಿದರು.

24ಕ್ಕೆ 'ಸ್ವರಾನುಭೂತಿ'

ಬೆಂಗಳೂರು: ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ರೋಗಿಗಳಿಗೆ ನೆರವಾಗುವ ಉದ್ದೇಶದಿಂದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಇದೇ 24 ರಂದು 'ಸ್ವರಾನುಭೂತಿ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಎಸ್‌ವಿವೈಎಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಎಸ್.ಕುಮಾರ ಅವರು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಈ ಕುರಿತು ಮಾಹಿತಿ ನೀಡಿದರು.

'ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಸಮಾರಂಭ ನಿಗದಿಯಾಗಿದೆ. ಗಾಯಕ ರಾಜೇಶ್ ಕೃಷ್ಣನ್ ಸಂಜೆ 5.30 ರಿಂದ 8.30ರವರೆಗೆ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ' ಎಂದು ತಿಳಿಸಿದರು.

'ಈ ಕಾರ್ಯಕ್ರಮದಿಂದ ಸಂಗ್ರಹವಾಗುವ ಹಣವನ್ನು ಕ್ಯಾನ್ಸರ್, ಏಡ್ಸ್, ಪಾರ್ಶ್ವವಾಯು ಸೇರಿದಂತೆ ಇತರೆ ಕಾಯಿಲೆಗಳಿಂದ ಬಳಲುತ್ತಿರುವವರ ಆರೈಕೆಗಾಗಿ ಅವರ ಕುಟುಂಬದವರಿಗೆ ವಿತರಿಸಲಾಗುತ್ತದೆ' ಎಂದು ಹೇಳಿದರು.

ಭಾರತದ ಜಿಡಿಪಿ ಬೆಳವಣಿಗೆ ಶೇ 8.2 ರಷ್ಟು: ಐಎಂಎಫ್

ವಾಷಿಂಗ್ಟನ್ (ಪಿಟಿಐ): 2022ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು ಶೇಕಡ 8.2ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜು ಮಾಡಿದೆ.

ಈ ಪ್ರಮಾಣದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಕಂಡರೆ, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಂಡ ಹೆಗ್ಗಳಿಕೆ ಭಾರತದ್ದು..

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಬೆಂಗಳೂರು: ಕೆಎಎಸ್, ಪಿಎಸ್‌ಐ, ಎಫ್‌ಡಿಎ ಮತ್ತು ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ಆರ್.ಎಲ್. ಜಾಲಪ್ಪ ಅಕಾಡೆಮಿ ಮೇ 5ರಿಂದ ಆರಂಭಿಸಲಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಆಸಕ್ತ ಬಡ ಮತ್ತು ಗ್ರಾಮೀಣ ಯುವಕ–ಯುವತಿಯರು www.rljacademy.in ವೆಬ್‌ಸೈಟ್‌ನಲ್ಲಿ ಮೇ 1ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 9900606042, 9731480759, 9902004438 ಸಂಪರ್ಕಿಸಲು ಅಕಾಡೆಮಿ ಕೋರಿದೆ

'ಸಂಪಿಗೆ ರಸ್ತೆ: ವೈಟ್‌ಟಾಪಿಂಗ್ 15 ದಿನಗಳಲ್ಲಿ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯ ವೈಟ್‌ಟಾಪಿಂಗ್ ಕಾಮಗಾರಿ 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಸಂಪಿಗೆ ರಸ್ತೆಯಲ್ಲಿ ಕಾಮಗಾರಿಯನ್ನು 15 ದಿನಗಳ ಹಿಂದೆ ಆರಂಭಿಸಲಾಗಿದೆ. ಕಾಂಕ್ರೀಟೀಕೃತ ರಸ್ತೆಯ ಕ್ಯೂರಿಂಗ್ ಅವಧಿ ಪೂರ್ಣಗೊಂಡಿದೆ. ಅಂತಿಮ ಸ್ಪರ್ಶ ನೀಡುವ ಕೆಲಸ ಬಾಕಿ ಇದ್ದು, ಅವುಗಳು 15 ದಿನಗಳಲ್ಲಿ ಪೂರ್ಣಗೊಳ್ಳಲಿವೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಮಲ್ಲೇಶ್ವರದಲ್ಲಿ ಜಲಮಂಡಳಿಯವರು ಕುಡಿಯುವ ನೀರು ಪೂರೈಕೆಯ ಹಳೆಯ ಕೊಳವೆಗಳನ್ನು ಬದಲಾಯಿಸುತ್ತಿದ್ದಾರೆ. ಈ ಕಾರ್ಯವೂ ಶೀಘ್ರವೇ ಪೂರ್ಣಗೊಳ್ಳಲಿದೆ. ಬಳಿಕ ಮಲ್ಲೇಶ್ವರ ಎಲ್ಲ ರಸ್ತೆ ಸುಸ್ಥಿತಿಗೆ ತರುವ ಕೆಲಸವನ್ನು ಯುದ್ಧೋಪಾದಿಯಲ್ಲಿ ನಿರ್ವಹಿಸಲಿದ್ದೇವೆ' ಎಂದರು.

7 ಕೆ.ಜಿ. ಚಿನ್ನಾಭರಣ ವಶ

ರಾಮನಗರ: ಕನಕಪುರ ಟಿಎಪಿಸಿಎಂಎಸ್‌ನ ಮರಳವಾಡಿ ಶಾಖೆಯಲ್ಲಿ ರೈತರು ಒತ್ತೆ ಇಟ್ಟ ಚಿನ್ನ ನಾಪತ್ತೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ಬರೋಬ್ಬರಿ ₹ 3.37 ಕೋಟಿ ಮೌಲ್ಯದ 7 ಕೆ.ಜಿ. 113 ಗ್ರಾಂ ತೂಕದ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ. 'ಟಿಎಪಿಸಿಎಂಎಸ್ ಮರಳವಾಡಿ ಶಾಖೆಯಲ್ಲಿ ರೈತರು ಅಡವಿಟ್ಟಿದ್ದ ಚಿನ್ನ ನಾಪತ್ತೆಯಾಗಿರುವ ಕುರಿತು ಪೊಲೀಸರಿಗೆ ದೂರು ನೀಡಿದ್ದರು' ಎಂದು ಜಿಲ್ಲಾ ಪೊಲೀಸ್ ಕೆ. ಸಂತೋಷ್ ಬಾಬು ಹೇಳಿದರು.



ನಗರದ ಎನ್‌ಜಿ.ಒ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಲ್‌.ಮಂಜುನಾಥ್ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಎಸ್‌.ಸುಜಾತ, ಹಿರಿಯ ವಕೀಲ ಉದಯ್ ಹೊಳ್ಳ, ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರು, ದಿವಂಗತ ನ್ಯಾಯಮೂರ್ತಿ ಕೆ.ಎಲ್‌.ಮಂಜುನಾಥ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಸಾರ್ವಜನಿಕರ ಕ್ಷಮೆ ಕೇಳಿದ ಬ್ರಿಟನ್ ಪ್ರಧಾನಿ



ಬೋರಿಸ್ ಜಾನ್ಸನ್

ಲಂಡನ್ (ಎಪಿ): ಲಾಕ್‌ಡೌನ್ ಸಂದರ್ಭದಲ್ಲಿ ಪಾರ್ಟಿ ಮಾಡಿ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಕ್ಕೆ ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಹೃದಯಪೂರ್ವಕವಾಗಿ ಸಾರ್ವಜನಿಕರ ಕ್ಷಮೆ ಕೇಳಿದ್ದಾರೆ. ಸಂಸತ್‌ನಲ್ಲಿ ಮಾತನಾಡಿದ ಅವರು, ಹುಟ್ಟುಹಬ್ಬದ ಪಾರ್ಟಿಯಲ್ಲಿ ಉದ್ದೇಶ ಪೂರ್ವಕವಾಗಿ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿಲ್ಲ' ಎಂದು ಹೇಳಿದ್ದಾರೆ.

ಸಂಗೀತೋತ್ಸವ: ಸಾಧಕರಿಗೆ ಪ್ರಶಸ್ತಿ

ಬೆಂಗಳೂರು: ಶ್ರೀರಾಮ ಲಲಿತ ಕಲಾ ಮಂದಿರದ ಸಂಸ್ಥಾಪಕ ಜಿ.ವೇದಾಂತ ಅಯ್ಯಂಗಾರ್ ಅವರ 60ನೇ ಪುಣ್ಯ ಸ್ಮರಣೆ ಮತ್ತು ವಾರ್ಷಿಕ ಸಂಗೀತೋತ್ಸವ ನಗರದ ಗಾಯನ ಸಮಾಜ ಸಭಾಂಗಣದಲ್ಲಿ ಮೇ 3ರಿಂದ 15ರವರೆಗೆ ನಡೆಯಲಿದೆ. ಹಲವು ಖ್ಯಾತ ಕಲಾವಿದರು ಸಂಗೀತೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಸಾಧಕರಿಗೆ ಪ್ರಶಸ್ತಿ: ಮೇ 8ರಂದು 'ಸಂಗೀತ ವೇದಾಂತ ಧುರೀಣ' ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಡಾ. ಜಯಂತಿ ಕುಮರೇಶ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ₹1 ಲಕ್ಷ ನಗದು ಮತ್ತು ಬೆಳ್ಳಿ ಪದಕವನ್ನು ಈ ಪ್ರಶಸ್ತಿ ಒಳಗೊಂಡಿದೆ.

'ರಾಗ ಲಯ ಪ್ರಭ' ಪ್ರಶಸ್ತಿಗೆ ಕಲಾವಿದರಾದ ರಾಹುಲ್ ವೆಲ್ಲಾಳ, ಐಶ್ವರ್ಯ ಮಣಿಕರ್ಣಿಕೆ, ಅನೂರ್ ವಿನೋದ್ ಶ್ಯಾಮ್, ಸೋಮಶೇಖರ ಜೋಯಿಸ್, ವಿವೇಕ್ ಸದಾಶಿವಂ, ಸ್ಫೂರ್ತಿ ರಾವ್, ವಿಷ್ಣು ವೆಂಕಟರಾಮ್, ಭಾಗ್ಯಲಕ್ಷ್ಮಿ ಎಂ. ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಒಳಗೊಂಡಿದೆ.

'ಪಲ್ಲವಿ ಸಮ್ಮೇಳ' ಪ್ರಶಸ್ತಿಯಲ್ಲಿ ಮೊದಲ ಬಹುಮಾನಕ್ಕೆ ಎ.ಅದಿತಿ ಪ್ರಹ್ಲಾದ್ ಆಯ್ಕೆಯಾಗಿದ್ದು, ₹25 ಸಾವಿರ ನಗದು ಒಳಗೊಂಡ ಪ್ರಶಸ್ತಿ ಇದಾಗಿದೆ. ದ್ವಿತೀಯ ಬಹುಮಾನಕ್ಕೆ ಆರ್.ಲಕ್ಷ್ಮಿ ಪ್ರಿಯಾ ಆಯ್ಕೆಯಾಗಿದ್ದಾರೆ. ತೀರ್ಪುಗಾರರ ವಿಶೇಷ ಬಹುಮಾನಕ್ಕೆ ಐಶ್ವರ್ಯ ಮಣಿಕರ್ಣಿಕೆ, ಧನುಷ್ ಅನಂತರಾಮನ್ ಆಯ್ಕೆಯಾಗಿದ್ದಾರೆ ಎಂದು ಶ್ರೀರಾಮ ಲಲಿತ ಕಲಾ ಮಂದಿರ ತಿಳಿಸಿದೆ.

ನಗರದಲ್ಲಿ ಇಂದು

ಮಕ್ಕಳ ಬೇಸಿಗೆ ಶಿಬಿರ: ಉದ್ಘಾಟನೆ–ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ–ವಿ.ಕೃಷ್ಣಮೂರ್ತಿ, ಆಯೋಜನೆ–ರಂಗೋತ್ರಿ, ಸ್ಥಳ–ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ಕೊಡಿಗೇಹಳ್ಳಿ, ಬೆಳಿಗ್ಗೆ 10

ಪುಸ್ತಕಗಳ ಬಿಡುಗಡೆ ಮತ್ತು ಸ್ವಾತಂತ್ರ್ಯ ಅಮೃತಮಹೋತ್ಸವದ ಗೋಷ್ಠಿ: ಸಚಿವ ವಿ.ಸುನೀಲ್ ಕುಮಾರ್, ಅತಿಥಿ–ಬಾಬು ಕೃಷ್ಣಮೂರ್ತಿ, ಉಪನ್ಯಾಸ–ಎಂ.ಕೊಟ್ರೇಶ್, ಕರುಣಾಕರ ನಿಡಿಂಜಿ, ಅಧ್ಯಕ್ಷತೆ–ಅಜಕ್ಕಳ ಗಿರೀಶ ಭಟ್, ಆಯೋಜನೆ–ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ–ನಯನ ಸಭಾಂಗಣ, ಬೆಳಿಗ್ಗೆ 11

ಎಂ.ಎಸ್.ರಾಮಯ್ಯ ಅವರ ಜನ್ಮಶತಮಾನೋತ್ಸವ: ಅತಿಥಿಗಳು–ಬ್ರಿಗೇಡಿಯರ್ ದೀಪೇಂದ್ರ ರಾವತ್, ಎಂ.ಬಿ.ಶಶಿಧರ್, ಆಯೋಜನೆ–ಎಂ.ಎಸ್. ರಾಮಯ್ಯ ಪ್ರತಿಷ್ಠಾನ, ಸ್ಥಳ–ಪ್ರತಿಷ್ಠಾನದ ಕಚೇರಿ, ಎಂ.ಎಸ್.ರಾಮಯ್ಯ ರಸ್ತೆ, ಗೋಕುಲ ಎಕ್ಸ್‌ಟೆನ್ಷನ್, ಬೆಳಿಗ್ಗೆ 11

ಕನ್ನಡ ಬಾವುಟ ಹಾರಿಸಿದವರು ನೆನೆಪಿನ ಮಾಲೆ: ಭಾಗವಹಿಸುವವರು–ತಿ.ತಾ. ಶರ್ಮ, ತ.ರಾ.ಸುಬ್ಬರಾವ್, ಜಾರ್ಜ್ ಫರ್ಡಿನೆಂಡ್ ಕಿಟ್ಟೆಲ್, ಅಧ್ಯಕ್ಷತೆ–ಕೆ.ಈ.ರಾಧಾಕೃಷ್ಣ, ನುಡಿನಮನ–ಎನ್. ಎಸ್.ಶ್ರೀಧರ ಮೂರ್ತಿ, ರುದ್ರೇಶ್ ಅಂದರಗಿ, ರಾ.ನಂ.ಚಂದ್ರಶೇಖರ, ವ.ಚ.ಚನ್ನೇಗೌಡ, ಆಯೋಜನೆ–ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ–ಬಿಎಂಶ್ರೀ ಪ್ರತಿಮೆ ಎದುರು, ಬಸವನಗುಡಿ, ಬೆಳಿಗ್ಗೆ 11

ಅಗ್ನಿ ಅನಾಹುತಗಳನ್ನು ತಡೆಗಟ್ಟುವ ಬಗ್ಗೆ ಜಾಗೃತಿಗಾಗಿ ಕಾಲ್ನಡಿಗೆ ಜಾಥಾಗೆ ಚಾಲನೆ: ಅಮರ್ ಕುಮಾರ್ ಪಾಂಡೆ, ಸ್ಥಳ–ಮಹಾತ್ಮ ಗಾಂಧಿ ವೃತ್ತದಿಂದ ಟ್ರಿನಿಟಿ ವೃತ್ತ, ಗುರುದ್ವಾರ ರಸ್ತೆ, ಗಂಗಾಧರ ಚೆಟ್ಟಿ ರಸ್ತೆ ಮೂಲಕ ಅಣ್ಣಸ್ವಾಮಿ ಮೊದಲಿಯಾರ್ ರಸ್ತೆಯ ಅಗ್ನಿಶಾಮಕ ತುರ್ತು ಸೇವೆಗಳ ಇಲಾಖೆಯ ನಿರ್ದೇಶನಾಲಯದವರೆಗೆ, ಆಯೋಜನೆ–ಕರ್ನಾಟಕ ಅಗ್ನಿ ಶಾಮಕ ಇಲಾಖೆ, ಮಧ್ಯಾಹ್ನ 12

'ನ್ಯಾಯಕ್ಕೆ ಅಸಮಾನತೆ: ಹೊಸ ಭಾರತದಲ್ಲಿ ಉದಯೋನ್ಮುಖ ಪ್ರವೃತ್ತಿಗಳು' ಚರ್ಚೆ: ಅತಿಥಿಗಳು–ಪ್ರೊ. ರಾಕೇಶ್ ಸಿನ್ಹ, ವಿ.ನಾಗರಾಜ್, ಎ.ವಿ. ಚಂದ್ರಶೇಖರ, ಕೆ.ಸಿ.ರಾಮಮೂರ್ತಿ, ಆಯೋಜನೆ–ಸಿಎಂಆರ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಸ್ಟಡೀಸ್ ಆನ್ ನ್ಯೂ ಇಂಡಿಯ, ಸ್ಥಳ–ಎ. ವಿ.ಹಾಲ್, ವಿಶ್ವವಿದ್ಯಾಲಯದ ಆವರಣ, ಒಎಂಬಿಆರ್ ಬಡಾವಣೆ, ಮಧ್ಯಾಹ್ನ 3

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ಫಾಲ್ಘಾಟ್ ರಾಮಪ್ರಸಾದ್, ಎಲ್.ರಾಮಕೃಷ್ಣನ್, ಬೆಂಗಳೂರು ವಿ.ಪ್ರವೀಣ್, ಭಾರದ್ವಾಜ್ ಶಥವಲ್ಲಿ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ಆಗ್ರಹ ಮಂಡನೆ ಮತ್ತು ಸಮಾಲೋಚನಾ ಸಭೆ: ಆಯೋಜನೆ–ಜಾಗೃತ ಕರ್ನಾಟಕ, ಸ್ಥಳ–ಅಲುಮ್ನಿ ಹಾಲ್, ಯುವಿಸಿಇ, ಕೆ.ಆರ್.ವೃತ್ತ, ಸಂಜೆ 5

ಬಿ.ಆರ್.ಅಂಬೇಡ್ಕರ್ ಜಯಂತಿ: ಉದ್ಘಾಟನೆ–ಜ್ಞಾನಪ್ರಕಾಶ ಸ್ವಾಮೀಜಿ, ಅತಿಥಿಗಳು–ನಟರಾಜ ಹುಳಿಯಾರ್, ಕೆ.ಎನ್.ಲತಾ ಕುಮಾರಿ, ಆಯೋಜನೆ–ರಾಜ್ಯ ಸರ್ಕಾರಿ ಎಸ್.ಸಿ–ಎಸ್.ಟಿ ನೌಕರರ ಸಮನ್ವಯ ಸಮಿತಿ, ಸ್ಥಳ–ಕೊಂಡಜ್ಜಿ ಸಭಾಂಗಣ, ಅರಮನೆ ರಸ್ತೆ, ಸಂಜೆ 5

ಸ್ಮಾರ್ಟ್ ಹೆಲ್ಪಿಂಗ್ ಹ್ಯಾಂಡ್ ಆ್ಯಪ್ ಬಿಡುಗಡೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಅತಿಥಿಗಳು–ಯು.ಬಿ. ವೆಂಕಟೇಶ್, ಆರ್.ಮದನ್, ಕೋಡ್ಲು ರಾಮಕೃಷ್ಣ, ಆಯೋಜನೆ–ಶಾರದಾಂಬ ಎಜುಕೇಷನಲ್ ಸರ್ವೀಸಸ್, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6

ಪ್ರೆಸ್‌ಕ್ಲಬ್ ಆವರಣದಲ್ಲಿರುವ ನವೀಕೃತ ನೆಟ್ಟಕಲ್ಲಪ್ಪ ಹಾಲ್, ಮಾಧ್ಯಮ ಕೇಂದ್ರ, ಡಿಜಿಟಲ್ ಗ್ರಂಥಾಲಯ, ಫ್ಯಾಮಿಲಿ ಲಾಂಜ್ ಉದ್ಘಾಟನೆ: ಅತಿಥಿಗಳು–ಸಚಿವ ಸಿ.ಸಿ.ಪಾಟೀಲ, ಸಂಸದ ಪಿ.ಸಿ.ಮೋಹನ್, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್ ಕುಮಾರ್, ಪತ್ರಕರ್ತ ಟಿಜೆಎಸ್ ಜಾರ್ಜ್, ಸತೀಶ್ ಕುಮಾರ್ ಹೊಸಮನಿ, ಸ್ಥಳ–ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನದ ಆವರಣ, ಸಂಜೆ 6

ಹಲವು ಅನುಮಾನಗಳಿಗೆ ಕಾರಣವಾದ ಡಿ.ಸಿ.ಬಿಲ್

ಪಾವತಿ ತಂತ್ರಾಂಶದಲ್ಲಿ ದಾಖಲಾತಿ ನಾಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು 2022ರ ಏಪ್ರಿಲ್ 1ರ ನಂತರ ₹ 53.67 ಕೋಟಿಗಳಷ್ಟು ಡಿ.ಸಿ ಬಿಲ್‌ಗಳನ್ನು ಪಾವತಿ ಮಾಡಿದೆ. ಆದರೆ, ಅದರಲ್ಲಿ ಬಹುತೇಕ ಬಿಲ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ (ಐಎಫ್‌ಎಂಎಸ್) ಅಪ್‌ಲೋಡ್ ಮಾಡಿಲ್ಲ.

ಯಾರಿಗೆ ಬಿಲ್ ಪಾವತಿಸಲಾಗಿದೆ, ಬಿಲ್ಲಿನ ಪ್ರತಿ, ಅದಕ್ಕೆ ಎಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸಲಾಗಿದೆ... ಮುಂತಾದ ಯಾವುದೇ ವಿವರಗಳೂ ಐಎಫ್‌ಎಂಎಸ್‌ನಲ್ಲಿ ಲಭ್ಯ ಇಲ್ಲ. ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಬೇರೆ ಬೇರೆ ಪಿ–ಕೋಡ್‌ಗಳಿಗೆ ಸಂಬಂಧಿಸಿ ಡಿ.ಸಿ. ಬಿಲ್‌ಗಳ ಪಾವತಿಗೆ ವಲಯ ಮಟ್ಟದ ಅಧಿಕಾರಿಗಳ ಹಂತದಲ್ಲಿ ಕ್ರಮಕೈಗೊಳ್ಳಲಾಗಿದೆ. ಉದಾಹರಣೆಗೆ ಪಿ–2021 ಕೋಡ್ ಅಡಿ ಭೂಮಿ ಖರೀದಿ, ಅಂಬೇಡ್ಕರ್ ಭವನ ನಿರ್ಮಾಣ, ಮನೆ ನಿರ್ಮಾಣ, ಹಾಸ್ಟೆಲ್‌ಗಳ ನಿರ್ಮಾಣದ ಕಾರಣಕ್ಕೆ ಬಿಲ್ ಪಾವತಿ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವ್ಯಕ್ತಿಗತ ಸಹಾಯಧನ ನೀಡುವುದಕ್ಕೆ ಸಂಬಂಧಿಸಿದ ಪಿ– ಕೋಡ್ ಇದು. ಈ ಪಿ ಕೋಡ್ ಅಡಿ ಪಾವತಿಸಿದ ಎಲ್ಲ ಬಿಲ್‌ಗಳು ₹ 1.5 ಲಕ್ಷ, ₹ 2 ಲಕ್ಷ , ₹ 3 ಲಕ್ಷ, ₹ 4.5 ಲಕ್ಷ, ₹ 5 ಲಕ್ಷ.... ಹೀಗೆ ಎಲ್ಲ ಮೊತ್ತಗಳೂ ಪೂರ್ಣ ಸಂಖ್ಯೆಯಲ್ಲಿವೆ. ಆದರೆ, ಆ ಬಿಲ್ ಯಾರಿಗೆ ಪಾವತಿ ಆಗಿದೆ ಎಂಬ ವಿವರಗಳೇ ಐಎಫ್‌ಎಂಎಸ್‌ನಲ್ಲಿ ಇಲ್ಲ.

‘ಈ ಹಿಂದೆ ಎಲ್ಲ ಬಿಲ್‌ಗಳನ್ನು ಬಟವಾಡೆ ಅಧಿಕಾರಿಗಳೇ ಪಾವತಿ ಮಾಡುತ್ತಿದ್ದರು. ಈಗ ಬಿಲ್ ಪಾವತಿಯಲ್ಲಿ ಪಾರದರ್ಶಕತೆ ತರಲೆಂದೇ ಐಎಫ್‌ಎಂಎಸ್ ತಂತ್ರಾಂಶ ರೂಪಿಸಲಾಗಿದೆ. ಬಿಲ್ಲಿಗೆ ಸಂಬಂಧಿಸಿದ ದಾಖಲಾತಿಗಳನ್ನು ಐಎಫ್‌ಎಂಎಸ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ. ಬಿಲ್‌ಗಳಿಗೆ ಸಂಬಂಧಿಸಿ ಜಿಎಸ್‌ಟಿ ವಿವರಗಳೂ ಇಲ್ಲದಿದ್ದರೆ ಅನುಮಾನ ಮೂಡುವುದು ಸಹಜ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪರಿಶೀಲನೆಯ ಭರವಸೆ: ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ವಿಶೇಷ ಆಯುಕ್ತರಾದ (ಹಣಕಾಸು) ತುಳಸಿ ಮದ್ದಿನೇನಿ, ‘ಬಿಲ್‌ಗಳಿಗೆ ಸಂಬಂಧಿಸಿದ ಎಲ್ಲ ದಾಖಲಾತಿಗಳನ್ನೂ ಐಎಫ್‌ಎಂಎಸ್‌ನಲ್ಲೂ ಅಪ್‌ಲೋಡ್ ಮಾಡಲಾಗುತ್ತದೆ. ಕೆಲವು ಬಿಲ್‌ಗಳಿಗೆ ಕಾರ್ಯಾದೇಶದ ವಿವರ ನೀಡಲಾಗುವುದಿಲ್ಲ. ಉದಾಹರಣೆಗೆ ವಿದ್ಯುತ್ ಬಿಲ್ ಇದ್ದರೆ, ಬಿಲ್ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ’ ಎಂದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಕಲ್ಯಾಣ ಕಾರ್ಯಕ್ರಮಗಳಡಿ ನೀಡುವ ಒಂಟಿ ಮನೆಗಳ ಬಿಲ್ ಪಾವತಿಗೆ ಮೊದಲು ಬಿಲ್ ಮಾತ್ರ ನಮೂದಿಸುತ್ತಿದ್ದರು. ಏಪ್ರಿಲ್ 1ರಿಂದ ಒಂಟಿ ಮನೆಗೆ ಬಿಲ್ ಪಾವತಿ ಮಾಡಬೇಕಿದ್ದರೆ, ಮನೆಯ ಛಾಯಾಚಿತ್ರವನ್ನೂ ಅಪ್‌ಲೋಡ್ ಮಾಡುವುದನ್ನು ಕಡ್ಡಾಯ ಮಾಡಿದ್ದೇವೆ. ಇದು ಪಾಲನೆ ಆಗುತ್ತಿದೆಯೋ ಇಲ್ಲವೋ ಎಂದು ಪರಿಶೀಲಿಸುತ್ತೇನೆ’ ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- 2022ರ ಏಪ್ರಿಲ್ 1ರ ಬಳಿಕ ₹ 53.67 ಕೋಟಿಗಳಷ್ಟು ಡಿ.ಸಿ ಬಿಲ್ ಪಾವತಿ
- ಯಾವುದೇ ಬಿಲ್ ವಿವರಗಳು ಐಎಫ್‌ಎಂಎಸ್‌ನಲ್ಲಿ ಲಭ್ಯವಿಲ್ಲ

ಎಸಿಎಸ್ ಪತ್ರ ಬರೆದರೂ ಕ್ರಮವಿಲ್ಲ

ಬೆಂಗಳೂರು: ಕಡತ ವಿಲೇವಾರಿ ವಿಳಂಬ ಹಾಗೂ ಸರ್ಕಾರಿ ನೌಕರರ ತರವಲ್ಲದ ವರ್ತನೆ ತೋರಿದ ಆರೋಪ ಎದುರಿಸುತ್ತಿರುವ ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ–3 ಎಲಿಷ ಆ್ಯಂಡ್ರೂಸ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ರಾಕೇಶ್ ಸಿಂಗ್ ಅವರು ಪತ್ರ ಬರೆದು ಎರಡು ವಾರ ಕಳೆದರೂ ಸರ್ಕಾರ ಕ್ರಮ ಕೈಗೊಂಡಿಲ್ಲ.

ಎಲಿಷ ಆ್ಯಂಡ್ರೂಸ್ ಅವರನ್ನು ಅಮಾನತು ಮಾಡುವಂತೆ ಶಿಫಾರಸು ಮಾಡಿ ಎಸಿಎಸ್ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗೆ 2022ರ ಏ.4ರಂದು ಪತ್ರ ಬರೆದಿದ್ದರು. ಬಿಜೆಪಿಯ ಹಿರಿಯ ನಾಯಕರೊಬ್ಬರ ಒತ್ತಡಕ್ಕೆ ಮಣಿದು ಕ್ರಮ ಕೈಗೊಳ್ಳಲು ಸರ್ಕಾರ ಹಿಂದೇಟು ಹಾಕುತ್ತಿದೆ ಎಂದು ರಾಜ್ಯ ಸರ್ಕಾರದ ಮೂಲಗಳು ತಿಳಿಸಿವೆ.

‘ಕಡತಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡುವಂತೆ ಪದೇ ಪದೇ ನಿರ್ದೇಶನ ನೀಡಿದ್ದರೂ ಎಲಿಷ ಕಡೆಗಣಿಸುವ ಮೂಲಕ ಕರ್ತವ್ಯ ಲೋಪ ಎಸಗಿದ್ದಾರೆ.ಅವರನ್ನು ಅಮಾನತುಗೊಳಿಸಿ, ತಕ್ಷಣದಿಂದಲೇ ಇಲಾಖಾ ವಿಚಾರಣೆ ಆರಂಭಿಸಬೇಕು ಬೇಕು’ ಎಂದೂ ಎಸಿಎಸ್ ಒತ್ತಾಯಿಸಿದ್ದರು.

ಬಾಲಭವನದಲ್ಲಿ ನಾಳೆಯಿಂದ ಶಿಬಿರ ನಡೆಸಲು ಸಿದ್ಧತೆ

ಮತ್ತೆ ‘ಬೇಸಿಗೆ ಶಿಬಿರ’ದ ರಂಗು

• ಮನೋಹರ್ ಎಂ.

ಬೆಂಗಳೂರು: ಬೇಸಿಗೆ ರಜೆಯಲ್ಲಿರುವ ಚಿಣ್ಣರಿಗಾಗಿ ಬಾಲಭವನದ ‘ಬೇಸಿಗೆ ಶಿಬಿರ’ ಮತ್ತೆ ಬಂದಿದೆ. ಮೂರು ವರ್ಷಗಳಿಂದ ನಿಂತಿದ್ದ ಶಿಬಿರವು ಏಪ್ರಿಲ್ 21ರಿಂದ ಆರಂಭವಾಗಲಿದೆ.

ಕಬ್ಬನ್ ಉದ್ಯಾನದಲ್ಲಿರುವ ಬಾಲಭವನ ಮಕ್ಕಳ ಆಕರ್ಷಣೆ ಕೇಂದ್ರ. ಬೇಸಿಗೆ ಬಂತೆಂದರೆ, ಇಲ್ಲಿ ಪ್ರತಿನಿತ್ಯ ಚಿಣ್ಣರ ಕಲರವ ಮೊಳಗುತ್ತಿತ್ತು. ಬಾಲಭವನದ ವತಿಯಿಂದ ಮಕ್ಕಳಿಗೆಂದೇ ಬೇಸಿಗೆ ಯಲ್ಲಿ ವಿಶೇಷ ಶಿಬಿರ ಆಯೋಜಿಸಲಾಗುತ್ತಿತ್ತು.

ಕೋವಿಡ್‌ನ ಅಡ್ಡಿಯೂ ಸೇರಿದಂತೆ ಹಲವು ಕಾರಣಗಳಿಂದ ಎರಡು ವರ್ಷಗಳಲ್ಲಿ ಶಿಬಿರ ಆಯೋಜನೆ ಸಾಧ್ಯವಾಗಿರಲಿಲ್ಲ. ಇದರಿಂದ ಚಿಣ್ಣರಿಲ್ಲದೆ ಭಣಗುಡುತ್ತಿದ್ದ ಬಾಲಭವನದಲ್ಲಿ ಮತ್ತೆ ಮಕ್ಕಳ ಆಟದ ಕೇಕೆ ಕೇಳಿ ಬರಲಿದೆ.

ಬಾಲಭವನದವರು ಈ ಬಾರಿ ಬೇಸಿಗೆ ಶಿಬಿರಕ್ಕೆ ಬರುವ ಮಕ್ಕಳನ್ನು ರಂಜಿಸಲು ವಿಶೇಷ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಒಟ್ಟು 20 ದಿನಗಳವರೆಗೆ ಶಿಬಿರ ನಡೆಯಲಿದೆ.



ಬಾಲಭವನದಲ್ಲಿ ಬೇಸಿಗೆ ಶಿಬಿರ (ಸಾಂದರ್ಭಿಕ ಚಿತ್ರ)

ಅಂಗವಿಕಲ ಮಕ್ಕಳಿಗೆ ಉಚಿತ ಪ್ರವೇಶ



‘ಬೇಸಿಗೆ ಶಿಬಿರಕ್ಕೆ ನಿಗದಿತ ಶುಲ್ಕ ಇರಲಿದೆ. ಅಂಗವಿಕಲ ಮಕ್ಕಳು, ಸೌಲಭ್ಯ ವಂಚಿತರು, ಬಾಲಮಂದಿರದ ಮಕ್ಕಳು ಮತ್ತು ಕೊಳೆಗೇರಿ ಮಕ್ಕಳು ಶಿಬಿರದಲ್ಲಿ ಉಚಿತವಾಗಿ ಭಾಗವಹಿಸಬಹುದು. ಸರ್ಕಾರಿ ಶಾಲಾ ಮಕ್ಕಳಿಗೆ ಶುಲ್ಕದಲ್ಲಿ ಶೇ 50ರಷ್ಟು ರಿಯಾಯಿತಿ ಇರಲಿದೆ’ ಎಂದು ಚಿಕ್ಕಮ್ಮ ಬಸವರಾಜ್ ಅವರು ಮಾಹಿತಿ ನೀಡಿದರು.

‘ಶಿಬಿರದಲ್ಲಿ ಚಿತ್ರಕಲೆ, ಕರಕುಶಲ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಮೂಹ ಗೀತೆ, ಕರಾಟೆ, ಯೋಗ, ತಬಲಾ ವಾದನ, ಕೀಬೋರ್ಡ್, ಯಕ್ಷಗಾನ, ರಂಗ ತರಬೇತಿ, ಆಭರಣ ತಯಾರಿ, ಮೆಹೆಂದಿ, ಮಡಿಕೆ ಮೇಲೆ ಚಿತ್ರ ರಚನೆ ಸೇರಿದಂತೆ ವಿವಿಧ ಕಲೆಗಳ ಕುರಿತು ಅನುಭವಿ ಬೋಧಕರಿಂದಲೇ ತರಬೇತಿ ನೀಡಲಿದ್ದೇವೆ’ ಎಂದು ಜವಾಹರ ಬಾಲಭವನ ಸೊಸೈಟಿಯ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಬ್ಬನ್ ಉದ್ಯಾನದ ಬಾಲಭವನವೂ ಸೇರಿದಂತೆ ರಾಜಾಜಿನಗರ, ಎಚ್.ಎಸ್.ಆರ್. ಬಡಾವಣೆ ಹಾಗೂ ಕೋಲ್ಸ್ ಪಾರ್ಕ್‌ನಲ್ಲಿರುವ ‘ಮಿನಿ ಬಾಲಭವನ’ಗಳಲ್ಲಿಯೂ ಶಿಬಿರ ನಡೆಯಲಿದೆ’ ಎಂದು ಹೇಳಿದರು.

‘5ರಿಂದ 16 ವರ್ಷದೊಳಗಿನ ಮಕ್ಕಳು ಬೇಸಿಗೆ ಶಿಬಿರದಲ್ಲಿ ಭಾಗವಹಿಸಬಹುದು. 5ರಿಂದ 7 ವರ್ಷ, 8ರಿಂದ 12 ವರ್ಷ ಹಾಗೂ 13ರಿಂದ 16 ವರ್ಷದ ಮಕ್ಕಳಿಗೆ ಶಿಬಿರದಲ್ಲಿಪ್ರತ್ಯೇಕವಾದ ಚಟುವಟಿಕೆಗಳಲ್ಲಿ ತರಬೇತಿ ನೀಡಲಾಗುವುದು. ಶಿಬಿರಕ್ಕೆ ನೋಂದಣಿಗಾಗಿ ಆಸಕ್ತರು ಬಾಲಭವನದ ಕಚೇರಿ ಅಥವಾ ದೂರವಾಣಿ ಸಂಖ್ಯೆ 080–22864189 ಅನ್ನು ಸಂಪರ್ಕಿಸಬಹುದು’ ಎಂದರು.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಆನೆಯೊಂದು ಅವಳಿ ಮರಿಗಳಿಗೆ ಜನ್ಮನೀಡಿದೆ. ‘ತಾಯಿ ಮತ್ತು ಎರಡೂ ಮರಿಗಳು ಆರೋಗ್ಯವಾಗಿವೆ. ಇದು ಅಪರೂಪದ ಪ್ರಕರಣ’ ಎಂದು ಬಂಡೀಪುರ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ತಿಳಿಸಿದ್ದಾರೆ.

ಐಎಎಸ್ ಅಧಿಕಾರಿ ಕಾರು ಪಲ್ಟಿ



ವಿಜಯ ಮಹಾಂತೇಶ

ಧಾರವಾಡ: ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲು ವಿಜಯಪುರಕ್ಕೆ ಹೊರಟಿದ್ದ ಐಎಎಸ್ ಅಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಅವರಿದ್ದ ಕಾರು ಇಲ್ಲಿನ ಯರಿಕೊಪ್ಪ ಬೈಪಾಸ್ ಬಳಿ ಮಂಗಳವಾರ ಬೆಳಿಗ್ಗೆ ಅಪಘಾತಕ್ಕೀಡಾಗಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರು ಅಪಾಯದಿಂದ ಪಾರಾಗಿದ್ದಾರೆ.

‘ಬಹುಸಂಖ್ಯಾತರ ಧರ್ಮದ ಅಂಶ ಪಠ್ಯದಲ್ಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳಲ್ಲಿ ಶೇ 90 ರಷ್ಟು ವಿದ್ಯಾರ್ಥಿಗಳು ಯಾವ ಧರ್ಮಕ್ಕೆ ಸೇರಿರುತ್ತಾರೋ ಆ ಧರ್ಮದ ಅಂಶಗಳನ್ನು ಒಳಗೊಂಡ ನೈತಿಕ ಪಾಠವನ್ನು ಮುಂದಿನ ವರ್ಷದಿಂದ ಬೋಧಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ಶೈಕ್ಷಣಿಕ ವರ್ಷದಿಂದ ಪಂಚತಂತ್ರ, ರಾಮಾಯಣ, ಮಹಾಭಾರತ, ಭಗವದ್ಗೀತೆ ಅಲ್ಲದೆ, ಎಲ್ಲ ಧರ್ಮಗಳ ಉತ್ತಮ ಅಂಶಗಳನ್ನು ಒಳಗೊಂಡ ನೈತಿಕ ಶಿಕ್ಷಣವನ್ನು ಶಾಲೆಗಳಲ್ಲಿ ಪರಿಚಯಿಸಲಾಗುವುದು ಎಂದರು.

‘ಯಾವ ಧರ್ಮದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಶಾಲೆಗಳಿಗೆ ಬರುತ್ತಾರೋ ಆ ಮಕ್ಕಳು ಕೇಳುವ ವಿಚಾರಗಳನ್ನು ಅಳವಡಿಸುತ್ತೇವೆ. ಯಾವುದನ್ನೆಲ್ಲ ಸೇರಿಸಬೇಕು ಎಂಬುದನ್ನು ತಜ್ಞರ ಸಮಿತಿ ನಿರ್ಣಯಿಸುತ್ತದೆ’ ಎಂದರು.

ರಾಜ್ಯದ ಮದರಸಾಗಳಲ್ಲೂ ಆಧುನಿಕ ಶಿಕ್ಷಣವನ್ನು ನೀಡಬೇಕು ಎಂಬ ಬೇಡಿಕೆ ಪೋಷಕರಿಂದ ಬಂದಿದೆ. ಇಲ್ಲಿ ಓದಿದ ಮಕ್ಕಳಿಗೆ ಉದ್ಯೋಗ ಮತ್ತಿತರ ಕಡೆಗಳಲ್ಲಿ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪೋಷಕರು ಹೇಳಿದ್ದಾರೆ ಹೇಳಿದರು.

‘ಆಧುನಿಕ ಶಿಕ್ಷಣ ಆರಂಭಿಸಬೇಕು ಎಂಬ ಬಗ್ಗೆ ಮದರಸಾ ಅಥವಾ ಇತರ ಸಂಸ್ಥೆಗಳಿಂದಾಗಲೀ ಪ್ರಸ್ತಾವನೆ ಬಂದಿಲ್ಲ. ಪೋಷಕರೂ ಮನವಿ ಸಲ್ಲಿಸಿಲ್ಲ. ನಾನು ರಾಜ್ಯದ ವಿವಿಧಡೆ ಭೇಟಿ ನೀಡಿದಾಗ ಪೋಷಕರು ತಾವಾಗಿಯೇ ಆಧುನಿಕ ಶಿಕ್ಷಣದ ಅಗತ್ಯವನ್ನು ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ಅಧಿಕೃತ ಬೇಡಿಕೆ ಬಂದರೆ ಮಾತ್ರ ಪರಿಶೀಲನೆ ನಡೆಸುತ್ತೇವೆ’ ಎಂದು ನಾಗೇಶ್ ಸ್ಪಷ್ಟಪಡಿಸಿದರು.

1 ನೇ ತರಗತಿಗೆ ಎನ್‌ಇಪಿ:

ಜೂನ್‌ನಿಂದ 1 ಮತ್ತು 2ನೇ ತರಗತಿ ಮಕ್ಕಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ತರಗತಿಗಳು ನಡೆಯಲಿವೆ. ಕಲಿಕಾ ವಿಧಾನಗಳು ಭಿನ್ನವಾಗಿರುತ್ತವೆ. ಹಾಡು ಮತ್ತು ಕಥೆಗಳ ಮೂಲಕ ಬೋಧನೆ ಮಾಡಲಾಗುತ್ತದೆ ಎಂದೂ ಹೇಳಿದರು.

ಪಿಯು ಪರೀಕ್ಷೆ: ಉಚಿತ ಪ್ರಯಾಣ

ಬೆಂಗಳೂರು: ಏ.22ರಿಂದ ಮೇ 18ರವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಉಚಿತವಾಗಿ ಪ್ರಯಾಣ ಮಾಡಲು ಬಿಎಂಟಿಸಿ ಅವಕಾಶ ಕಲ್ಪಿಸಿದೆ.

ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಪರೀಕ್ಷಾ ಕೇಂದ್ರ ಇಲ್ಲದಿದ್ದರೆ ನಿರ್ವಾಹಕರಿಗೆ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಪರೀಕ್ಷಾ ಕೇಂದ್ರಗಳಿಗೆ ಬಸ್‌ಗಳಲ್ಲಿ ಉಚಿತವಾಗಿ ಹೋಗಿ ಬರಬಹುದು ಎಂದು ಬಿಎಂಟಿಸಿ ತಿಳಿಸಿದೆ.

‘ಎಲ್‌ಎಂಎಸ್’ ಉನ್ನತ ಶಿಕ್ಷಣಕ್ಕೊಂದು ‘ಕಿಂಡಿ’– ಪ್ರದೀಪ್

ಬೆಂಗಳೂರು: ‘ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣದಲ್ಲಿ ‘ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ’ (ಎಲ್‌ಎಂಎಸ್) ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿದೆ’ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ತಿಳಿಸಿದರು.

ಎಲ್‌ಎಂಎಸ್ ಆಧಾರಿತ ಡಿಜಿಟಲ್ ಕಲಿಕೆಯ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ವ್ಯವಸ್ಥೆ ಸರ್ಕಾರಿ– ಖಾಸಗಿ ಕಾಲೇಜುಗಳು, ನಗರ– ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಯಲ್ಲಿನ ತಾರತಮ್ಯ ಹಾಗೂ ಡಿಜಿಟಲ್ ಅಂತರ ಅಳಿಸಿ ಹಾಕುವ ವಿಶ್ವಾಸವಿದೆ’ ಎಂದರು.

‘ವಿಷಯ ಸಂವಹನ, ವಿಷಯ ಲಭ್ಯತೆ ಮತ್ತು ಮೌಲ್ಯಮಾಪನದಲ್ಲಿ ಗುರುತರ, ಮಹತ್ವದ ಬದಲಾವಣೆಗಳನ್ನು ಈ ಕಲಿಕಾ ಪದ್ಧತಿ ತರಲಿದೆ. ಆ ಮೂಲಕ, ಬೋಧನೆ- ಕಲಿಕೆಗಳಲ್ಲಿ ಕ್ರಾಂತಿಕಾರಕ ಮುನ್ನಡೆಯನ್ನು ಸಾಧಿಸಬಲ್ಲ ಪರಿಣಾಮಕಾರಿ ವೇದಿಕೆಯಾಗಿದೆ. ಇದರಿಂದ ಎಲ್ಲ ವಿದ್ಯಾರ್ಥಿಗಳು ಸುಲಭವಾಗಿ ಕಲಿಯಬಹುದು, ಸಮಯವನ್ನು ಉಳಿಸಬಹುದು. ಕಲಿಕೆಯ ವಿವಿಧ ಅಂಶಗಳ ವೈಜ್ಞಾನಿಕ ವಿಶ್ಲೇಷಣೆ, ವಿದ್ಯಾರ್ಥಿಗಳು, ಅಧ್ಯಾಪಕರ ಮತ್ತು ಕಾಲೇಜುಗಳ ಹಿಂದಿನ ಮಾಹಿತಿ, ಕಂಟೆಂಟ್ ರೇಟಿಂಗ್, ವಿದ್ಯಾರ್ಥಿಗಳಿಂದ ಮತ್ತು ತರಗತಿಗಳಲ್ಲಿ ಅಧ್ಯಾಪಕರಿಂದ ಇ-ಕಂಟೆಂಟ್ ಬಳಕೆಯ ಟ್ರ್ಯಾಕಿಂಗ್, ಸಂಪೂರ್ಣ ವಿವರಗಳಿರುವ ವರದಿ ತಯಾರಿಕೆ ಇತ್ಯಾದಿಗಳಿಗೆ ಈ ಪದ್ಧತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ’ ಎಂದು ವಿವರಿಸಿದರು.

‘ಈ ತಂತ್ರಾಂಶದ ಮೂಲಕ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ, ಕಾಲೇಜು ಅರ್ಜಿ ಶುಲ್ಕ, ಪರೀಕ್ಷಾ ಶುಲ್ಕ ಸೇರಿದಂತೆ ಎಲ್ಲ ಶುಲ್ಕಗಳನ್ನು ಆನ್ ಲೈನ್‌ನಲ್ಲಿ ಪಾವತಿಸಲು ಅವಕಾಶ ನೀಡಿದೆ. ವಿಶ್ವವಿದ್ಯಾಲಯಗಳು ಪರೀಕ್ಷೆ ನಡೆಸಲು ಮಾಡುವ ವೆಚ್ಚವನ್ನೂ ಉಳಿಸಬಹುದಾಗಿದೆ’ ಎಂದೂ ಅವರು ವಿವರಿಸಿದರು.

ದೇಶೀಯ, ವಿದೇಶಿ ವಿವಿಗಳಿಂದ ಶೀಘ್ರದಲ್ಲೇ ದ್ವಿ ಪದವಿ

ನವದೆಹಲಿ: ಶೈಕ್ಷಣಿಕ ಸಹಯೋಗದ ಮೂಲಕ ಭಾರತೀಯ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾಲಯಗಳಿಂದ ಜಂಟಿ ಅಥವಾ ದ್ವಿ ಪದವಿಗಳನ್ನು ಪಡೆಯಬಹುದು. ಇದರಿಂದ ವಿದ್ಯಾರ್ಥಿಗಳು ವಿದೇಶಿ ವಿ.ವಿಗಳ ಪದವಿ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದರು.

ಮಂಗಳವಾರ ನಡೆದ ಸಭೆಯಲ್ಲಿ ಯುಜಿಸಿ ಈ ನಿರ್ಧಾರವನ್ನು ಕೈಗೊಂಡಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಸಂಸ್ಥೆಯಿಂದ (ನ್ಯಾಕ್) ಮಾನ್ಯತೆ ಪಡೆದು ಕನಿಷ್ಠ 3.01 ಅಂಕಗಳನ್ನು ಹೊಂದಿರಬೇಕು. ಇಲ್ಲವೇ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಪಟ್ಟಿಯ (ಎನ್‌ಐಆರ್‌ಎಫ್) ಅಗ್ರ 100 ಶ್ರೇಯಾಂಕದ ಒಳಗೆ ಕಾಲೇಜುಗಳು ಇರಬೇಕು.

ಟೈಮ್ಸ್ ಹೈಯರ್ ಎಜುಕೇಶನ್ ಅಥವಾ ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯದಿಂದ ಪ್ರಮಾಣೀಕರಿಸಲ್ಪಟ್ಟ 1000 ಅಗ್ರ ಶ್ರೇಯಾಂಕಿತ ಹೊಂದಿದ ಯಾವುದೇ ವಿದೇಶಿ ಕಾಲೇಜುಗಳೊಡನೆ ಸಹಯೋಗ ನಡೆಸಬಹುದಾಗಿದೆ. ಇದಕ್ಕೆ ಯುಜಿಸಿಯಿಂದ ಪೂರ್ವಾನುಮತಿಯ ಅಗತ್ಯವಿಲ್ಲ’ ಎಂದು ಹೇಳಿದರು.

‘ಈ ಕಾರ್ಯಕ್ರಮದಡಿ ವಿದೇಶಿ ವಿದ್ಯಾಸಂಸ್ಥೆಗಳಿಂದ ವಿದ್ಯಾರ್ಥಿಗಳು ಶೇಕಡ 30ಕ್ಕಿಂತ ಹೆಚ್ಚು ಕ್ರೆಡಿಟ್‌ಗಳನ್ನು ಪಡೆದಿರಬೇಕು. ಆದರೆ ಆನ್‌ಲೈನ್ ಅಥವಾ ದೂರ ಶಿಕ್ಷಣ ಹಾಗೂ ಮುಕ್ತ ವಿವಿಗಳಲ್ಲಿ ನೀಡಲಾಗುವ ಪದವಿ ಕಾರ್ಯಕ್ರಮಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ’ ಎಂದು ಜಗದೀಶ್ ಹೇಳಿದರು.

‘ಕೆಜಿಎಫ್’ ವೀಕ್ಷಣೆ ವೇಳೆ ಪ್ರೇಕ್ಷಕನಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ಪಟ್ಟಣದ ರಾಜಶ್ರೀ ಚಿತ್ರಮಂದಿರದಲ್ಲಿ ಮಂಗಳವಾರ ರಾತ್ರಿ 10.30ರ ಸಮಯದಲ್ಲಿ ‘ಕೆಜಿಎಫ್–2’ ಸಿನಿಮಾ ನೋಡುವ ಸಂದರ್ಭ ಕ್ಷುಲ್ಲಕ ಕಾರಣಕ್ಕಾಗಿ ಪ್ರೇಕ್ಷಕರಿಬ್ಬರ ನಡುವೆ ಜಗಳ ನಡೆದು, ಗುಂಡು ಹಾರಿಸಲಾಗಿದೆ.

ಶಿಗ್ಗಾವಿ ತಾಲ್ಲೂಕಿನ ಮುಗಳಿ ಗ್ರಾಮದ ವಸಂತಕುಮಾರ ಸಣ್ಣಕಲ್ಲಪ್ಪ ಶಿವಪುರ (28) ಗುಂಡೇಟು ತಿಂದು ಗಾಯಗೊಂಡ ಪ್ರೇಕ್ಷಕ. ಗಂಭೀರವಾಗಿ ಗಾಯಗೊಂಡಿರುವ ಅವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗುಂಡು ಹಾರಿಸಿದ ಆರೋಪಿ ಪರಾರಿಯಾಗಿದ್ದು, ಆತನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಏನು ಕಾರಣ?: ಸಿನಿಮಾ ನೋಡುವ ಸಂದರ್ಭ ಮುಂದಿನ ಕುರ್ಚಿಯ ಮೇಲೆ ವಸಂತಕುಮಾರ ಕಾಲಿಟ್ಟಿದ್ದ. ಮುಂದಿನ ಕುರ್ಚಿಯಲ್ಲಿದ್ದ ಆರೋಪಿ ಕಾಲು ತೆಗೆಯುವಂತೆ ಹೇಳಿದ್ದಾನೆ. ಈ ಸಂದರ್ಭ ಇಬ್ಬರ ನಡುವೆ ಮಾತಿನ ಚಕಮಕಿ ಉಂಟಾಗಿ, ಜಗಳ ನಡೆದಿದೆ. ನಂತರ ಆರೋಪಿ ಹೊರಗಡೆ ಹೋಗಿ ಹತ್ತು ನಿಮಿಷದ ನಂತರ ಮತ್ತೆ ಚಿತ್ರಮಂದಿರದ ಒಳಗೆ ಬಂದು, ವಸಂತಕುಮಾರನ ಮೇಲೆ ಪಿಸ್ತೂಲಿನಿಂದ ಮೂರು ಸುತ್ತು ಗುಂಡು ಹಾರಿಸಿದ್ದಾನೆ.

ಎರಡು ಗುಂಡುಗಳು ಕಾಲಿಗೆ ತಗುಲಿದ್ದು, ಮೂರನೇ ಗುಂಡು ಗುರಿ ತಪ್ಪಿದೆ. ಗುಂಡು ಹಾರಿಸಿದ ಘಟನೆಯಿಂದ ಗಾಬರಿಗೊಂಡ ಪ್ರೇಕ್ಷಕರು ಚಿತ್ರಮಂದಿರದಿಂದ ಹೊರಗೆ ಓಡಿಹೋದರು. ವಸಂತಕುಮಾರ ಮತ್ತು ಆತನ ಸ್ನೇಹಿತರು ಬೆಳಿಗ್ಗೆಯಿಂದ ಸಂಜೆವರೆಗೆ ಹೊಲದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರು. ರಾತ್ರಿ 9 ಗಂಟೆಯ ಪ್ರದರ್ಶನಕ್ಕೆ ನಾಲ್ವರು ಸ್ನೇಹಿತರು ಚಿತ್ರಮಂದಿರಕ್ಕೆ ಹೋಗಿದ್ದರು. ಘಟನೆ ನಡೆದ ನಂತರ ವಸಂತಕುಮಾರನ ಸ್ನೇಹಿತರು ಕೂಡ ನಾಪತ್ತೆಯಾಗಿದ್ದಾರೆ ಎಂದು ಪೊಲೀಸ್ ಮೂಲಗಳೂ ತಿಳಿಸಿವೆ.



ವಸಂತಕುಮಾರ

ರಾಯಚೂರು: ಶಾಸಕರಿಂದ ಶೇ 40ರಷ್ಟು ಕಮಿಷನ್ ಸ್ವೀಕಾರದ ಆರೋಪ

ರಾಯಚೂರು: ‘ಜಿಲ್ಲೆಯ ಶಾಸಕರು ಶೇ 40 ರಷ್ಟು ಕಮಿಷನ್ ಪಡೆದಿದ್ದಾರೆ ಎಂದು ನಾವು ಮಂಜುನಾಥಸ್ವಾಮಿ ಮೇಲೆ ಪ್ರಮಾಣ ಮಾಡುತ್ತೇವೆ. ತಾವು ಕಮಿಷನ್ ಪಡೆದಿಲ್ಲ ಎಂದು ಈ ಶಾಸಕರೂ ಪ್ರಮಾಣ ಮಾಡಲಿ’ ಎಂದು ಗುತ್ತಿಗೆದಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಜಿ.ನಾಗಪ್ಪ ಗಿರಣಿ ಸವಾಲು ಹಾಕಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶೇ 40 ರಷ್ಟು ಕಮಿಷನ್ ಪಡೆಯುವ ದಂಧೆ ಜಿಲ್ಲೆಯಲ್ಲಿಯೂ ಇದೆ. ಇದರಿಂದ ವೃತ್ತಿಪರ ಗುತ್ತಿಗೆದಾರರು ತೊಂದರೆಗೆ ಸಿಲುಕಿದ್ದಾರೆ. ಸಂತೋಷ್ ಪಾಟೀಲ ರೀತಿಯಲ್ಲೇ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಎದುರಾಗುವ ಆತಂಕ ಕಾಡುತ್ತಿದೆ’ ಎಂದರು.

‘ಹಿಂದಿನ ಸರ್ಕಾರಗಳಲ್ಲೂ ಕಮಿಷನ್ ಇತ್ತು. ಆದರೆ, ಈಗಿರುವ ಮಟ್ಟಕ್ಕೆ ಹೋಗಿರಲಿಲ್ಲ. ಶಾಸಕರು ಈ ರೀತಿ ಕಿರುಕುಳ ನೀಡುವುದನ್ನು ಕೈಬಿಡದಿದ್ದರೆ, ಎಲ್ಲ ಗುತ್ತಿಗೆದಾರರು ಒಟ್ಟಾಗಿ ಶಾಸಕರನ್ನು ಸೋಲಿಸುವುದಕ್ಕೆ ಮುಂಬರುವ ವಿಧಾನಸಭೆ ಚುನಾವಣೆ ಯಲ್ಲಿ ಪ್ರಚಾರ ಆರಂಭಿಸುವುದು ಅನಿವಾರ್ಯವಾಗುತ್ತದೆ’ ಎಂದರು.

ಪಿಆರ್‌ಆರ್: ಮತ್ತೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಕಾಮಗಾರಿಗೆ ಮಂಗಳವಾರ ಮತ್ತೆ ಟೆಂಡರ್ ಕರೆದಿದೆ.

ಈ ಯೋಜನೆಗೆ ಬಿಡಿಎ 2022ರ ಮಾರ್ಚ್ 31ರಂದು ಟೆಂಡರ್ ಆಹ್ವಾನಿಸಿತ್ತು. ಆದರೆ, ಈ ಯೋಜನೆಗೆ ಮೂಲಸೌಕರ್ಯ ಇಲಾಖೆಯಿಂದ ಅಗತ್ಯ ಮಂಜೂರಾತಿ ಸಿಕ್ಕಿರಲಿಲ್ಲ. ಹಾಗಾಗಿ ತಾಂತ್ರಿಕ ಕಾರಣ ನೀಡಿ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡಿತ್ತು. ಇದರಿಂದ ಯೋಜನೆ ಮತ್ತಷ್ಟು ವಿಳಂಬವಾಗುವ ಆತಂಕ ಎದುರಾಗಿತ್ತು. ಈ ಬಗ್ಗೆ ‘ಪ್ರಜಾವಾಣಿ’ಯು ಏಪ್ರಿಲ್ 18ರ ಸಂಚಿಕೆಯಲ್ಲಿ ‘ಬಿಡಲೊಲ್ಲದು ಪಿಆರ್‌ಆರ್ ಯೋಜನೆಗೆ ಹಿಡಿದ ಗ್ರಹಣ’ ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

‘ಈ ಯೋಜನೆಗೆ ಅಗತ್ಯ ಮಂಜೂರಾತಿ ಸಿಕ್ಕಿದೆ. ಹಾಗಾಗಿ ತಕ್ಷಣವೇ ಟೆಂಡರ್ ಕರೆದಿದ್ದೇವೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಇಬ್ಬರು ಐಎಎಸ್ ಅಧಿಕಾರಿಗಳ ಸ್ಥಳ ನಿಯೋಜನೆ

ಬೆಂಗಳೂರು: ಸ್ಥಳ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ಪಿ. ವಸಂತಕುಮಾರ್ ಅವರನ್ನು ಕರ್ನಾಟಕ ಸಾರ್ವಜನಿಕ ಜಮೀನು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಹಾಗೂ ಎಂ.ಆರ್. ರವಿಕುಮಾರ್ ಅವರನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಈ ಇಬ್ಬರೂ ಸೇರಿ ಒಟ್ಟು 41 ಐಎಎಸ್ ಅಧಿಕಾರಿಗಳಿಗೆ ಕಿರಿಯ ಆಡಳಿತಾತ್ಮಕ ಶ್ರೇಣಿಯ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಈ ಪದೋನ್ನತಿಯು 2022ರ ಜ.1ರಿಂದಲೇ ಅನ್ವಯ ಆಗಲಿದ್ದು, ಅದಕ್ಕೆ ಪೂರಕವಾಗಿ ವೇತನ ಶ್ರೇಣಿ ಕೂಡಾ ಬದಲಾಗಲಿದೆ.

ಜಹಾಂಗಿರ್‌ಪುರಿ: ಐವರ ವಿರುದ್ಧ ಪ್ರಕರಣ

ನವದೆಹಲಿ (ಪಿಟಿಐ): ದೆಹಲಿಯ ಜಹಾಂಗಿರ್‌ಪುರಿಯಲ್ಲಿ ಏಪ್ರಿಲ್ 16ರಂದು ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಂಧಿಸಲಾದ ಐವರ ಮೇಲೆ ದೆಹಲಿ ಪೊಲೀಸರು ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಪ್ರಕರಣ ದಾಖಲಿಸಿದ್ದಾರೆ ಮತ್ತು ಆರೋಪಿಗೆ ಪಿಸ್ತೂಲ್ ಸರಬರಾಜು ಮಾಡಿದ ಆರೋಪದ ಮೇಲೆ ಒಬ್ಬ ವ್ಯಕ್ತಿ ಸೇರಿದಂತೆ ಇನ್ನಿಬ್ಬರನ್ನು ಬಂಧಿಸಿದ್ದಾರೆ.

ಮತ್ತೊಂದೆಡೆ, ಮಧ್ಯಪ್ರದೇಶದ ಖರ್ಗೋನ್‌ನಲ್ಲಿ ರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ನಡೆದಿದ್ದ ಹಿಂಸಾಚಾರದಲ್ಲಿ ಭಾಗಿಯಾದ ಇಬ್ಬರು ಆರೋಪಿಗಳ ವಿರುದ್ಧ ಎನ್‌ಎಸ್‌ಎ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಮೈಸೂರು ರಸ್ತೆ ಡಿಸೆಂಬರ್‌ನಲ್ಲಿ ಪೂರ್ಣ

ಬೆಂಗಳೂರು: ಮೈಸೂರು– ಬೆಂಗಳೂರು ಹತ್ತು ಪಥಗಳ ರಸ್ತೆ ಇದೇ ಡಿಸೆಂಬರ್ ಒಳಗೆ ಪೂರ್ಣಗೊಳ್ಳಲಿದೆ ಎಂದು ಸಚಿವ ಸಿ.ಸಿ.ಪಾಟೀಲ ಹೇಳಿದರು. ಮಂಗಳವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನ ಪೀಣ್ಯ ಫ್ಲೈಓವರ್ ದುರಸ್ತಿ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸುವುದು ಎಂದರು.

ಬಿಬಿಎಂಪಿಯಲ್ಲೂ ಶೇ 40ರಷ್ಟು ಲಂಚ

ಒಂದನೇ ಪುಟದಿಂದ...

‘ಬಿಲ್ ಪಾವತಿ ಮಾಡುವಾಗ ಜೇಷ್ಠತೆ ಕಾಪಾಡಿಕೊಳ್ಳಬೇಕು. ಪಾವತಿ ವಿಳಂಬವಾದರೆ ನ್ಯಾಯಾಲಯದ ಮೊರೆ ಹೋಗುವ ಚಿಂತನೆಯೂ ಇದೆ’ ಎಂದು ಸಂಘದ ಕಾರ್ಯಾಧ್ಯಕ್ಷ ಜಿ.ಎಂ.ರವೀಂದ್ರ ತಿಳಿಸಿದರು.

‘ಪಾಲಿಕೆಯಲ್ಲಿ ಚುನಾಯಿತ ಸದಸ್ಯರಿಲ್ಲದ ಕಾರಣಕ್ಕೆ ಕಳೆದ ವರ್ಷ ಹೊಸ ಟೆಂಡರ್ ಕರೆದಿಲ್ಲ. ವಾರ್ಡ್ ಮಟ್ಟದ ಎಲ್ಲ ಕಾಮಗಾರಿಗಳು ಬಿಬಿಎಂಪಿ ನಿಧಿಯಿಂದಲೇ ನಡೆಯುತ್ತಿದ್ದು, ಹಣ ಪಾವತಿ ವಿಳಂಬವಾದರೆ ಕಾಮಗಾರಿ ಪೂರ್ಣ ಗೊಳಿಸುವುದೂ ವಿಳಂಬವಾಗುತ್ತಿದೆ. ಭಾರಿ ಮೊತ್ತದ ಕಮಿಷನ್ ಕೊಡಲು ಒಪ್ಪದಿದ್ದರೆ ಗುತ್ತಿಗೆ ಬದಲಿಸಿರುವ ನಿದರ್ಶನಗಳೂ ಇವೆ’ ಎಂದು ಗುತ್ತಿಗೆದಾರರ ಸಂಘದ ಇನ್ನೊಬ್ಬ ಸದಸ್ಯ ಹೇಳಿದರು.

ನಿಧನ ವಾರ್ತೆ

ಜಿ. ಸುಬ್ಬರಾಜು



ಬೆಂಗಳೂರು: ‘ಪ್ರಜಾವಾಣಿ’ ಪ್ರಸರಣ ವಿಭಾಗದ ನಿವೃತ್ತ ನೌಕರ ಜಿ. ಸುಬ್ಬರಾಜು (72) ಅನಾರೋಗ್ಯದಿಂದಾಗಿ ಮಂಗಳವಾರ ನಿಧನರಾದರು.

ಅವರಿಗೆ ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಬುಧವಾರ (ಏಪ್ರಿಲ್ 20) ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

‘ಪದೇ ಪದೇ ಅಪಘಾತ: ಹೊಣೆ ಯಾರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಾದಚಾರಿಗಳು ಮತ್ತು ದ್ವಿಚಕ್ರ ವಾಹನಗಳ ಸವಾರರ ಪಾಲಿಗೆ ಕಸ ಹೊತ್ತೊಯ್ಯುವ ಬಿಬಿಎಂಪಿ ಲಾರಿಗಳು ಯಮ ಸ್ವರೂಪಿಯಾಗಿ ಕಾಡುತ್ತಿವೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಮೂವರನ್ನು ಈ ಲಾರಿಗಳು ಬಲಿ ಪಡೆದುಕೊಂಡಿವೆ.

ಹೆಬ್ಬಾಳ ಬಸ್ ನಿಲ್ದಾಣದ ಎದುರಿನಲ್ಲಿ ರಸ್ತೆ ದಾಟುತ್ತಿದ್ದ 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ (14) ಅವರ ಮೇಲೆ ಮಾ.21 ಕಸದ ಲಾರಿ ಹರಿದಿತ್ತು. ಇನ್ನೂ ಮೂವರು ಗಾಯಗೊಂಡಿದ್ದರು.

ಬಾಗಲೂರು ಬಳಿ ದ್ವಿಚಕ್ರ ವಾಹನಕ್ಕೆ ಮಾ.31ರಂದು ಕಸದ ಲಾರಿ ಡಿಕ್ಕಿ ಹೊಡೆದು ದ್ವಿಚಕ್ರ ವಾಹನ ಸವಾರ ರಾಮಯ್ಯ(76) ಮೃತಪಟ್ಟಿದ್ದರು. ನಾಯಂಡಹಳ್ಳಿ ಬಳಿ ಏ.18ರಂದು ದ್ವಿಚಕ್ರ ವಾಹನ ಸವಾರರಾದ ಪದ್ಮಿನಿ (40) ಅವರ ಮೇಲೆ ಕಸ ತುಂಬಿದ್ದ ಲಾರಿ ಹರಿದಿದೆ. ಪಾದಚಾರಿಗಳು ಮತ್ತು ದ್ವಿಚಕ್ರ ವಾಹನ ಸವಾರರು ರಸ್ತೆಯಲ್ಲಿ ಸಂಚರಿಸಲು ಭಯಪಡುವ ವಾತಾವರಣ ನಗರದಲ್ಲಿ ಸೃಷ್ಟಿಯಾಗಿದೆ. ಈ ಬಗ್ಗೆ ನಾಗರಿಕರು ‘ಪ್ರಜಾವಾಣಿ’ ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ರಸ್ತೆಗಿಂತ ಪಾದಚಾರಿ ಮಾರ್ಗ ಮುಖ್ಯ’



ಪಾದಚಾರಿಗಳಿಗೆ ನಗರದಲ್ಲಿ ಪ್ರಾಮುಖ್ಯತೆಯೇ ಇಲ್ಲವಾಗಿದೆ. ರಸ್ತೆಗಳೆಂದರೆ ಕೇವಲ ವಾಹನಗಳ ಸಂಚಾರಕ್ಕೆ ಸೀಮಿತ ಎಂಬಂತೆ ಆಗಿದೆ. ಯಾವುದೇ ವಾಹನದಲ್ಲಿ ಹೋಗುವವರು ಮೊದಲಿಗೆ ಮತ್ತು ಕೊನೆಗೆ ಪಾದಚಾರಿಗಳೇ ಆಗಿರುತ್ತಾರೆ. ಮಹಿಳೆಯರು, ಮಕ್ಕಳು, ವೃದ್ಧರು, ಅಂಗವಿಕಲರು ರಸ್ತೆ ದಾಟುವುದೇ ಕಷ್ಟವಾಗಿದೆ. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ(ಸಿಬಿಡಿ) ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಮಾತ್ರ ಪಾದಚಾರಿ ಮಾರ್ಗಗಳು ಉತ್ತಮವಾಗಿವೆ. ನಗರ ಹೊರ ವಲಯದಲ್ಲಿ ವಿಸ್ತಾರಗೊಳ್ಳುತ್ತಿದೆ. ಜಯನಗರ, ಬಸವನಗುಡಿ, ಮಲ್ಲೇಶ್ವರದಂತೆ ಯೋಜನಾಬದ್ಧವಾಗಿ ಬೆಳೆಯುತ್ತಿಲ್ಲ. ಹಳ್ಳಿಗಳೇ ನಗರವಾಗಿ ಮಗ್ಗಲು ಬದಲಿಸುತ್ತಿವೆ. ಅಲ್ಲಿಗೆ ಪೂರಕವಾದ ಬೇರೆ ರೀತಿಯ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವತ್ತ ಗಮನ ಹರಿಸಬೇಕಿದೆ. ರಸ್ತೆ ಅಭಿವೃದ್ಧಿ ಬದಲು ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಮೊದಲ ಆದ್ಯತೆ ದೊರೆಯಬೇಕಿದೆ. ಅದೇ ರೀತಿ ನಗರದಲ್ಲಿ ವಾಹನಗಳ ವೇಗಕ್ಕೂ ಕಡಿವಾಣ ಹಾಕಬೇಕಿದೆ.

ಎಚ್.ಎಸ್. ಸುಧೀರ್, ನಗರ ಸಂಚಾರ ತಜ್ಞ

ರಾಜಧಾನಿ ಒಡಲದನಿ

‘ಕಿಲ್ಲರ್ ಬಿಬಿಎಂಪಿ ಆಗಬಾರದು’



ಬಿಎಂಟಿಸಿ ಬಸ್‌ಗಳಿಂದ ಬೆಂಗಳೂರಿನಲ್ಲಿ ಅಪಘಾತ ಹೆಚ್ಚಾಗುತ್ತಿತ್ತು. ಈಗ ಬಿಬಿಎಂಪಿ ಲಾರಿಗಳಿಂದ ಜನರು ಪ್ರಾಣ ಕಳೆದುಕೊಳ್ಳಬೇಕಾಗಿದೆ. ಕಿಲ್ಲರ್ ಬಿಎಂಟಿಸಿ ಬದಲಿಗೆ, ಕಿಲ್ಲರ್ ಬಿಬಿಎಂಪಿ ಎಂದು ಕರೆಯಬೇಕಾಗಿದೆ. ವೇಗಕ್ಕೆ ನಿಯಂತ್ರಣವೇ ಇಲ್ಲದೆ ಲಾರಿ ಚಾಲನೆ ಮಾಡುವುದರಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ಜನರಿಗೆ ಪ್ರಾಣಕ್ಕೆ ಬೆಲೆಯೇ ಇಲ್ಲವಾಗಿದೆ. ಬಿಬಿಎಂಪಿ ಚಾಲಕರ ನಿರ್ಲಕ್ಷ್ಯ ಇದೇ ರೀತಿ ಮುಂದುವರಿದರೆ ಜನ ಕಾನೂನು ಕೈಗೆತ್ತಿಕೊಳ್ಳುತ್ತಾರೆ. ಅದಕ್ಕೆ ಅವಕಾಶ ಆಗದಂತೆ ಬಿಬಿಎಂಪಿ ಚಾಲಕರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಬೇಕು ಮತ್ತು ಸುಸ್ಥಿತಿಯಲ್ಲಿರುವ ಲಾರಿಗಳನ್ನಷ್ಟೇ ರಸ್ತೆಗೆ ಇಳಿಸಬೇಕು. ಪಾದಚಾರಿಗಳು ರಸ್ತೆ ದಾಟಲು ಮತ್ತು ರಸ್ತೆ ಬದಿಯಲ್ಲಿ ಸುರಕ್ಷಿತವಾಗಿ ನಡೆದು ಸಾಗಲು ಅನುಕೂಲ ಆಗುವಂತೆ ಮಾರ್ಗಗಳನ್ನು ಕಲ್ಪಿಸಬೇಕು.

ಅಂಬರೀಷ್, ಆಟೊರಿಕ್ಷ ಚಾಲಕ

‘ಚಾಲಕರಿಗೆ ವಿಶೇಷ ತರಬೇತಿ ನೀಡಿ’



ಬಿಬಿಎಂಪಿ ಲಾರಿಗಳನ್ನು ನೋಡಿದರೆ ಭಯವಾಗುವ ವಾತಾವರಣ ಸೃಷ್ಟಿಯಾಗಿದೆ. ಒಂದೇ ತಿಂಗಳಲ್ಲಿ ಮೂರು ಜನರನ್ನು ಬಿಬಿಎಂಪಿ ಲಾರಿಗಳು ಬಲಿ ಪಡೆದಿವೆ ಎಂದರೆ ರಸ್ತೆಯಲ್ಲಿ ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು ಓಡಾಡುವುದಾದರೂ ಹೇಗೆ? ಬಿಬಿಎಂಪಿ ಕಸದ ಲಾರಿಗಳನ್ನು ಓಡಿಸುವ ಚಾಲಕರ ಬಳಿ ಚಾಲನಾ ಪರವಾನಗಿ ಇದೆಯೇ ಎಂಬುದನ್ನು ಮೊದಲು ಪರಿಶೀಲಿಸಬೇಕಿದೆ. ರಸ್ತೆಯಲ್ಲಿ ನಿಧಾನವಾಗಿ ಚಾಲನೆ ಮಾಡುವ ಬಗ್ಗೆ ವಿಶೇಷ ತರಬೇತಿ ಕೊಡುವ ಅಗತ್ಯವಿದೆ. ಬೇರೆ ವಾಹನಗಳು ಮತ್ತು ಜನರ ಪ್ರಾಣ ಲೆಕ್ಕಿಸದೆ ಚಾಲನೆ ಮಾಡುವವರ ಪರವಾನಗಿ ರದ್ದುಗೊಳಿಸಬೇಕು. ಅಲ್ಲದೇ ಲಾರಿಗಳ ಸುಸ್ಥಿತಿಯಲ್ಲಿ ಇವೆಯೇ ಎಂಬುದನ್ನೂ ಪರಿಶೀಲಿಸಬೇಕು. ಒಟ್ಟಾರೆ ಪಾದಚಾರಿಗಳು ಮತ್ತು ದ್ವಿಚಕ್ರ ವಾಹನ ಸವಾರರ ಪ್ರಾಣ ರಕ್ಷಣೆಯಾಗಬೇಕು.

ಮುನಿರಾಜು, ಖಾಸಗಿ ಸಂಸ್ಥೆ ಉದ್ಯೋಗಿ

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಎಚ್ಚರಿಕೆ

ಕಸದ ಲಾರಿ: ಸದೃಢತಾ ಪ್ರಮಾಣಪತ್ರ ಇಲ್ಲದಿದ್ದರೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಸ ಸಾಗಿಸುವ ಲಾರಿಗಳಿಗೆ ಸದೃಢತಾ ಪ್ರಮಾಣಪತ್ರ ಪಡೆಯುವುದು ಗುತ್ತಿಗೆದಾರರ ಜವಾಬ್ದಾರಿ. ಈ ಪ್ರಮಾಣಪತ್ರವಿಲ್ಲದೇ ಕಸದ ಲಾರಿಗಳನ್ನು ರಸ್ತೆಗಿಳಿಸಿದರೆ ಅಂತಹ ಗುತ್ತಿಗೆದಾರರ ವಿರುದ್ಧ ಕ್ರಮಕೈಗೊಳ್ಳಲಿದ್ದೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಕಸ ಸಾಗಿಸುವ ಗುತ್ತಿಗೆದಾರರಿಗೆ ಪಾಲಿಕೆ ಪ್ರತಿ ತಿಂಗಳು ಹಣ ಪಾವತಿ ಮಾಡುತ್ತದೆ. ಒಟ್ಟಾರೆ ವಾಹನಗಳನ್ನು ಪೂರೈಸುವುದು, ಅದರ ಬಳಕೆಗೆ ತಾಂತ್ರಿಕ ಅರ್ಹತೆಗಳನ್ನು ಕಾಯ್ದುಕೊಳ್ಳುವುದು ಗುತ್ತಿಗೆದಾರರ ಕರ್ತವ್ಯ. ಕಸದ ಲಾರಿ ಡಿಕ್ಕಿ ಹೊಡೆದು ಮಹಿಳೆ ಮೃತಪಟ್ಟಿದ್ದು ದುರದೃಷ್ಟಕರ. ಇಂತಹ ಘಟನೆ ಮರುಕಳಿಸದಂತೆ ತಡೆಯಲು ದುಪ್ಪಟ್ಟು ಎಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದರು.

‘ಕಸದ ಲಾರಿಗಳ ಎಲ್ಲ ಚಾಲಕರು ಹಿರಿಯರು ಹಾಗೂ ಅನುಭವಿಗಳು. ಅವರಿಗೆ ಇನ್ನಷ್ಟು ತರಬೇತಿಯ ಅವಶ್ಯಕತೆ ಇದ್ದರೆ, ಅದನ್ನು ಕೊಡಿಸಲು ಕ್ರಮಕೈಗೊಳ್ಳುತ್ತೇವೆ’ ಎಂದರು.

ಕಸದ ಲಾರಿ ಡಿಕ್ಕಿ ಹೊಡೆದು ಮೃತಪಟ್ಟವರ ಕುಟುಂಬಗಳಿಗೆ ರಸ್ತೆ ಅಪಘಾತ ವಿಮೆಯ ಜೊತೆಗೆ ಮಾನವೀಯ ನೆಲೆಯಿಂದಲೂ ಪರಿಹಾರ ನೀಡಲಾಗುತ್ತದೆ’ ಎಂದರು.

‘ನಗರದಲ್ಲಿ ವಿಶೇಷವಾಗಿ ಮೇಲ್ಸೇತುವೆಗಳಲ್ಲಿ, ಪ್ರಮುಖ ಜಂಕ್ಷನ್‌ಗಳ ಬಳಿ ವಾಹನಗಳ ವೇಗವಾಗಿ ಚಲಿಸುತ್ತವೆ ಎಂಬ ದೂರುಗಳಿವೆ. ಇಂತಹ ಕಡೆ ಪಾದಚಾರಿಗಳು ರಸ್ತೆ ದಾಟಲು ಸಾಧ್ಯವಾಗುತ್ತಿಲ್ಲ. ಅವರು ನಿರ್ಭೀತಿಯಿಂದ ರಸ್ತೆ ದಾಟಲು ವ್ಯವಸ್ಥೆ ಮಾಡಬೇಕು. ರಸ್ತೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ವ್ಯವಸ್ಥೆ ಮಾಡಬೇಕು. ಅಂತ್ಯ ಇರುವ ಕಡೆ ರಸ್ತೆ ವಿಭಜಕಗಳ ಎತ್ತರವನ್ನು ಹೆಚ್ಚಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದರು.

ಅಪಘಾತ: ಲಾರಿ ಚಾಲಕ ಬಂಧನ

ಬೆಂಗಳೂರು: ನಾಯಂಡಹಳ್ಳಿ ಬಳಿ ಸೋಮವಾರ ರಾತ್ರಿ ಸಂಭವಿಸಿದ್ದ ಅಪಘಾತ ಪ್ರಕರಣ ಸಂಬಂಧ ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕ ಶಿವರಾಜ್ ಅವರನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

‘ವಿಜಯಪುರ ಜಿಲ್ಲೆಯ ಶಿವರಾಜ್, ಹಲವು ವರ್ಷಗಳಿಂದ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಅಪಘಾತದ ಬಳಿಕ ಲಾರಿ ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದ ಆತನನ್ನು ಮಂಗಳವಾರ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಬಿಎಂಪಿ ಲಾರಿ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿತ್ತು. ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದಿದ್ದ ಪದ್ಮಿನಿ (40) ಮೇಲೆ ಲಾರಿ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದರು’ ಎಂದೂ ಮೂಲಗಳು ತಿಳಿಸಿವೆ.

ಯೆಮನ್ ದೇಶಕ್ಕೆ ಪ್ರಯಾಣ: ನಾಲ್ವರ ಬಂಧನ

ಬೆಂಗಳೂರು: ಪ್ರಯಾಣ ನಿಷೇಧವಿರುವ ಯೆಮನ್ ದೇಶಕ್ಕೆ ಹೋಗಿ ವಾಪಸು ಬಂದಿದ್ದ ನಾಲ್ವರನ್ನು ವಿಮಾನ ನಿಲ್ದಾಣದ ವಲಸೆ ಅಧಿಕಾರಿಗಳು ವಶಕ್ಕೆ ಪಡೆದಿದ್ದು, ಪೊಲೀಸರ ಸುಪರ್ದಿಗೆ ಒಪ್ಪಿಸಿದ್ದಾರೆ.

‘ಭಾರತೀಯ ಪ್ರಜೆಗಳು, ಸ್ಥಳೀಯ ಪಾಸ್‌ಪೋರ್ಟ್ ಬಳಸಿಕೊಂಡು ಯೆಮನ್ ದೇಶಕ್ಕೆ ಪ್ರಯಾಣಿಸುವುದನ್ನು ನಿಷೇಧಿಸಿ 2017ರ ಸೆಪ್ಟೆಂಬರ್ 26ರಂದು ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಹೀಗಿದ್ದರೂ ನಾಲ್ವರು, ಯೆಮನ್‌ಗೆ ಹೋಗಿ ಬಂದಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಒಡಿಶಾದ ಇಲ್ಯಾಸ್ ಅಲಿ ಶೇಖ್ (23), ಅಜತ್ ಶಾ (25), ಸಲ್ಮಾನ್ ಖಾನ್ (36) ಹಾಗೂ ಮಹಾರಾಷ್ಟ್ರ ಥಾಣೆಯ ಅನ್ಸರಿ ಬಸೀರ್ ಅಜೀಜುದ್ದೀನ್ (32) ಬಂಧಿತರು’ ಎಂದೂ ತಿಳಿಸಿವೆ. ‘ನಾಲ್ವರು ಪ್ರತ್ಯೇಕವಾಗಿ ಪ್ರವಾಸ ವೀಸಾದಡಿ ಯುಎಇಗೆ ಹೋಗಿದ್ದರು. ಅಲ್ಲಿಂದ ದುಬೈ ಮಾರ್ಗವಾಗಿ ಯೆಮನ್ ದೇಶಕ್ಕೆ ಪ್ರಯಾಣಿಸಿದ್ದರು. ಅಲ್ಲಿಯ ಹೋಟೆಲ್‌ಗಳಲ್ಲಿ ಅಡುಗೆ ಕೆಲಸ ಹಾಗೂ ಸ್ವಚ್ಛತಾ ಕೆಲಸ ಮಾಡಿಕೊಂಡಿದ್ದರು.’

‘ಇತ್ತೀಚೆಗೆ ತಮ್ಮೂರಿಗೆ ಹೋಗಲೆಂದು ದುಬೈ ಮಾರ್ಗವಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಪಸು ಬಂದಿಳಿದಿದ್ದರು. ಅವರನ್ನು ವಲಸೆ ಅಧಿಕಾರಿಗಳು ಪರಿಶೀಲಿಸಿದ್ದರು. ಯೆಮನ್ ದೇಶಕ್ಕೆ ಹೋಗಿ ಬಂದಿದ್ದು ಗೊತ್ತಾಯಿತು’ ಎಂದೂ ಹೇಳಿದ್ದಾರೆ.

ಅಧಿಕಾರಿ ಹೆಸರಿನಲ್ಲಿ ಲಂಚ: ಬಂಧನ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳ ಹೆಸರಿನಲ್ಲಿ ಲಂಚ ಪಡೆಯುತ್ತಿದ್ದ ಚಂದ್ರು ಎಂಬಾತನನ್ನು ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಅಧಿಕಾರಿಗಳು ಬಂಧಿಸಿದ್ದಾರೆ.

ಎಚ್‌ಎಎಲ್ ಬಡಾವಣೆ ನಿವಾಸಿಯೊಬ್ಬರು ತಾವು ಖರೀದಿಸಿದ್ದ ಫ್ಲ್ಯಾಟ್ ಖಾತೆ ಬದಲಾವಣೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಬಿಬಿಎಂಪಿ ಎಚ್‌ಎಎಲ್ 2ನೇ ಹಂತದ ಕೊಠಡಿಯಲ್ಲಿ ಕಚೇರಿಯ ತೆರಿಗೆ ನಿರೀಕ್ಷಕ ಎಂದು ನಂಬಿಸಿ ₹25 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಮಂಗಳವಾರ ₹22 ಸಾವಿರ ಪಡೆಯುವಾಗ ಎಸಿಬಿ ಅಧಿಕಾರಿಗಳು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ‘ಲಂಚದ ಬೇಡಿಕೆಯಲ್ಲಿ ಅಧಿಕಾರಿಗಳ ಪಾತ್ರ ಇರುವ ಬಗ್ಗೆ ಸಾಕ್ಷ್ಯಗಳು ದೊರೆತಿವೆ. ತನಿಖೆ ಮುಂದುವರಿದಿದೆ’ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ: ಹಿಂಬದಿ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟಿಪ್ಪರ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಹಿಂಬದಿ ಸವಾರ ಅಲಿ (27) ಮೃತಪಟ್ಟಿದ್ದಾರೆ.

‘ಕಲಾಸಿಪಾಳ್ಯ ನಿವಾಸಿ ಅಲಿ, ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಪರಿಚಯಸ್ಥ ವ್ಯಕ್ತಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಅಲಿ ಕುಳಿತಿದ್ದರು. ಅವರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದಿತ್ತು. ಅಲಿ ಅವರು ರಸ್ತೆಗೆ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಅವರು ಮೃತಪಟ್ಟಿದ್ದಾರೆ. ಸವಾರನಿಗೂ ಸಣ್ಣಪುಟ್ಟ ಗಾಯವಾಗಿದೆ’ ಎಂದೂ ತಿಳಿಸಿದರು.



ಬೇಗೂರು ನಾಗನಾಥೇಶ್ವರ ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತಾದಿಗಳು

ಬೇಗೂರು ನಾಗನಾಥೇಶ್ವರ ಬ್ರಹ್ಮರಥೋತ್ಸವ

ಬೊಮ್ಮನಹಳ್ಳಿ: ಬೇಗೂರು ನಾಗನಾಥೇಶ್ವರ ಬ್ರಹ್ಮರಥೋತ್ಸವವು ಮಂಗಳವಾರ ಸಂಭ್ರಮದಿಂದ ನಡೆಯಿತು. ಸಾವಿರಾರು ಭಕ್ತಾದಿಗಳು ಪಾಲ್ಗೊಂಡರು.

ಚೈತ್ರ ನಾಗನಾಥಸ್ವಾಮಿ ದೇವಸ್ಥಾನದ ಮುಖ್ಯದ್ವಾರದ ಬಳಿ ರಥದ ಚಕ್ರಗಳಿಗೆ ಕೊರಡು ಕಟ್ಟುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬೇಗೂರು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ತೇರಿಗೆ ದಾರಿಯುದ್ದಕ್ಕೂ ಮಹಿಳೆಯರು ಆರತಿ ಬೆಳಗಿದರು. ಭಕ್ತಾದಿಗಳು ರಥದ ತೇರುಗಳತ್ತ ಎಸೆದು ಭಾವಪರವಶರಾದರು. ಕೆಲ ಭಕ್ತಾದಿಗಳು ತೇರು ಎಳೆದು ಹರಕೆ ತೀರಿಸಿದರು.

ಡೊಳ್ಳು, ತಮಟೆ, ನಗಾರಿ, ಜಂಬೆ, ಪೂಜಾ ಕುಣಿತ, ವೀರಗಾಸೆ ಕಲಾ ತಂಡಗಳು ಹುಟ್ಟಿಕ್ಕೆ ಮೆರುಗು ನೀಡಿದವು. ಬೇಗೂರಿನ ವಿಟ್ಟಸಂದ್ರ ವೃತ್ತದ ಬಳಿ ಹೆಲಿಕಾಪ್ಟರ್ ಮೂಲಕ ಪುಷ್ಪಾಭಿಷೇಕ ಮಾಡಲಾಯಿತು. ಭಕ್ತಾದಿಗಳಿಗೆ ಅಲ್ಲಲ್ಲಿ ಮಜ್ಜಿಗೆ, ಪಾನಕ, ಕೋಸಂಬರಿ ನೀಡಲಾಯಿತು.

ಸಂಸದ ಡಿ.ಕೆ.ಸುರೇಶ್, ಶಾಸಕರಾದ ಎಂ.ಕೃಷ್ಣಪ್ಪ, ಎಂ.ಸತೀಶ್ ರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಕಾಂಗ್ರೆಸ್ ಮುಖಂಡ ಆರ್.ಕೆ. ರಮೇಶ್ ಮತ್ತಿತರರು ಭಾಗವಹಿಸಿದ್ದರು.

ಬೇಗೂರಿನ ಸುತ್ತಮುತ್ತಲ ಗ್ರಾಮಗಳ 38 ಹೂವಿನ ಪಲ್ಲಕ್ಕಿಗಳ ಉತ್ಸವ ನಡೆಯಿತು. ನಾಗನಾಥೇಶ್ವರ ಪಲ್ಲಕ್ಕಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಪಲ್ಲಕ್ಕಿ ಮೆರವಣಿಗೆಯಲ್ಲಿ ... ಮತ್ತು ಪಲ್ಲಕ್ಕಿಗೆ ಮಹಿಳೆಯರು ಆರತಿ ಬೆಳಗಿದರು.

‘ಕೊರೊನಾದಿಂದಾಗಿ ಎರಡು ವರ್ಷ ಸ್ವಾಮಿ ಉತ್ಸವ ಮಾಡಲು ಆಗಿರಲಿಲ್ಲ. ಈ ವರ್ಷ ಸಂಭ್ರಮದಿಂದ ಹಬ್ಬ ಆಚರಿಸಲು ನಿರ್ಧರಿಸಿ, ಭಕ್ತಾದಿಗಳಿಗೆ ಯಾವುದೇ ಅಹಿತಕರ ಘಟನೆ ಆಗದಂತೆ ಎಚ್ಚರಿಕೆ ವಹಿಸಲಾಗಿದೆ. ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ನಿರೀಕ್ಷೆಗೂ ಮೀರಿ ಭಕ್ತಾದಿಗಳು ಬಂದಿದ್ದಾರೆ’ ಎಂದು ದೇವಸ್ಥಾನ ಟ್ರಸ್ಟ್ ಹಾಗೂ ಪಾಲಿಕೆ ಮಾಜಿ ಸದಸ್ಯ ಎಂ.ಆಂಜನಪ್ಪ ಹೇಳಿದರು.

ಈಶ್ವರಪ್ಪ ಬಂಧನಕ್ಕೆ ಆಗ್ರಹ

ಬೆಂಗಳೂರು: ‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಶಾಸಕ ಕೆ.ಎಸ್.ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರೂ ಈವರೆಗೆ ಬಂಧನವಾಗಿಲ್ಲ’ ಎಂದು ಸಮತಾ ಸೈನಿಕ ದಳ ಖಂಡಿಸಿದೆ.

‘ಡೆತ್‌ನೋಟ್‌ನಲ್ಲಿ ಈಶ್ವರಪ್ಪ ಅವರ ಹೆಸರು ಉಲ್ಲೇಖಿಸಿ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದು, ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಾಗಿ ಐದು ದಿನಗಳು ಕಳೆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಯಾವುದೇ ಒತ್ತಡಕ್ಕೆ ಒಳಗಾಗದೆ ಅವರನ್ನು ಕೂಡಲೇ ಬಂಧಿಸಬೇಕು’ ಎಂದೂ ಆಗ್ರಹಿಸಿದೆ.

ಅಕ್ರಮವಾಗಿ ನುಸುಳಿ ‘ಓಲಾ’ ಚಾಲನೆ: ಬಾಂಗ್ಲಾ ಪ್ರಜೆ ಬಂಧನ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ವಾಸವಿದ್ದ ಬಾಂಗ್ಲಾ ಪ್ರಜೆ ಸುಮೆನ್ ಅಲ್ಮಾಮುನ್ ಮೊಹಮ್ಮದ್‌ನನ್ನು (27) ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸರು ಬಂಧಿಸಿದ್ದಾರೆ.

‘ದೇಶದೊಳಗೆ ಅಕ್ರಮವಾಗಿ ನುಸುಳಿ ವಾಸವಿದ್ದ ಸುಮೆನ್, ಭಾರತೀಯ ಪಾಸ್‌ಪೋರ್ಟ್ ಬಳಸಿಕೊಂಡು ಇತ್ತೀಚೆಗೆ ದುಬೈಗೆ ಹೊರಟಿದ್ದ. ವಿಮಾನದಲ್ಲಿ ಪ್ರಯಾಣಿಸಲು ನಿಲ್ದಾಣಕ್ಕೆ ಬಂದಿದ್ದಾಗ ವಲಸೆ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಮೆನ್‌ನನ್ನು ವಶಕ್ಕೆ ಪಡೆದಿದ್ದ ವಲಸೆ ಅಧಿಕಾರಿಗಳು, ಠಾಣೆಗೆ ತಂದು ಒಪ್ಪಿಸಿದ್ದಾರೆ. ಆತನನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ’ ಎಂದೂ ತಿಳಿಸಿವೆ.

‘ಓಲಾ’ ಚಾಲಕ ಕೆಲಸ: ‘ಸುಮೆನ್‌ನ ತಂದೆ-ತಾಯಿ ಬಾಂಗ್ಲಾದೇಶದಲ್ಲಿ ವಾಸವಿದ್ದಾರೆ. ಬಾಲಕನಾಗಿದ್ದಾಗಲೇ ಬಾಂಗ್ಲಾದೇಶದ ಗಡಿಯಲ್ಲಿ ನುಸುಳಿ ಪಶ್ಚಿಮ ಬಂಗಾಳಕ್ಕೆ ಬಂದಿದ್ದ ಸುಮೆನ್, ರಾಣಾಘಾಟ್ ಪ್ರದೇಶದಲ್ಲಿ ಕೆಲದಿನ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘11 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಸುಮೆನ್, ಕಲ್ಯಾಣನಗರದ ಮಂಜುನಾಥ್ ನಗರದಲ್ಲಿ ವಾಸವಿದ್ದ. ‘ಓಲಾ’ ಕ್ಯಾಬ್ ಚಾಲಕನಾಗಿ ಕೆಲಸ ಮಾಡಲಾರಂಭಿಸಿದ್ದ. ಏಜೆಂಟರೊಬ್ಬರ ಮೂಲಕ ನಕಲಿ ಆಧಾರ್, ಮತದಾನದ ಗುರುತಿನ ಚೀಟಿ ಹಾಗೂ ಇತರ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದ. ಅವುಗಳನ್ನು ಬಳಸಿಕೊಂಡು ಭಾರತೀಯ ಪಾಸ್‌ಪೋರ್ಟ್ ಪಡೆದುಕೊಂಡಿದ್ದ.’

‘ದುಬೈನ ಕಾರಿಗೆ ಸಂಸ್ಥೆಯೊಂದರಲ್ಲಿ ಇತ್ತೀಚೆಗೆ ಸುಮೆನ್‌ಗೆ ಚಾಲಕ ಕೆಲಸ ಸಿಕ್ಕಿತ್ತು. ಪ್ರವಾಸ ವೀಸಾದಡಿ ದುಬೈಗೆ ಹೋಗಲು ಏಪ್ರಿಲ್ 12ರಂದು ವಿಮಾನ ನಿಲ್ದಾಣಕ್ಕೆ ಬಂದಿದ್ದಾಗ ಸಿಕ್ಕಿಬಿದ್ದ’ ಎಂದೂ ತಿಳಿಸಿವೆ.

ಪರವಾನಗಿ ಪಡೆಯದೇ ಮಾಂಸ ಮಾರಾಟ: ಬಿಬಿಎಂಪಿ ನೋಟಿಸ್

ಬೆಂಗಳೂರು: ಆರ್.ಆರ್.ನಗರ ವಲಯದ ಉಲ್ಲಾಳು ರಸ್ತೆಯ ಬಳಿ ಬಿಬಿಎಂಪಿಯಿಂದ ಪರವಾನಗಿ ಪಡೆಯದೆಯೇ ಕಾರ್ಯ ನಿರ್ವಹಿಸುತ್ತಿದ್ದ ಹಿಂದವಿ ಮಾರ್ಟ್ ಎಂಬ ಮಾಂಸ ಮಾರಾಟ ಮಳಿಗೆಗೆ ಬಿಬಿಎಂಪಿ ಪಶುಸಂಗೋಪನಾ ವಿಭಾಗದ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

‘ಯುಗಾದಿ ಹೊಸತೊಡಕು ಆಚರಣೆ ಸಂದರ್ಭದಲ್ಲಿ ಅಕ್ರಮವಾಗಿ ಪ್ರಾಣಿ ವಧೆ ನಡೆಯುವ ತಾಣಗಳ ಮೇಲೆ ನಿಗಾ ಇಡಲು ಬಿಬಿಎಂಪಿ ಪಶುಸಂಗೋಪನಾ ವಿಭಾಗದ ಸಂಚಾರ ದಳವು ನಗರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿತ್ತು. ಆ ಸಂದರ್ಭದಲ್ಲಿ ಉಲ್ಲಾಳು ರಸ್ತೆಯ ಮಾಂಸ ಮಾರಾಟ ಮಳಿಗೆಗೆ ಭೇಟಿ ನೀಡಿ ತಪಾಸಣೆ ನಡೆಸಿದಾಗ ಅವರು ಬಿಬಿಎಂಪಿ ಪರವಾನಗಿ ಪಡೆಯದೆಯೇ ಕಾರ್ಯಾಚರಿಸುತ್ತಿರುವುದು ಕಂಡು ಬಂದಿತ್ತು. ಹಾಗಾಗಿ ಅವರಿಗೆ ನೋಟಿಸ್ ಜಾರಿ ಮಾಡಿದ್ದೇವೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಮಾಂಸ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರವೇ ತೀರ್ಮಾನ ಕೈಗೊಳ್ಳುತ್ತದೆ. ಸರ್ಕಾರದ ಸಲಹೆ ಸೂಚನೆಗಳನ್ನು ಬಿಬಿಎಂಪಿಯ ಪಶುಸಂಗೋಪನಾ ವಿಭಾಗದವರು ಅನುಷ್ಠಾನಗೊಳಿಸಿದ್ದಾರೆ. ಪಾಲಿಕೆಯಿಂದ ಪರವಾನಗಿ ಪಡೆಯದ ಅಂಗಡಿಗಳಿಗೆ ಅಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದಾರೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ದ್ವಿಚಕ್ರ ವಾಹನ ಕದ್ದು ಮಾರಾಟ

ಬೆಂಗಳೂರು: ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಮ್ರಾನ್ (25) ಎಂಬಾತನನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಇಮ್ರಾನ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 3.16 ಲಕ್ಷ ಮೌಲ್ಯದ 8 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ನಗರದಲ್ಲಿ ಸುತ್ತಾಡಿ ದ್ವಿಚಕ್ರ ವಾಹನಗಳನ್ನು ಗುರುತಿಸುತ್ತಿದ್ದ. ಹ್ಯಾಂಡಲ್ ಲಾಕ್ ಮುರಿದು ವಾಹನ ಕದ್ದೊಯ್ಯುತ್ತಿದ್ದ. ಕೆಲದಿನ ನಿರ್ಜನ ಪ್ರದೇಶಗಳಲ್ಲಿ ವಾಹನ ನಿಲ್ಲಿಸುತ್ತಿದ್ದ. ನಂತರ, ಕಡಿಮೆ ಬೆಲೆಗೆ ಮಾರುತ್ತಿದ್ದ’ ಎಂದೂ ತಿಳಿಸಿದರು.

‘ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 23ರಂದು ‘ಬಜಾಜ್ ಸಿಟಿ 100’ ದ್ವಿಚಕ್ರ ವಾಹನ ಕಳ್ಳತನವಾಗಿತ್ತು. ಈ ಬಗ್ಗೆ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ’ ಎಂದೂ ಹೇಳಿದರು.

ವಿಧಾನಸೌಧ ವಾಹನ ನಿಲುಗಡೆ ಸ್ಥಳದಲ್ಲಿ ಜೂಜಾಟ

ಬೆಂಗಳೂರು: ವಿಧಾನಸೌಧ ಆವರಣದ ವಾಹನ ನಿಲುಗಡೆ ಸ್ಥಳದ ಮೇಲೆ ಪೊಲೀಸರು ದಾಳಿ ಮಾಡಿದ್ದು, ಜೂಜು ಆಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಏಪ್ರಿಲ್ 12ರಂದು ಮಧ್ಯಾಹ್ನ 12.30ರ ಸುಮಾರಿಗೆ ವಿಧಾನಸೌಧದ ವಾಹನ ನಿಲುಗಡೆ ಸ್ಥಳದಲ್ಲಿ ಕೆಲ ವ್ಯಕ್ತಿಗಳು ಜೂಜು ಆಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ತಕ್ಷಣ ಸ್ಥಳಕ್ಕೆ ಹೋಗಿದ್ದರು. ಅವರನ್ನು ನೋಡಿ ಹಲವು ಆರೋಪಿಗಳು ಓಡಿಹೋದರು. ಒಬ್ಬ ಸಿಕ್ಕಿಬಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜೂಜಾಟ ಆರೋಪದಡಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ, ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ಸೂಚಿಸಿತ್ತು. ಅದರನ್ವಯ ಶಿವಕುಮಾರ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

ಕಾರಿನ ಗಾಜು ಒಡೆದು ಡ್ಯಾಶ್ ಬೋರ್ಡ್‌ನಲ್ಲಿದ್ದ ₹ 6.90 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರುತಿ ಸ್ವಿಫ್ಟ್ ಡಿಸೈರ್ ಕಾರಿನ ಗಾಜು ಒಡೆದು ಡ್ಯಾಶ್ ಬೋರ್ಡ್‌ನಲ್ಲಿದ್ದ ₹ 6.90 ಲಕ್ಷವನ್ನು ದುಷ್ಕರ್ಮಿಗಳು ಕಳ್ಳತನ ಮಾಡಿದ್ದು, ಈ ಬಗ್ಗೆ ಸಂಬಂಧಿಸಿ ಬ್ಲೇಟರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಲಗ್ಗೆರೆ ಚೌಡೇಶ್ವರಿನಗರದಲ್ಲಿ ಏಪ್ರಿಲ್ 8ರಂದು ನಡೆದಿರುವ ಘಟನೆ ಸಂಬಂಧ ಕಾರಿನ ಮಾಲೀಕ ಕುಮಾರ್ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಾಗಶೆಟ್ಟಿಹಳ್ಳಿ ನಿವಾಸಿ ಕುಮಾರ್, ಎಸ್‌ಬಿಐ ಶಾಖೆಯಲ್ಲಿ ಹಣ ಡ್ರಾ ಮಾಡಿಕೊಂಡಿದ್ದರು. ನಂತರ, ಸ್ನೇಹಿತನನ್ನು ಭೇಟಿಯಾಗಲು ಚೌಡೇಶ್ವರಿನಗರದ ಅಪೋಲೋ ಶಾಲೆ ಬಳಿ ಹೋಗಿದ್ದರು. ರಸ್ತೆ ಪಕ್ಕದಲ್ಲಿ ಕಾರು ನಿಲ್ಲಿಸಿ ಮನೆಯೊಳಗೆ ತೆರಳಿದ್ದರು. ಕೆಲ ಹೊತ್ತಿನ ನಂತರ ವಾಪಸು ಬಂದು ನೋಡಿದಾಗ, ಕಾರಿನ ಗಾಜು ಒಡೆದು ಹಣ ಕದ್ದುಕೊಂಡು ಹೋಗಿರುವುದು ಗೊತ್ತಾಗಿದೆ’ ಎಂದೂ ತಿಳಿಸಿದರು.


ಎಂಜಿನಿಯರ್ ಭಾಗಿಯಾದ ಶಂಕೆ


ಒಂದನೇ ಪುಟದಿಂದ..... ಬಂಧಿತ ಅಭ್ಯರ್ಥಿಗಳಾದ ಕಲಬುರಗಿಯ ವೀರೇಶ ನಿಡಗುಂದಾ, ಅರುಣ ಪಾಟೀಲ, ರಾಯಚೂರಿನ ಚೇತನ ನಂದಗಾಂವ, ಕೆ. ಪ್ರವೀಣಕುಮಾರ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ ಹಾಗೂ ಸಾವಿತ್ರಿ ಅವರ ಮೇಲೆ ಐಪಿಸಿ ಸೆಕ್ಷನ್ 120ಬಿ (ಒಳಸಂಚು), 465, 468, 471 (ದಾಖಲೆ ತಿದ್ದುಪಡಿ, ನಕಲು ಮಾಡುವುದು), 420 (ವಂಚನೆ) ಹಾಗೂ 34 (ಗುಂಪು ಕಟ್ಟಿಕೊಂಡು ಅಪರಾಧ ಕೃತ್ಯ) ಅಡಿ ಪ್ರಕರಣ ದಾಖಲಿಸಲಾಗಿದೆ.

‘ಬಂಧಿಸದಿದ್ದರೆ ಸಿ.ಎಂ.ಗೆ ಮುತ್ತಿಗೆ’

ಪ್ರಕರಣದ ಪ್ರಮುಖ ಆರೋಪಿ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರನ್ನು ಬಂಧಿಸದಿದ್ದರೆ, 21ರಂದು ಕಲಬುರಗಿಗೆ ಬರುವ ಮುಖ್ಯಮಂತ್ರಿ ಅವರಿಗೆ ಮುತ್ತಿಗೆ ಹಾಕಲಾಗುವುದು ಎಂದು ಕೆಪಿಸಿಸಿ ಉಪಾಧ್ಯಕ್ಷ ಶರಣಪ್ರಕಾಶ ಪಾಟೀಲ ಎಚ್ಚರಿಕೆ ನೀಡಿದ್ದಾರೆ.

‘ಪ್ರಮುಖ ಆರೋಪಿಗಳಿಗೆ ರಕ್ಷಣೆ ನೀಡಲೆಂದೇ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ. ಪೊಲೀಸ್ ತನಿಖೆಯಲ್ಲಿ ನಮಗೆ ವಿಶ್ವಾಸವಿಲ್ಲ. ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು. ಅಲ್ಲಿಯವರೆಗೂ ಕಾಂಗ್ರೆಸ್ ಹೋರಾಟ ನಡೆಸಲಿದೆ’ ಎಂದು ಹೇಳಿದರು.





‘ದ್ವಿಪಾತ್ರ’ದಲ್ಲಿ ಮೈಕ್ರೋ ಆರ್‌ಎನ್‌ಎ

ಮೈಕ್ರೋ ಆರ್‌ಎನ್‌ಎಗಳು ಜೀನ್‌ಗಳ ಚಟುವಟಿಕೆಗಳನ್ನು ನಿಯಂತ್ರಿಸುವ ಒಂದು ವಿಶಿಷ್ಟ ವಿಧಾನವನ್ನು ಹೊಂದಿವೆ.

ಸುಧೀರ ಎಚ್. ಎಸ್.

ನಮ್ಮ ಪ್ರತಿರಕ್ಷಣಾ ವ್ಯವಸ್ಥೆಯು ಹಾನಿಕಾರಕ ವೈರಸ್‌ಗಳು ಮತ್ತು ಬ್ಯಾಕ್ಟೀರಿಯಾಗಳಿಂದ ಉಂಟಾಗುವ ಸೋಂಕಿನ ವಿರುದ್ಧ ಹೋರಾಡಲು ಅಗತ್ಯವಾದ ವ್ಯವಸ್ಥೆಯನ್ನು ಹೊಂದಿದೆ. ಈಗಾಗಲೇ ತಿಳಿದಿರುವಂತೆ ಪ್ರತಿರಕ್ಷಣಾ ವ್ಯವಸ್ಥೆಗಳು ಎರಡು ವಿಧಗಳಾಗಿವೆ: ಜನ್ಮಜಾತ ಪ್ರತಿರಕ್ಷಣಾ ವ್ಯವಸ್ಥೆ ಮತ್ತು ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆ. ಜನ್ಮಜಾತ ಪ್ರತಿರಕ್ಷಣಾ ವ್ಯವಸ್ಥೆಯು ಸಸ್ಯಗಳು, ಶಿಲೀಂಧ್ರಗಳು, ಕೀಟಗಳು ಮತ್ತು ಪ್ರಾಚೀನ ಬಹುಕೋಶೀಯ ಜೀವಿಗಳಲ್ಲಿ ಕಂಡುಬರುವ ಪ್ರಬಲ ಮತ್ತು ಹಳೆಯ ವಿಕಸನೀಯ ರಕ್ಷಣಾ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ತಿಳಿದಿರುವ ಸಂದರ್ಭಗಳು ಮತ್ತು ಪ್ರಚೋದನೆಗಳ ವ್ಯಾಪಕ ಶ್ರೇಣಿಯ ಕೆಲವು ಪ್ರಮಾಣಿತ ಪ್ರತಿಕ್ರಿಯೆಗಳನ್ನು ಒದಗಿಸುತ್ತದೆ.

ಆದರೆ, ಇದನ್ನು ಸಕ್ರಿಯಗೊಳಿಸಲು ಒಂದು ಪ್ರಚೋದಕದ ಅವಶ್ಯಕತೆ ಇದೆ. ವೈರಸ್‌ಗಳು ನಮ್ಮ ದೇಹವನ್ನು ಆಕ್ರಮಿಸಿದಾಗ, ನಮ್ಮ ದೇಹವು ಇಂಟರ್‌ಫೆರಾನ್‌ಗಳು ಮತ್ತು ಸೈಟೊಕಿನ್‌ಗಳು ಎಂಬ ರಾಸಾಯನಿಕಗಳನ್ನು ಉತ್ಪಾದಿಸುವ ಅನೇಕ ಜೀನ್‌ಗಳೊಂದಿಗೆ ಹೋರಾಡುತ್ತದೆ. ಆದರೆ ಈ ಜೀನ್‌ಗಳನ್ನು ಯಾವುದು ನಿಯಂತ್ರಿಸುತ್ತದೆ ಮತ್ತು ಅವುಗಳನ್ನು ಯಾವಾಗ ಸಕ್ರಿಯಗೊಳಿಸಬೇಕು ಎಂಬುದು ತಿಳಿಯುವುದೇ ಯಕ್ಷಪ್ರಶ್ನೆಯಾಗಿತ್ತು.

ಆಕ್ರಮಿಸಿದ ಹಾನಿಕಾರಕ ವೈರಸ್ ವಿರುದ್ಧ ಪ್ರತಿಕ್ರಿಯೆಯನ್ನು ಸಕ್ರಿಯಗೊಳಿಸುವ ಪ್ರಚೋದಕವಾಗಿ ಸೂಕ್ತವಾಗಿರುವ ಒಂದು ಅಣುವನ್ನು ಈಗ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಈ ಪ್ರಚೋದಕ miRNA-30e ಎಂಬ ಸಣ್ಣ ರೈಬೋನ್ಯೂಕ್ಲಿಯಿಕ್ ಆಮ್ಲ (RNA) ಅಣು ಎಂದು ಕಂಡುಬಂದಿದೆ. ಮೈಕ್ರೋ ಆರ್‌ಎನ್‌ಎಗಳು ಸಾಮಾನ್ಯ ಆರ್‌ಎನ್‌ಎಗಳಿಗಿಂತ ಚಿಕ್ಕದಾಗಿರುತ್ತವೆ. ಇವು ಡಿಎನ್‌ಎಯಿಂದ ಸಂದೇಶಗಳನ್ನು ಸಾಗಿಸುವ ಅಣುಗಳು. ಮೈಕ್ರೋ ಆರ್‌ಎನ್‌ಎಯನ್ನು ಗುರಿಯಾಗಿಸುವುದು ಸಾಮಾನ್ಯವಾಗಿ ಲೂಪಸ್ ಎಂದು ಕರೆಯಲ್ಪಡುವ ಸಿಸ್ಟಮಿಕ್ ಲೂಪಸ್ ಎರಿಥೆಮಾಟೋಸಸ್ (SLE) ನಂತಹ ಸ್ವಯಂ ನಿರೋಧಕ ಕಾಯಿಲೆಗಳಿಗೆ ಚಿಕಿತ್ಸೆಯ ಆಯ್ಕೆಗಳಿಗೆ ಕಾರಣವಾಗಬಹುದು ಎಂದು ಸಂಶೋಧನೆ ಸೂಚಿಸುತ್ತದೆ.

ಸೋಂಕುಗಳಿಗೆ ಪ್ರತಿಕ್ರಿಯೆಯನ್ನು ಪ್ರಚೋದಿಸುವ ಜೀನ್‌ಗಳು ಯಾವಾಗಲೂ ಸಕ್ರಿಯವಾಗಿರಬೇಕಾಗಿಲ್ಲ. ಆದರೆ ಸಾಂಕ್ರಾಮಿಕ ವೈರಸ್ ದಾಳಿ ಮಾಡಿದಾಗ ಮಾತ್ರ ಸಕ್ರಿಯವಾಗಿರಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ನಿಗದಿತವಾಗಿ ನಡೆಯಲು ಮತ್ತು ಉತ್ತಮಗೊಳಿಸಲು ನಕಾರಾತ್ಮಕ ನಿಯಂತ್ರಕಗಳು ಎಂದು ಕರೆಯಲ್ಪಡುವ ಮತ್ತೊಂದು ಜೀನ್‌ಗಳು ಕಾರ್ಯರೂಪಕ್ಕೆ ಬರುತ್ತವೆ. ಆದರೂ, ವೈರಸ್ ಆಕ್ರಮಣ ಮಾಡಿದಾಗ ಈ ನಕಾರಾತ್ಮಕ ನಿಯಂತ್ರಕಗಳನ್ನು ನಿಗ್ರಹಿಸಬೇಕಾಗುತ್ತದೆ, ಹೀಗಾಗಿ ಪ್ರತಿರಕ್ಷಣಾ ಜೀನ್‌ಗಳು ಅಪೇಕ್ಷಿತ ರೀತಿಯ ಇಂಟರ್‌ಫೆರಾನ್‌ಗಳು ಮತ್ತು ಸೈಟೊಕಿನ್‌ಗಳನ್ನು ಉತ್ಪಾದಿಸಲು ಅನುವು ಮಾಡಿಕೊಡುತ್ತದೆ.

ಹಾಗಾದರೆ ನಿಯಂತ್ರಕರನ್ನು ಯಾವುದು ನಿಯಂತ್ರಿಸುತ್ತದೆ?

ಮೈಕ್ರೊ ಆರ್‌ಎನ್‌ಎ-30e (miRNA-30e) ಎಂಬ ಸಣ್ಣ ಆರ್‌ಎನ್‌ಎ ಅಣುವು ಮಾಸ್ಟರ್ ರೆಗ್ಯುಲೇಟರ್ ಆಗಿ ಕಾರ್ಯನಿರ್ವಹಿಸುತ್ತದೆ. ಈ ಮೈಆರ್‌ಎನ್‌ಎಗಳ ಸಾಮಾನ್ಯ ಕೆಲಸವೆಂದರೆ ಇತರ ಜೀನ್‌ಗಳ ಚಟುವಟಿಕೆಯನ್ನು ನಿಯಂತ್ರಿಸುವುದು.


ಮೈಕ್ರೋ ಆರ್‌ಎನ್‌ಎಗಳು ಇತರ ಜೀನ್‌ಗಳ ಚಟುವಟಿಕೆಗಳನ್ನು ನಿಯಂತ್ರಿಸುವ ಒಂದು ವಿಶಿಷ್ಟ ವಿಧಾನವನ್ನು ಹೊಂದಿವೆ. ಸಾಮಾನ್ಯವಾಗಿ, ಜೀನ್‌ಗಳನ್ನು ಡಿಎನ್‌ಎಯಿಂದ ಮೆಸೆಂಜರ್ ಆರ್‌ಎನ್‌ಎ(ಎಂಆರ್‌ಎನ್‌ಎ)ಗೆ ನಕಲಿಸುವ ಮೂಲಕ ವ್ಯಕ್ತಪಡಿಸಲಾಗುತ್ತದೆ; ನಂತರ ಅದನ್ನು ಪ್ರೋಟೀನ್‌ಗಳಾಗಿ ಪರಿವರ್ತಿಸಲಾಗುತ್ತದೆ. ಜೀನ್‌ಗಳನ್ನು ಮೆಸೆಂಜರ್ ಆರ್‌ಎನ್‌ಎಗೆ ನಕಲಿಸಿದ ನಂತರ ಮೈಕ್ರೋ ಆರ್‌ಎನ್‌ಎಗಳು ಸಕ್ರಿಯಗೊಳ್ಳುತ್ತವೆ ಮತ್ತು ನಂತರ ಎಂಆರ್‌ಎನ್‌ಎ ಜೊತೆಗೆ ಸೇರುತ್ತವೆ (ಕಾಂಪ್ಲಿಮೆಂಟರಿ ಬೈಂಡಿಂಗ್ ಅಥವಾ ಕಾಂಪ್ಲಿಮೆಂಟರಿ ಬೇಸ್ ಪೇರಿಂಗ್ ಎಂಬ ಪ್ರಕ್ರಿಯೆಯಿಂದ). ಉದ್ದೇಶಿತ ಎಂಆರ್‌ಎನ್‌ಎಯನ್ನು ಇತರ ಕಿಣ್ವಗಳಿಂದ ನಂತರ ನಾಶಪಡಿಸಲಾಗುತ್ತದೆ ಅಥವಾ ಪ್ರೋಟೀನ್‌ಗಳನ್ನು ಉತ್ಪಾದಿಸುವುದರಿಂದ ನಿಗ್ರಹಿಸಲಾಗುತ್ತದೆ.

miRNA-30e ವೈರಸ್ ಸೋಂಕಿಗೆ ಒಳಗಾದಾಗ ಪ್ರತಿರಕ್ಷಣಾ ಪ್ರತಿಕ್ರಿಯೆ ಜೀನ್‌ಗಳನ್ನು ನಿಯಂತ್ರಿಸುತ್ತದೆ. ವೈರಸ್ ಸೋಂಕಿತ ಕೋಶಗಳನ್ನು ನೋಡುವಾಗ ಸಂಶೋಧಕರು miRNA-30e ಪಾತ್ರದ ಬಗ್ಗೆ ಮೊದಲ ಸುಳಿವು ಪಡೆದರು. ಸೋಂಕಿತ ಜೀವಕೋಶಗಳು ಈ ಮೈಕ್ರೋ ಆರ್‌ಎನ್‌ಎ ಅಣುಗಳೊಂದಿಗೆ ಕೂಡಿರುವುದು ಕಂಡುಬಂದಿದೆ. ಮೈಕ್ರೋಆರ್‌ಎನ್‌ಎಗಳ ಮಟ್ಟವನ್ನು ಗಮನಿಸಿದಾಗ, ಸಾಮಾನ್ಯ ಜೀವಕೋಶಗಳಿಗೆ ಹೋಲಿಸಿದರೆ ಸೋಂಕಿತ ಜೀವಕೋಶಗಳಲ್ಲಿ miRNA-30e ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ ಎಂದು ಸಂಶೋಧಕರು ಗಮನಿಸಿದ್ದಾರೆ.

ಸಂಶೋಧಕರು ಸಾಮಾನ್ಯವಾಗಿ ಡಿಎನ್‌ಎ, ಆರ್‌ಎನ್‌ಎ ಮತ್ತು ಮೈಕ್ರೋ ಆರ್‌ಎನ್‌ಎ ಅನುಕ್ರಮಗಳಿಗಾಗಿ ಡೇಟಾಬೇಸ್ ಅನ್ನು ನಿರ್ವಹಿಸುತ್ತಾರೆ. ಅಲ್ಲದೆ, ವೈರಸ್-ಸೋಂಕಿತ ಜೀವಕೋಶಗಳಲ್ಲಿ ವ್ಯಕ್ತಪಡಿಸಿದ ಜೀನ್ ಅನುಕ್ರಮಗಳಿಗಾಗಿ ವಿಶೇಷ ಡೇಟಾಬೇಸ್ ಅನ್ನು ನಿರ್ವಹಿಸಲಾಗುತ್ತದೆ. ಸಂಶೋಧಕರು ವಿವಿಧ ವೈರಸ್ ಸೋಂಕಿತ ಕೋಶಗಳ ಅಂತಹ ಡೇಟಾಬೇಸ್ ಅನ್ನು ವಿಶ್ಲೇಷಿಸಿದಾಗ, miRNA-30e ಯಾವಾಗಲೂ ವೈರಲ್ ಸೋಂಕಿತ ಜೀವಕೋಶಗಳಲ್ಲಿ ಕಂಡುಬಂದಿರುವುದು ಗಮನಿಸಿದ್ದಾರೆ.

ವೈರಲ್ ಸೋಂಕಿನ ಪ್ರತಿಕ್ರಿಯೆಯಲ್ಲಿ ಪ್ರಮುಖವಾದ miRNA-30e ಎಂದು ತಿಳಿದ ನಂತರ, ಸಂಶೋಧಕರು ಈ ಮೈಕ್ರೋ ಆರ್‌ಎನ್‌ಎಯನ್ನೇ ಹೆಚ್ಚಿನ ಸಂಖ್ಯೆಯಲ್ಲಿ ನಕಲಿಸಲು ಅದಕ್ಕೆ ಸೂಕ್ತ ಜೀವಕೋಶಗಳನ್ನು ಬೆಳೆಸಲು ಸಿದ್ಧಗೊಳಿಸಿದರು. ನಂತರ ಅವರು ವಿವಿಧ ರೀತಿಯ ವೈರಸ್‌ಗಳೊಂದಿಗೆ ಬೆಳೆಸಿದ ಜೀವಕೋಶಗಳಿಗೆ ಸೋಂಕು ತಗುಲಿಸಿದರು.

ಸೋಂಕಿಲ್ಲದ ಜೀವಕೋಶಗಳಿಗೆ ಹೋಲಿಸಿದರೆ miRNA-30e ನಿಂದ ಸೋಂಕಿತ ಜೀವಕೋಶಗಳಲ್ಲಿ ವೈರಲ್ ಲೋಡ್ ಕಡಿಮೆಯಾಗಿರುವುದು ಕಂಡುಬಂದಿದೆ. ಹಾಗಾಗಿ ವಿವಿಧ ವೈರಸ್ ಸೋಂಕುಗಳ ಮೇಲೆ miRNA-30e ನ ಪರಿಣಾಮವಾಗಿ ಜೀವಕೋಶಗಳಲ್ಲಿ ಹೆಚ್ಚಿದ ಪ್ರತಿರಕ್ಷಣಾ ಪ್ರತಿಕ್ರಿಯೆಗಳು ಕಂಡುಬಂದಿದೆ. ಆದ್ದರಿಂದ miRNA-30e ವೈರಲ್ ಸೋಂಕಿಗೆ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಹಾಗಾಗಿ ವೈರಸ್ ಸೋಂಕಿನ ವಿರುದ್ಧ ಒಂದು ಒಳ್ಳೆಯ ಚಿಕಿತ್ಸಕ ಎಂದು ಪರಿಗಣಿಸಬಹುದು ಎಂದು ಸಂಶೋಧಕರು ತಿಳಿಸುತ್ತಾರೆ. ಇದರಿಂದ ಪ್ರೇರೇಪಿಸಿ ಸಂಶೋಧಕರ ತಂಡವು ಅಣುವಿನ ನಿಖರವಾದ ಪಾತ್ರವನ್ನು ಮತ್ತಷ್ಟು ತನಿಖೆ ಮಾಡಿದ್ದಾರೆ.



miRNA-30e ಪ್ರತಿರಕ್ಷಣಾ ಜೀನ್‌ಗಳ ಋಣಾತ್ಮಕ ನಿಯಂತ್ರಕಗಳನ್ನು ನಿಗ್ರಹಿಸಲು ಕಂಡುಬಂದಿದೆ, ಇದರಿಂದಾಗಿ ಪ್ರತಿರಕ್ಷಣಾ ಜೀನ್‌ಗಳು ವೈರಸ್ ಸೋಂಕಿನ ವಿರುದ್ಧ ಹೋರಾಡಲು ಇಂಟರ್ಫೆರಾನ್‌ಗಳು ಮತ್ತು ಸೈಟೊಕಿನ್‌ಗಳನ್ನು ಉತ್ಪಾದಿಸಲು ಅನುವು ಮಾಡಿಕೊಡುತ್ತದೆ. ಹೀಗಾಗಿ, ಸರ್ಕಸ್‌ನಲ್ಲಿ ರಿಂಗ್‌ಮಾಸ್ಟರ್‌ನಂತೆ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಪ್ರಾರಂಭಿಸಲು ಮತ್ತು ನಿಯಂತ್ರಿಸಲು ಈ ಮೈಕ್ರೊಆರ್‌ಎನ್‌ಎ ಪ್ರಮುಖ ಪಾತ್ರವಹಿಸಿಸುತ್ತದೆ.

miRNA-30e ಉತ್ಪಾದನೆ ಮತ್ತು ಚಟುವಟಿಕೆಯನ್ನು ಪರಿಶೀಲಿಸದೆ ಹೋದರೆ ಪ್ರತಿರಕ್ಷಣಾ ಪ್ರಕ್ರಿಯೆಯಲ್ಲಿ ಏರುಪೇರು ಆಗಬಹುದು. miRNAಯ ದೀರ್ಘಕಾಲದ ಉತ್ಪಾದನೆಯು ಪ್ರತಿರಕ್ಷಣಾ ಜೀನ್‌ಗಳು ಸಾರ್ವಕಾಲಿಕ ಸಕ್ರಿಯವಾಗಿರುವ ಸ್ಥಿತಿಗೆ ಕಾರಣವಾಗಬಹುದು. ಇಂತಹ ಸ್ಥಿತಿಯು ಪ್ರತಿರಕ್ಷಣಾಜೀನ್‌ಗಳು ದೇಹದಲ್ಲಿನ ಆರೋಗ್ಯಕರ ಅಂಗಾಂಶಗಳ ಮೇಲೆ ಆಕ್ರಮಣ ಮಾಡುವುದರಿಂದ ಸ್ವಯಂ ನಿರೋಧಕ ಕಾಯಿಲೆಗಳಿಗೆ ಕಾರಣವಾಗಬಹುದು.

ಇದನ್ನು ಇನ್ನಷ್ಟು ಪರೀಕ್ಷಿಸಲು ಸಂಶೋಧಕರು ರೋಗ-ಪ್ರೇರಿತ ಇಲಿಗಳ ಮೇಲೆ ಪ್ರಯೋಗ ಮಾಡಿದ್ದಾರೆ. ಇದಕ್ಕೆಂದೇ ಸ್ವಯಂ ನಿರೋಧಕ ಕಾಯಿಲೆಯುಳ್ಳ ಇಲಿಯ ಮೇಲೆ ಮತ್ತು ಮಾನವರೋಗಿಗಳಲ್ಲಿ ಪ್ರಯೋಗಿಸಿದ್ದಾರೆ. ಇಲಿಗಳು ಮತ್ತು ಮಾನವರೋಗಿಗಳ ಜೀವಕೋಶಗಳಲ್ಲಿ miRNA-30e ಯ ಅಧಿಕ ಉತ್ಪಾದನೆಯಾಗಿರುವುದು ಕಂಡುಬಂದಿದೆ. ಆದ್ದರಿಂದ, miRNA-30e ನಕಾರಾತ್ಮಕ ನಿಯಂತ್ರಕಗಳನ್ನು ಪ್ರತ್ಯೇಕಿಸುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ. ಇದರ ಜೊತೆ ಲೂಪಸ್‌ನಂತಹ ಸ್ವಯಂ ನಿರೋಧಕ ಕಾಯಿಲೆಗಳ ಸಂದರ್ಭದಲ್ಲಿ ಜೀವಕೋಶಗಳಲ್ಲಿನ ಅಣುವಿನ ಮಟ್ಟಗಳು ನಿರ್ಣಾಯಕವಾಗಿವೆ.

ಸಂಶೋಧಕರು miRNA-30e ಯ ರಾಸಾಯನಿಕ ಅಥವಾ ಸಂಶ್ಲೇಷಿತ ಪ್ರತಿಬಂಧಕ ‘ಆಂಟಗೋಮಿರ್’ ಎಂಬ ಪ್ರತಿಬಂಧಕವನ್ನು ಸೂಚಿಸಿದ್ದಾರೆ. ಇದು ಲೂಪಸ್‌ಗೆ ಸಂಭಾವ್ಯ ರೋಗನಿರ್ಣಯ ಸಾಮರ್ಥ್ಯವನ್ನು ಹೊಂದಿದೆ. ಸಂಶೋಧಕರು ರೋಗಗ್ರಸ್ತ ಇಲಿಗೆ ಆಂಟಗೋಮಿರ್ ಅನ್ನು ಚುಚ್ಚಿದಾಗ, ಇದು miRNA-30e ಸಮೃದ್ಧಿಯನ್ನು ಗಮನಾರ್ಹವಾಗಿ ಕಡಿಮೆ ಮಾಡಿದೆ, ಇದರಿಂದಾಗಿ ಪ್ರತಿರಕ್ಷಣಾ ಜೀನ್‌ಗಳ ಅತಿಯಾದ ಚಟುವಟಿಕೆಯನ್ನು ನಿಯಂತ್ರಿಸಿದೆ. ಹಾಗಾಗಿ ಸ್ವಯಂ ನಿರೋಧಕ ಕಾಯಿಲೆಯ ರೋಗನಿರ್ಣಯದಲ್ಲಿ miRNA-30e ಪ್ರಾಮುಖ್ಯವನ್ನು ಸ್ಪಷ್ಟೀಕರಿಸುತ್ತದೆ.

ವೈರಲ್ ಸೋಂಕುಗಳು ಮತ್ತು ಕೆಲವು ಸ್ವಯಂ ನಿರೋಧಕ ಕಾಯಿಲೆಗಳನ್ನು ಎದುರಿಸಲು miRNA-30e ಒಂದು ಪಾತ್ರ ಚಿಕಿತ್ಸಕವಾಗಿ, ಇನ್ನೊಂದು ಪಾತ್ರ ಪೂರ್ವಸೂಚಕವಾಗಿ ಕೆಲಸ ಮಾಡಬಲ್ಲದು. ❖

ರೂಪಾಂತರಿಯ ಉಸಾಬರಿ!

ಕ್ಷಮಾ ವಿ. ಭಾನುಪ್ರಕಾಶ್



ಇದು ರೂಪಾಂತರದ ಕಾಲ. ಎಲೆಗಳುದುರಿ ಬಡವಾಗಿದ್ದ ಮರಗಳೆಲ್ಲ ಚೆಂದನೆಯ ಚಿಗುರೆಲೆಗಳು, ಬಣ್ಣಬಣ್ಣದ ಹೂಗಳನ್ನು ತಳೆದು ಸಿಂಗರಿಸಿಕೊಂಡಿವೆ; ಆದರೆ, ಇದು ‘ರೂಪಾಂತರಿ’ಯ ಕಾಲವೂ ಹೌದೋ? ಕಾದು ನೋಡಬೇಕಷ್ಟೆ.

ಕೋವಿಡ್-19 ವೈರಾಣುವಿನ ಅಟಾಟೋಪದ ಬೆನ್ನಲ್ಲೇ ಎಲ್ಲೆಲ್ಲೂ ರೂಪಾಂತರಿ ವೈರಸ್‌ನ ಮಾತು; ಅದು ಮೊದಲ ವೈರಾಣುವಿಗಿಂತ ಬೇಗ ಹರಡುತ್ತಂತೆ, ಮಣಿಸಲು ಸುಲಭವಂತೆ, ಮತ್ತೊಂದು ಬಂದಿದೆಯಂತೆ, ಅದು ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ತಪ್ಪಿಸಿಕೊಳ್ಳುವ ಕಳ್ಳರೂಪಾಂತರಿಯಂತೆ ಇತ್ಯಾದಿ ಚರ್ಚೆ - ಟಿವಿ ನ್ಯೂಸ್‌ರೂಂನಿಂದ ಮದುವೆಮನೆಯವರೆಗೂ ನಡೆದಿದೆ. ಈ ರೂಪಾಂತರಿ ಎಂದರೇನು? ಅದು ಯಾಕೆ ಹಾಗೂ ಹೇಗೆ ಸೃಷ್ಟಿಯಾಗುತ್ತದೆ ಎಂಬುದರ ಬಗ್ಗೆ ಕೊಂಚ ಪರಿಚಯ ಮಾಡಿಕೊಳ್ಳೋಣ.

ನಮ್ಮ ಪ್ರತಿ ಜೀವಕೋಶದಲ್ಲೂ ವಂಶವಾಹಿ ವರ್ಣತಂತುಗಳಿರುತ್ತವೆಯಲ್ಲವೆ (ಕ್ರೋಮೋಸೋಮ್ಸ್)? ಅವುಗಳೊಳಗೆ ಇರುತ್ತದೆ ಡಿ.ಎನ್.ಎ. ಎಂಬ ಮೂಲಭೂತ ಸತ್ವ. ಈ ಡಿ.ಎನ್.ಎ. ಎಂಬ ಎರಡೆಳೆ ಸುರುಳಿಯು ಪ್ರತಿ ಜೀವಿಯ, ಪ್ರತಿ ವ್ಯಕ್ತಿಯ ಜೈವಿಕ ಜಾತಕವನ್ನು ಅಡಕವಾಗಿಸಿಕೊಂಡಿರುತ್ತದೆ. ಅಂತಹ ಡಿ.ಎನ್.ಎ.ಯೊಳಗೆ ನಾಲ್ಕು ಬಗೆಯ ನ್ಯುಕ್ಲಿಸೋಸೈಡ್‌ಗಳು ಇರುತ್ತವೆ - ಅಡಿನೈನ್ (A), ಗುವನೈನ್ (G), ಸೈಟೋಸಿನ್ (C) ಹಾಗೂ ಥಯಮಿನ್ (T) ಮತ್ತು ಅವುಗಳಿಗೆ ಬೆಸೆದುಕೊಂಡ ‘ಡಿಆಕ್ಸಿರೈಬೋಸ್’ ಎಂಬ ಸಕ್ಕರೆ, ಜೊತೆಗೊಂದಷ್ಟು ಫಾಸ್ಫೇಟ್ ಅಣು. ಇವು ಬೇರೆ ಬೇರೆ ಕ್ರಮದಲ್ಲಿ ಒಂದರ ಪಕ್ಕ ಒಂದು ಕೂತು ಒಂದು ಕೋಡ್ ಸೃಷ್ಟಿಸುತ್ತವೆ. ಅಂದರೆ TCG ಎಂಬ ಕ್ರಮ ಒಂದು ಕೋಡ್ ಆದರೆ, AGT ಎಂಬುದು ಮತ್ತೊಂದು, TTA ಎಂಬುದು ಮಗದೊಂದು. ಹೀಗೆ ಬಗೆಬಗೆ ಅನುಕ್ರಮಗಳಲ್ಲಿ ಅಡಗಿರುವ ಸಂದೇಶವನ್ನು ‘ಪಾಲಿಮರೇಸ್’ನಂತಹ ವಿಶೇಷವಾದ ಕಿಣ್ವಗಳು ಅರ್ಥೈಸಿಕೊಂಡು, ಅವುಗಳಿಗೆ ಆರ್.ಎನ್.ಎ. ರೂಪ ಕೊಡುತ್ತವೆ; ನಂತರ ಈ ಆರ್.ಎನ್.ಎ.ಯೊಳಗೆ ಅಡಗಿದ ಸಂದೇಶವು ಒಂದು ಪ್ರೋಟೀನ್‌ನ ರೂಪ ತಾಳುತ್ತದೆ ಮತ್ತು ತನಗೆಂದೇ ವಿಶೇಷವಾಗಿ ಇರುವ ಕೆಲಸವನ್ನು ಕೈಗೊಳ್ಳುತ್ತದೆ. ಆ ಕೆಲಸ, ನಮ್ಮ ರಕ್ತದಲ್ಲಿ ಸಕ್ಕರೆಯ ಅಂಶ ಹೆಚ್ಚಾದಾಗ ಇನ್ಸುಲಿನ್ ಉತ್ಪಾದನೆಯನ್ನು ಹೆಚ್ಚಿಸುವುದು, ನಮಗೆ ಗಾಯವಾದಾಗ ಅದು ಮಾಯಲು ಬೇಕಾದ ಹೊಸ ಜೀವಕಣಗಳನ್ನು ತಯಾರಿಸುವುದು – ಹೀಗೆ ಯಾವುದೇ ಆಗಿರಬಹುದು.

ಇದರ ಅರ್ಥವೇನು ಗೊತ್ತೆ? ಈ ಡಿಎನ್‌ಎ ಇಂದ ಆರ್‌ಎನ್‌ಎ ಮತ್ತು ಅಲ್ಲಿಂದ ಪ್ರೋಟೀನ್‌ನ ತಯಾರಿಯ ಈ ಮೂರು ಹಂತದ ಪ್ರಕ್ರಿಯೆಯಿದೆಯಲ್ಲ – ಎಲ್ಲ ಜೀವರಾಸಾಯನಿಕ ಕ್ರಿಯೆಗಳ ಸೂತ್ರವಿರುವುದು ಇದರ ಕೈಯಲ್ಲೇ ಎಂದು ಅರ್ಥ. ಇಂತಹ ಡಿಎನ್‌ಎಯ ನಕಲುಪ್ರತಿ ಮಾಡಿಕೊಂಡು, ಹೊಸ ಜೀವಕೋಶ ಉದಯಿಸುವಾಗಲೇ ಒಮ್ಮೊಮ್ಮೆ ಎಡವಟ್ಟು ಆಗುತ್ತದೆ. ಅದು ಸುಖಾಸುಮ್ಮನೆ ಆಗುವುದಲ್ಲ. ಆ ಜೀವಿಗೆ ಯಾವುದೋ ಬಗೆಯಲ್ಲಿ ಮುಂದೆ ಅನುಕೂಲಕರ ಎಂಬ ಕಾರಣದಿಂದ ಆ ಬದಲಾವಣೆಯಾಗುತ್ತದೆ. ಉದಾಹರಣೆಗೆ, CCG ಎಂದಿದ್ದ ಕೋಡ್ ಈ ನಕಲು ಮಾಡುವ ಪ್ರಕ್ರಿಯೆಯಲ್ಲಿ CCA ಎಂದಾಯಿತು ಎಂದಿಟ್ಟುಕೊಳ್ಳಿ; ಆಗ ಅಲ್ಲಿಂದ ಮುಂದೆ ಹೋಗುವ ಸಂದೇಶದಲ್ಲೂ ಬದಲಾವಣೆ ಆಯಿತಲ್ಲ! ಸೇಬನ್ನು ಸೀಬೆ ಎಂದರೆ ವ್ಯತ್ಯಾಸವಿಲ್ಲವೇ? ಹಾಗೆ!

ಇಂತಹ ಅಚಾನಕ್ ಬದಲಾವಣೆಗಳನ್ನು ‘ಮ್ಯುಟೇಶನ್’ ಅಥವಾ ‘ರೂಪಾಂತರ’ ಎಂದು ಕರೆಯುತ್ತಾರೆ. ಈ ಅಚಾನಕ್ಕಾಗಿ ಆಗುವ ಬದಲಾವಣೆಗಳು ಪೂರ್ವಯೋಜಿತವಿರಬಹುದು, ಇಲ್ಲದೆಯೂ ಇರಬಹುದು. ಆದರೆ ಇವುಗಳಲ್ಲಿ ಹಲವು, ವಂಶವಾಹಿಗಳ ಭಾಗವಾಗಿ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ವರ್ಗಾಯಿಸಲಾಗುತ್ತವೆ. ಡಿಎನ್‌ಎ ಕೋಡ್‌ನ ಒಳಗೆ ಆದ ಈ ಬದಲಾವಣೆಯು, ಒಳ್ಳೆಯ ಪರಿಣಾಮ ಉಂಟುಮಾಡಿದ್ದರೆ ಅದು ಅನೇಕ ತಲೆಮಾರುಗಳಿಗೆ ವರ್ಗಾವಣೆಯಾಗುವುದು ಖಂಡಿತ. ಅಚಾನಕ್ಕಾಗಿ ಆದ ಇಂತಹ ಒಂದು ರೂಪಾಂತರದಿಂದ ಆ ಜೀವಿಗೆ ತೊಂದರೆಯಾಗಿದ್ದರೆ, ಬರಬರುತ್ತಾ ಮುಂದಿನ ತಲೆಮಾರುಗಳಲ್ಲಿ ಈ ಪರಿಣಾಮವು ಕಾಣದಂತೆ ಮಾಯವಾಗುವುದು ನಿಶ್ಚಿತ. ಇಂತಹ ರೂಪಾಂತರಗಳು, ಜೀವಿಗಳ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸಿವೆ. ನಮ್ಮ ಪೂರ್ವಜರು ಇದ್ದಂತೆ ನಾವಿಲ್ಲ. ಸಾವಿರಾರು ವರ್ಷಗಳ ಹಿಂದೆ ಇದ್ದಂತೆಯೇ ಪಕ್ಷಿಗಳಾಗಲೀ ಕೀಟಗಳಾಗಲೀ ಇತರ ದೊಡ್ಡ ಪ್ರಾಣಿಗಳಾಗಲೀ ಈಗಿಲ್ಲ. ಅವುಗಳ ಜೀವಿತಕ್ಕೆ ಅತ್ಯಾವಶ್ಯಕವಾದ ದೈಹಿಕ ಗುಣಲಕ್ಷಣಗಳು ಉಳಿದುಕೊಂಡಿವೆಯೇ ಹೊರತು, ಬೇಡದ್ದು ಕಾಲಾಂತರದಲ್ಲಿ ಹೊರಟುಹೋಗಿವೆ. ಉದಾಹರಣೆಗೆ, ಕಿರಿದಾದ ಸಂದಿಗಳೊಳಗೆ ಸರಿದಾಡಲು ಹಾವುಗಳಿಗೆ ಅಡ್ಡ ಬಂದು ತೊಂದರೆ ಮಾಡುತ್ತಿದ್ದ ಕಾಲುಗಳು ಕಾಲಾನುಕ್ರಮದಲ್ಲಿ ಇಲ್ಲವಾದದ್ದು, ನಮ್ಮ ಉದರದಲ್ಲಿ ಇರುವ ಅಷ್ಟೇನೂ ಬೇಕಿಲ್ಲದ ಅಪೆಂಡಿಕ್ಸ್‌ನ ಗಾತ್ರ ಕಡಿಮೆಯಾಗುತ್ತಾ ಸಾಗಿರುವುದು – ಇವೆಲ್ಲವೂ ವಿಕಾಸದ ಭಾಗ. ಇಂತಹ ಬದಲಾವಣೆಗಳಿಗೆ ‘ರೂಪಾಂತರ’ಗಳು ಕಾರಣ. ದೊಡ್ಡಜೀವಿಗಳಲ್ಲಿ ಇಂತಹ ರೂಪಾಂತರಗಳು ಕಡಿಮೆ ಮತ್ತು ಕಂಡುಬರುವುದಕ್ಕೆ ಶತಮಾನಗಳೇ ಬೇಕಾಗುತ್ತದೆ. ಆದರೆ ಸೂಕ್ಷ್ಮಾಣುಜೀವಿಗಳಲ್ಲಿ ಹಾಗಲ್ಲ. ಅವುಗಳ ಇರುವಿಗೆ, ಸಂತಾನೋತ್ಪತ್ತಿಗೆ ಅಡ್ಡಿ ಎನಿಸುವ ಗುಣಲಕ್ಷಣವನ್ನು ನೀಗಿಸಿಕೊಳ್ಳಲು, ಥಟ್ ಅಂತ ಹೊಸದೊಂದು ರೂಪಾಂತರಕ್ಕೆ ಒಳಗಾಗುತ್ತವೆ, ಹೊಸದೊಂದು ರೂಪಾಂತರಿ ಸಿದ್ಧವಾಗುತ್ತದೆ.

ಉದಾಹರಣೆಗೆ, ಕೋವಿಡ್-19 ವೈರಾಣುವನ್ನೇ ತೆಗೆದುಕೊಳ್ಳಿ. ಮೊದಲು ಸೋಂಕನ್ನು ಉಂಟುಮಾಡಿ ಸಮಸ್ಯೆ ಒಡ್ಡಿದ ವೈರಾಣುವಿನ ವಿರುದ್ಧ ವ್ಯಾಕ್ಸಿನ್ ತಯಾರಾಗಿದ್ದೇ ತಡ, ರೂಪಾಂತರಿಯೊಂದು ಹೊರಬಂತು. ಪ್ರತಿಜೀವಕಗಳು ಅಥವಾ ಆಂಟಿಬಯಾಟಿಕ್‌ಗಳ ಸೇವನೆ ಜನರಲ್ಲಿ ಹೆಚ್ಚಿದಂತೆಲ್ಲ, ಅವುಗಳಿಂದ ತಪ್ಪಿಸಿಕೊಂಡು ಬದುಕುವ ಸಲುವಾಗಿ, ರೂಪಾಂತರಕ್ಕೆ ಒಳಪಟ್ಟು, ಹೊಸ ರೂಪ ತಳೆದು ಹೊರಬಂದವು ವೈರಾಣುಗಳು. ಆಗ ಅವುಗಳ ಮೇಲೆ ಕೆಲಸ ಮಾಡುತ್ತಿದ್ದ ಔಷಧಗಳು ಕೆಲಸ ಮಾಡುವುದಿಲ್ಲ ಮತ್ತು ವೈರಾಣುಗಳು ಹಾಯಾಗಿ ಬದುಕಿಕೊಳ್ಳಬಹುದು. ಅದು ಎಲ್ಲಿಯವರೆಗೆ? ಈ ರೂಪಾಂತರಿಯ ಮೇಲ್ಮೈಯ ಒಂದು ಆಯಕಟ್ಟಿನ ಸ್ಥಳವನ್ನು ವಿಜ್ಞಾನಿಗಳು ಕಂಡುಹಿಡಿದು, ಅದನ್ನೇ ಗುರಿಯಾಗಿಸಿ ನಾಶಮಾಡುವ ಆಯುಧ, ಅಂದರೆ, ಲಸಿಕೆಯನ್ನೋ ಔಷಧಿಯನ್ನೋ ಕಂಡುಹಿಡಿಯುವವರೆಗೂ ಅಷ್ಟೇ. ಹಾಗೆ ಹೊಸದೊಂದು ಔಷಧ ತಯಾರಾಯ್ತೋ, ಅದರಿಂದ ಬಚಾವಾಗಲು ವೈರಾಣು ಮತ್ತೆ ರೂಪಾಂತರದ ಮೊರೆ ಹೋಗಬೇಕಾಗುತ್ತದೆ. ಇದೊಂದು ಹಾವು-ಏಣಿ ಆಟದ ಹಾಗೆ. ಒಮ್ಮೆ ವೈರಾಣು ಗೆದ್ದರೆ ಮತ್ತೊಮ್ಮೆ ಲಸಿಕೆಯೋ ಔಷಧವೋ ಗೆಲ್ಲುತ್ತದೆ. ಈ ಆಟದಲ್ಲಿ ಜನರ ಪ್ರಾಣಕ್ಕೆ ಕಂಟಕವಾದಾಗ ಇದು ಎಲ್ಲರ ಗಮನಕ್ಕೆ ಬರುತ್ತದೆಯೇ ಹೊರತು ಇಂತಹ ರೂಪಾಂತರಗಳು ಭೂಮಿಯಲ್ಲಿ ಜೀವಿಗಳ ಉಗಮವಾದಾಗಿನಿಂದಲೂ ಸಾಗಿಬಂದಿದೆ.

ರೂಪಾಂತರವು ಡಿಎನ್‌ಎ ಮಾತ್ರವಲ್ಲ, ನೇರವಾಗಿ ಆರ್‌ಎನ್‌ಎಯಲ್ಲೂ ಆಗಬಹುದು. ಜೀನ್‌ಗಳಲ್ಲಿ ಆಗುವ ಈ ಪಲ್ಲಟಗಳಲ್ಲದೇ, ಕೆಲವು ಜೀನ್‌ಗಳ ಹೊಸ ಸೇರ್ಪಡೆ ಅಥವಾ ನಿರ್ದಿಷ್ಟ ಜೀನ್‌ನ ನಿರ್ಮೂಲನೆ ಕೂಡ ರೂಪಾಂತರವೇ. ಇವು ನೈಸರ್ಗಿಕವಾಗಿ ಪರಿಸ್ಥಿತಿಯ ಒತ್ತಡದ ಕಾರಣದಿಂದ, ವಾತಾವರಣದ ಬದಲಾವಣೆಯಿಂದ ಆಗಬಹುದು. ಇವುಗಳನ್ನು ಕೃತಕವಾಗಿಯೂ ಸಾಧ್ಯವಾಗಿಸಿ ಹೊಸ ತಳಿಗಳನ್ನು ಸೃಷ್ಟಿಸಬಹುದು. ರೂಪಾಂತರಕ್ಕೆ ಇಷ್ಟೆಲ್ಲಾ ಶಕ್ತಿಯಿದ್ದು, ಅದರ ಬಗ್ಗೆ ತಿಳಿದುಕೊಂಡಷ್ಟೂ ಅದನ್ನು ನಿರ್ವಹಿಸುವ ಕ್ಷಮತೆ ಹೆಚ್ಚುತ್ತದೆ ಎಂಬುದಂತೂ ಖಚಿತ. ಹೊಸ ರೂಪಾಂತರಿ ವೈರಾಣುವಿಗೆ ಹೆದರದೆ, ಅದು ವಿಕಾಸದ ಹಾದಿಯ ಮತ್ತೊಂದು ಮೈಲುಗಲ್ಲು ಎಂಬಂತೆ ನೋಡಿ ಬದಿಗಿರಿಸಿ, ವಿಜ್ಞಾನಿಗಳನ್ನು ನಂಬಿ ನಮ್ಮ ದೈನಂದಿನ ಬದುಕಿನಲ್ಲಿ ತೊಡಗಿಕೊಳ್ಳುವುದೇ ಬುದ್ಧಿವಂತಿಕೆ. ❖

ಒನ್‌ಪ್ಲಸ್ ಬಡ್ಸ್ ಜೆಡ್2

ವಿಶ್ವನಾಥ ಎಸ್.

ಒನ್‌ಪ್ಲಸ್ ಬಡ್ಸ್ ಜೆಡ್2 ಅತ್ಯಂತ ಹಗುರಾಗಿದ್ದು, 4.5 ಗ್ರಾಂ ಇದೆ. ಕಿವಿಯಲ್ಲಿ ಸುಲಭವಾಗಿ ಇಟ್ಟುಕೊಳ್ಳಬಹುದು. ಇದರ ಟಚ್ ಆಯ್ಕೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ. ಬೆಲೆ ₹ 4,999.

ಹೊರಗಿನ ಶಬ್ಧವು ಕೇಳಿಸದಂತೆ ತಡೆಯುವುದು (ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಷನ್-ಎಎನ್‌ಸಿ), ಬ್ಯಾಟರಿ ಬಾಳಿಕೆ ಹಾಗೂ ಸಾಧನದ ಗುಣಮಟ್ಟ ಉತ್ತಮವಾಗಿದೆ.

ಆಂಡ್ರಾಯ್ಡ್ ಮತ್ತು ಐಒಎಸ್‌ಗೆ ಬೆಂಬಲಿಸುತ್ತದೆ. ಹೇ ಮೆಲೊಡಿ ಆ್ಯಪ್ ಮೂಲಕ ಇದರ ಬ್ಯಾಟರಿ ಮಟ್ಟವನ್ನು ಪರಿಶೀಲಿಸಬಹುದು. ಟಚ್ ಆಯ್ಕೆಯನ್ನು ನಿಯಂತ್ರಿಸಬಹುದು. ನಾಯ್ಸ್ ಕ್ಯಾನ್ಸಲೇಷನ್ ಆಯ್ಕೆಯನ್ನು ಆನ್/ಆಫ್ ಮಾಡಬಹುದು. ಒನ್‌ಪ್ಲಸ್ ಫೋನ್ ಅನ್ನೇ ಬಳಸಿದರೆ ಆ್ಯಪ್ ನೆರವಿಲ್ಲದೆಯೇ ಬ್ಲುಟೂತ್ ಸೆಟ್ಟಿಂಗ್ಸ್‌ನಲ್ಲಿಯೇ ಎಲ್ಲವನ್ನೂ ನಿರ್ವಹಿಸಬಹುದು. ಧ್ವನಿಯು ಬಹಳ ಸ್ಪಷ್ಟವಾಗಿ ಕೇಳಿಸುತ್ತದೆ. ಬ್ಲುಟೂತ್ 5.2 ಆವೃತ್ತಿ ಹೊಂದಿದೆ.

ಆಕರ್ಷಕ ವಿನ್ಯಾಸ ಹೊಂದಿದೆ. ಪ್ಲಾಸ್ಟಿಕ್‌ನಿಂದ ಬಡ್ಸ್ ತಯಾರಿಸಲಾಗಿದೆ. ಹೀಗಿದ್ದರೂ ಗಟ್ಟಿಮುಟ್ಟಾಗಿವೆ. ಧೂಳು ಮತ್ತು ನೀರಿನಿಂದ ರಕ್ಷಿಸಲು ಐಪಿ55 3 ರೇಟಿಂಗ್ಸ್ ಹೊಂದಿದೆ. ಇದರ ಚಾರ್ಜಿಂಗ್ ಕೇಸ್ ಐಪಿಎಕ್ಸ್4 ನೀರು ನಿರೋಧಕವಾಗಿದೆ. ಕಿವಿಯ ಗಾತ್ರಕ್ಕೆ ಅನುಗುಣವಾಗಿ ಮೂರು ರೀತಿಯ ಇಯರ್ ಟಿಪ್‌ಗಳನ್ನು ನೀಡಲಾಗಿದೆ. ಯುಎಸ್‌ಬಿ ಟೈಪ್-ಸಿ ಚಾರ್ಜಿಂಗ್ ಕೇಬಲ್ ಹೊಂದಿದೆ.

ಇಯರ್ ಕೇಸ್‌ನಿಂದ ಬಡ್ಸ್‌ಗಳನ್ನು ಹೊರತೆಗೆದಾಗ ಅವು ಆನ್ ಆಗಿ ಸಂಪರ್ಕಕ್ಕೆ ಬರುತ್ತವೆ. ಫೋನ್‌ನ ಬ್ಲೂಟೂತ್ ಆನ್ ಮಾಡಿ ಬಡ್ಸ್ ಜೆಡ್2 ಎಂದು ಹುಡುಕಿ ಪರಸ್ಪರ ಸಂಪರ್ಕಿಸಬಹುದು. ಏಕಕಾಲಕ್ಕೆ ಎರಡು ಸಾಧನಗಳೊಂದಿಗೆ ಸಂಪರ್ಕಿಸಬಹುದಾಗಿದೆ.



ಚಾರ್ಜಿಂಗ್ ಕೇಸ್ 42 ಗ್ರಾಂ ತೂಕ ಇದೆ. ಬಡ್ಸ್ ಒಂದರ ತೂಕ 4.6 ಗ್ರಾಂ. ಚಾರ್ಜಿಂಗ್ ಕೇಸ್ ಐಪಿಎಕ್ಸ್4 3 ರೇಟಿಂಗಸ್ ಹೊಂದಿದ್ದರೆ, ಬಡ್ಸ್ ಐಪಿ55 3 ರೇಟಿಂಗ್ಸ್ ಹೊಂದಿವೆ.

ಚಾರ್ಜಿಂಗ್ ಕೇಸ್ 520ಎಂಎಎಚ್ ಬ್ಯಾಟರಿ ಹೊಂದಿದ್ದರೆ, ಇಯರ್ ಬಡ್ ತಲಾ 40ಎಂಎಎಚ್ ಬ್ಯಾಟರಿ ಹೊಂದಿವೆ. 10 ನಿಮಿಷ ಚಾರ್ಜ್ ಮಾಡಿದರೆ 5 ಗಂಟೆ ಬಳಸಬಹುದು. ಒಮ್ಮೆ ಚಾರ್ಜಿಂಗ್ ಕೇಸ್ ಪೂರ್ತಿ ಚಾರ್ಜ್ ಆದರೆ, ಅದರಿಂದ ಬಡ್ಸ್ ಅನ್ನು ಮೂರು ಬಾರಿ ಚಾರ್ಜ್ ಮಾಡಬಹುದು.

ಎಎನ್‌ಸಿ ಆನ್ ಆಗಿದ್ದರೆ 5 ಗಂಟೆಗಳವರೆಗೆ, ಎಎನ್‌ಸಿ ಆಫ್ ಆಗಿದ್ದರೆ 7ಗಂಟೆಗಳವರೆಗೆ ಬಳಸಬಹುದು.


ಎಎನ್‌ಸಿ ಆನ್ ಆಗಿದ್ದಾಗ 24 ಗಂಟೆ ಮತ್ತು ಆಫ್ ಆಗಿದ್ದಾಗ 38ಗಂಟೆ ಬಾಳಿಕೆ ಬರುತ್ತದೆ. ಕೇವಲ ಫೋನ್ ಕಾಲ್‌ಗೆ ಬಳಸಿದರೆ 3.5ಗಂಟೆಗಳವರೆಗೆ ಚಾರ್ಜ್ ಉಳಿಯುತ್ತದೆ

ಬಡ್ಸ್ ಅನ್ನು ಕಿವಿಯಲ್ಲಿ ಇಟ್ಟುಕೊಂಡಿದ್ದಾಗ ಹೊರಗಿನ ಶಬ್ಧ ಕೇಳದಂತೆ ತಡೆಯುವ (ಎಎನ್‌ಸಿ) ವ್ಯವಸ್ಥೆಯು ಉತ್ತಮವಾಗಿದೆ. ಮನೆಯಿಂದ ಹೊರಗಡೆ ಓಡಾಡುವಾಗಲೂ ಫೋನಿನಲ್ಲಿ ನಮ್ಮೊಂದಿಗೆ ಮಾತನಾಡುತ್ತಿರುವವರಿಗೆ ನಮ್ಮ ಧ್ವನಿ ಸ್ಪಷ್ಟವಾಗಿ ಕೇಳುವುದಷ್ಟೇ ಅಲ್ಲದೆ, ಅವರ ಧ್ವನಿಯೂ ನಮಗೆ ಸ್ಪಷ್ಟವಾಗಿ ಕೇಳುತ್ತದೆ. ಹಾಡು ಕೇಳುವಾಗ, ವಿಡಿಯೊ ನೋಡುವಾಗಲೂ ಹೊರಗಿನ ಶಬ್ಧವು ನಮಗೆ ಕೇಳಿಸದಷ್ಟು ಸ್ಪಷ್ಟವಾಗಿತ್ತು.

ಹೇ-ಮೆಲೋಡಿ (HeyMelody) ಆ್ಯಪ್ ಮೂಲಕ ಆಂಡ್ರಾಯ್ಡ್ ಮತ್ತು ಐಒಎಸ್ ಸ್ಮಾರ್ಟ್‌ಫೋನ್‌ಗಳಲ್ಲಿ ಸೆಟ್ಟಿಂಗ್ಸ್ ಮಾಡಬಹುದು. ಒನ್‌ಪ್ಲಸ್ ಬಡ್ಸ್ ಪ್ರೊಗೆ ಹೋಲಿಸಿದರೆ ಇದರ ಬಳಕೆ ಸುಲಭವಾಗಿದೆ. ಬಡ್ಸ್ ಅನ್ನು ಒಂದು ಬಾರಿ ಟ್ಯಾಪ್ ಮಾಡಿದರೆ ಮ್ಯೂಸಿಕ್ ಪ್ಲೇ/ಪಾಸ್ ಆಗುತ್ತದೆ. ಎರಡು ಬಾರಿ ಟ್ಯಾಪ್ ಮಾಡಿದರೆ ಮುಂದಿನ ಹಾಡಿಗೆ ಹಾಗೆಯೇ ಮೂರು ಬಾರಿ ಟ್ಯಾಪ್ ಮಾಡಿದರೆ ಹಿಂದಿನ ಹಾಡಿಗೆ ಹೋಗುತ್ತದೆ.

ಕರೆ ಸ್ವೀಕರಿಸಲು ಅಥವಾ ಕರೆಯನ್ನು ಮುಗಿಸಲು ಒಂದು ಬಾರಿ ಟ್ಯಾಪ್ ಮಾಡಬೇಕು. ಎರಡು ಬಾರಿ ಟ್ಯಾಪ್ ಮಾಡಿದರೆ ಒಳಬರುವ ಕರೆಯನ್ನು ರಿಜೆಕ್ಟ್ ಮಾಡಬಹುದು. ಫೋನ್ ನಮ್ಮ ಬಳಿ ಇಲ್ಲದೇ ಇದ್ದರೂ 10ಮೀಟರ್ ವ್ಯಾಪ್ತಿಯಲ್ಲಿ ಹಾಡು ಕೇಳಲು, ಮಾತನಾಡಲು ಇದನ್ನು ಬಳಸಬಹುದು. ಒನ್ ಪ್ಲಸ್ ಸಾಧನಗಳನ್ನು ಇಷ್ಟಪಡುವವರಿಗೆ ಗುಣಮಟ್ಟ ಮತ್ತು ಬಾಳಿಕೆ ದೃಷ್ಟಿಯಿಂದ ಉತ್ತಮ ಆಯ್ಕೆ ಇದಾಗಿದೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸೋತವನಿಗೆ ಮಾತ್ರ ಗೆಲುವಿನ ಅವಕಾಶ ಇರುತ್ತದೆ.
-ದ.ರಾ.ಬೇಂದ್ರೆ

ಹಣದುಬ್ಬರ: ನಿಯಂತ್ರಿಸದೇ ಇದ್ದರೆ ಆರ್ಥಿಕ ಚೇತರಿಕೆಗೆ ಪೆಟ್ಟು

ಮಾರ್ಚ್ ತಿಂಗಳಿನಲ್ಲಿ ದೇಶದಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇಕಡ 14.55ರಷ್ಟು ಆಗಿದೆ. ಹಣದುಬ್ಬರ ಪ್ರಮಾಣವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವವರ ಪಾಲಿಗೆ ಇದು ಕಳವಳಕಾರಿ. ಇದರ ಜೊತೆಯಲ್ಲೇ ಗಮನಿಸಬೇಕಿರುವ ಇನ್ನೊಂದು ಅಂಶ, 2021–22ನೇ ಹಣಕಾಸು ವರ್ಷದ ಅಷ್ಟೂ ತಿಂಗಳುಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇಕಡ 10ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದುದು. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಂತ್ರಣದಲ್ಲಿ ಇರಿಸುವ ಗುರಿಯನ್ನು ಇಟ್ಟುಕೊಂಡಿರುವುದು ಚಿಲ್ಲರೆ ಹಣದುಬ್ಬರ ದರವನ್ನು; ಸಗಟು ಹಣದುಬ್ಬರವನ್ನು ಅಲ್ಲ ಎಂಬುದು ನಿಜ. ಆದರೆ, ಸಗಟು ಹಣದುಬ್ಬರದ ಪ್ರಮಾಣದಲ್ಲಿ ಆಗುವ ಏರಿಕೆಯು ಮುಂದಿನ ದಿನಗಳಲ್ಲಿ ಚಿಲ್ಲರೆ ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆ ದಟ್ಟವಾಗಿಯೇ ಇದೆ. ಚಿಲ್ಲರೆ ಹಣದುಬ್ಬರ ದರವು ಮೂರು ತಿಂಗಳ ಹಿಂದೆಯೇ ಶೇಕಡ 6ರ ಗಡಿ ದಾಟಿದೆ. ಆರ್‌ಬಿಐ ಚಿಲ್ಲರೆ ಹಣದುಬ್ಬರ ದರವನ್ನು ಶೇ 4ರ ಮಟ್ಟದಲ್ಲಿ ನಿಯಂತ್ರಿಸಬೇಕಿತ್ತು. ಅದಕ್ಕಿಂತ ಶೇ 2ರಷ್ಟು ಅದು ಹೆಚ್ಚಾಗಲು ಅವಕಾಶ ಇದೆ. ಆದರೆ, ಅದು ಈಗಾಗಲೇ ನಿಯಂತ್ರಣ ಮೀರಿ ಹೋಗಿದೆ. ಹೊಂದಾಣಿಕೆಯ ಹಣಕಾಸಿನ ನೀತಿಯಿಂದ ತುಸುವಾದರೂ ಸರಿದು, ವ್ಯವಸ್ಥೆಯಲ್ಲಿನ ನಗದು ಹರಿವಿನ ಮೇಲೆ ನಿಯಂತ್ರಣ ತರಬೇಕಾದ ಅನಿವಾರ್ಯವನ್ನು ಚಿಲ್ಲರೆ ಹಣದುಬ್ಬರ ದರದ ಏರಿಕೆಯು ಈಗಾಗಲೇ ಹೇಳಿಯಾಗಿದೆ. ಸಗಟು ಹಣದುಬ್ಬರದ ಪ್ರಮಾಣವು ಮೊದಲಿಗೆ ಅನುಭವಕ್ಕೆ ಬರುವುದು ತಯಾರಿಕಾ ವಲಯದಲ್ಲಿ ತೊಡಗಿಸಿಕೊಂಡವರಿಗೆ. ಅವರು ತಮ್ಮ ಅಗತ್ಯದ ವಸ್ತುಗಳ ಬೆಲೆಯಲ್ಲಿ ಆಗುವ ಹೆಚ್ಚಳವನ್ನು ಎಲ್ಲ ಬಾರಿಯೂ ಗ್ರಾಹಕರಿಗೆ ವರ್ಗಾವಣೆ ಮಾಡುವುದಿಲ್ಲ. ಸಗಟು ಹಣದುಬ್ಬರವು ಮುಂದೆ ಇಳಿಕೆಯಾಗಬಹುದು ಎಂದೂ ಅವರು ಭಾವಿಸುವುದಿದೆ. ಆದರೆ, ರಷ್ಯಾ–ಉಕ್ರೇನ್ ಯುದ್ಧದಿಂದ ಪೂರೈಕೆ ವ್ಯವಸ್ಥೆಯಲ್ಲಿ ಉಂಟಾಗಿರುವ ಸಮಸ್ಯೆಗಳು, ಕೆಲವೆಡೆ ಮತ್ತೆ ಹೆಚ್ಚಾಗುತ್ತಿರುವ ಕೋವಿಡ್-ಲಾಕ್‌ಡೌನ್ ತಲೆಬಿಸಿ, ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ ಇನ್ನೂ 100 ಡಾಲರ್‌ಗಿಂತ ಹೆಚ್ಚಾಗಿಯೇ ಇರುವುದು ಸಗಟು ಹಣದುಬ್ಬರ ಪ್ರಮಾಣವನ್ನು ಹೆಚ್ಚಿನ ಮಟ್ಟದಲ್ಲಿಯೇ ಇರಿಸಬಹುದು. ಆಗ, ತಯಾರಿಕಾ ವಲಯವು ಅಗತ್ಯ ವಸ್ತುಗಳ ಬೆಲೆಯ ಏರಿಕೆಯನ್ನು ನಿಭಾಯಿಸಲಾಗದೆ, ಬೆಲೆ ಏರಿಕೆಯ ಬಿಸಿಯನ್ನು ಗ್ರಾಹಕರ ಮೇಲೆ ವರ್ಗಾಯಿಸುವ ತೀರ್ಮಾನ ಕೈಗೊಂಡರೆ, ಚಿಲ್ಲರೆ ಹಣದುಬ್ಬರವು ಮತ್ತಷ್ಟು ಜಾಸ್ತಿ ಆಗಬಹುದು.



ಹಣದುಬ್ಬರ ಹೆಚ್ಚಳವಾದಾಗ ಆರ್ಥಿಕ ಚೇತರಿಕೆಯು ಹೆಚ್ಚಿನ ಅವಧಿಗೆ ಸ್ಥಿರವಾಗಿ ನಿಲ್ಲುವುದಿಲ್ಲ ಎಂಬುದನ್ನು ಗಮನದಲ್ಲಿ ಇಡಬೇಕು

ಲಾಕ್‌ಡೌನ್‌ಗಳು, ಕೋವಿಡ್‌ನ ಅಲೆಗಳಿಂದಾಗಿ ಬಸವಳಿದುಹೋಗಿದ್ದ ಅರ್ಥ ವ್ಯವಸ್ಥೆಯು ಈಗ ಚೇತರಿಕೆಯ ಹಾದಿಯಲ್ಲಿ ಇದೆ. ಈ ಮಾತಿಗೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾಗುತ್ತಿರುವ ವರಮಾನ, ತಯಾರಿಕೆ ಮತ್ತು ಸೇವಾ ವಲಯದಲ್ಲಿನ ಚಟುವಟಿಕೆಗಳ ಹೆಚ್ಚಳ ಸೇರಿದಂತೆ ಕೆಲವು ಸೂಚಕಗಳನ್ನು ಆಧಾರವಾಗಿ ಇರಿಸಿಕೊಳ್ಳಬಹುದು. ಆದರೆ, ಸಗಟು ಹಣದುಬ್ಬರವು ಕಡಿಮೆ ಆಗದಿದ್ದರೆ, ಕೈಗಾರಿಕೆಗಳು ಮಾಡಬೇಕಿರುವ ವೆಚ್ಚ ಜಾಸ್ತಿ ಆಗಿ, ಅವುಗಳ ಲಾಭಾಂಶದ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು. ಕೈಗಾರಿಕೆಗಳು ತಮ್ಮ ಪಾಲಿನ ವೆಚ್ಚ ಹೆಚ್ಚಳವನ್ನು ಗ್ರಾಹಕರಿಗೆ ಸಂಪೂರ್ಣವಾಗಿ ವರ್ಗಾವಣೆ ಮಾಡಿದರೆ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬೆಲೆ ಏರಿಕೆಯಿಂದಾಗಿ ಗ್ರಾಹಕರು ಖರೀದಿಗೆ ಹಿಂದೇಟು ಹಾಕಬಹುದು. ಈ ಸನ್ನಿವೇಶವು ಆರ್ಥಿಕತೆಯಲ್ಲಿ ಕಂಡುಬಂದಿರುವ ಚೇತರಿಕೆಗೆ ಪೆಟ್ಟು ಕೊಡಬಹುದು. ಕೈಗಾರಿಕೆಗಳ ವೆಚ್ಚ ಹೆಚ್ಚಳ ಮತ್ತು ಲಾಭಾಂಶದಲ್ಲಿ ಕುಸಿತವು ಹೂಡಿಕೆದಾರರು ಹಣ ತೊಡಗಿಸಲು ನಿರುತ್ತೇಜಕ ಅಂಶವಾಗಿ ಪರಿಣಮಿಸಬಹುದು. ಈ ಎಲ್ಲ ಕಾರಣಗಳಿಂದಾಗಿ ಹಣದುಬ್ಬರ ದರವನ್ನು – ಚಿಲ್ಲರೆ ಹಣದುಬ್ಬರ ಹಾಗೂ ಸಗಟು ಹಣದುಬ್ಬರ – ಆದಷ್ಟು ಬೇಗ ಕಡಿಮೆ ಮಾಡಲೇಬೇಕಾದ ಸಂದರ್ಭ ಎದುರಾಗಿದೆ ಎನ್ನುವುದನ್ನು ಆರ್‌ಬಿಐ ಮತ್ತು ಸರ್ಕಾರಗಳು ಅರಿತುಕೊಳ್ಳಬೇಕು. ಆರ್ಥಿಕ ಚಟುವಟಿಕೆಗಳ ಪುನಶ್ಚೇತನದ ಉದ್ದೇಶದಿಂದ ಬಡ್ಡಿ ದರ ಕಡಿಮೆ ಇರಿಸಲಾಗಿದೆಯಾದರೂ, ಹಣದುಬ್ಬರ ಹೆಚ್ಚಳವಾದಾಗ ಆರ್ಥಿಕ ಚೇತರಿಕೆಯು ಹೆಚ್ಚಿನ ಅವಧಿಗೆ ಸ್ಥಿರವಾಗಿ ನಿಲ್ಲುವುದಿಲ್ಲ.

ಆರ್‌ಬಿಐ ಈಚೆಗೆ ನಡೆದ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಹೇಳಿರುವ ಮಾತುಗಳನ್ನು ಗಮನಿಸಿದರೆ, ರೆಪೊ ದರ ಹೆಚ್ಚಳವಾಗುವ ಕಾಲ ಹತ್ತಿರವಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ರೆಪೊ ದರ ಹೆಚ್ಚಳವಾದ ನಂತರದಲ್ಲಿ, ಬ್ಯಾಂಕ್‌ನಿಂದ ಸಿಗುವ ಸಾಲದ ಮೇಲಿನ ಬಡ್ಡಿ ಹಾಗೂ ಬ್ಯಾಂಕ್‌ನಲ್ಲಿನ ಠೇವಣಿ ಹಣಕ್ಕೆ ಸಿಗುವ ಬಡ್ಡಿ ಕೂಡ ಜಾಸ್ತಿ ಆಗಬಹುದು. ಸಾಲದ ಬಡ್ಡಿ ದರವನ್ನು ಎಸ್‌ಬಿಐ ಮತ್ತು ಬ್ಯಾಂಕ್ ಆಫ್ ಬರೋಡ ಈಗಾಗಲೇ ಹೆಚ್ಚಿಸಿವೆ ಎಂಬುದು ಇಲ್ಲಿ ಉಲ್ಲೇಖಾರ್ಹ. ಸಣ್ಣ ಹೂಡಿಕೆದಾರರ ಪಾಲಿಗೆ ಸುರಕ್ಷಿತ ಯೋಜನೆಗಳಾಗಿರುವ ಪಿಪಿಎಫ್, ರಾಷ್ಟ್ರೀಯ ಉಳಿತಾಯಪತ್ರದ (ಎನ್‌ಎಸ್‌ಸಿ) ಮೇಲೆ ಸಿಗುವ ಬಡ್ಡಿ ದರವನ್ನು ಹೆಚ್ಚಿಸುವತ್ತಲೂ ಕೇಂದ್ರ ಸರ್ಕಾರವು ಮುಂದಡಿ ಇರಿಸಬೇಕು. ಈ ಯೋಜನೆಗಳ ಅಡಿ ಈಗ ಸಿಗುತ್ತಿರುವ ಬಡ್ಡಿ ದರವು ಉಳಿತಾಯವನ್ನು ಉತ್ತೇಜಿಸುವಂತೆ ಇಲ್ಲ. ಅಲ್ಲದೆ, ಬಡ್ಡಿ ದರವನ್ನೇ ನೆಚ್ಚಿಕೊಂಡು ಜೀವನ ಸಾಗಿಸುವ ವಯೋವೃದ್ಧರ ಖರ್ಚುಗಳಲ್ಲಿನ ಏರಿಕೆಯನ್ನು ನಿಭಾಯಿಸುವಂತೆಯೂ ಇಲ್ಲ. ಹಣದುಬ್ಬರ ನಿಯಂತ್ರಣದ ಜೊತೆಯಲ್ಲೇ ಈ ಆಯಾಮಗಳತ್ತಲೂ ನೀತಿ ನಿರೂಪಕರು ಗಮನ ನೀಡಬೇಕಿದೆ.

ದಿನದ ಟ್ವೀಟ್

ವ್ಯವಸ್ಥಿತ ಹುನ್ನಾರ

ನಗಣ್ಯಗೊಳ್ಳಬೇಕಾದವು ಪ್ರಮುಖವಾಗುತ್ತಿವೆ, ಪ್ರಮುಖವಾಗಬೇಕಾದವು ನಗಣ್ಯಗೊಳ್ಳುತ್ತಿವೆ; ಅದನ್ನು ವ್ಯವಸ್ಥಿತವಾಗಿಯೇ ಮಾಡಲಾಗುತ್ತಿದೆ!



ಪುಟ್ಟೇಗೌಡ, ನಾಗರಿಕ

ಕಿಡಿನುಡಿ

ಹಣದುಬ್ಬರ ಮತ್ತು ಕೋಮು ತಾಪವು ದೇಶದಾದ್ಯಂತ ದೊಡ್ಡ ಪ್ರಮಾಣದಲ್ಲಿ ಜತೆಜತೆಗೆ ಏರುತ್ತಿರುವಂತೆ ತೋರುತ್ತಿದೆ. ಅಚ್ಚರಿಯಾಗುತ್ತಿದೆ, ಪರಸ್ಪರ ಕ್ರಮಬದ್ಧವಾದ ಸಂಬಂಧವೇನಾದರೂ ಇದೆಯೇ?!



ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 20-4-1997

• **ಐ.ಕೆ. ಗುಜ್ರಾಲ್ ಹೊಸ ನಾಯಕ**

ನವದೆಹಲಿ, ಏ. 19– ಕಳೆದ ಒಂದು ವಾರದಿಂದ ನಡೆದ ನಿರಂತರ ಮಾತುಕತೆಯ ಫಲವಾಗಿ ಇಂದು ರಾತ್ರಿ ವಿದೇಶಾಂಗ ವ್ಯವಹಾರಗಳ ಸಚಿವ ಇಂದ್ರಕುಮಾರ್ ಗುಜ್ರಾಲ್ ಅವರನ್ನು ಎಚ್.ಡಿ.ದೇವೇಗೌಡ ಅವರ ಜಾಗದಲ್ಲಿ ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿ ಸಂಯುಕ್ತ ರಂಗವು ಒಮ್ಮತದಿಂದ ಆಯ್ಕೆ ಮಾಡಿತು.

ಸಂಯುಕ್ತ ರಂಗದ ಎಲ್ಲ ಅಂಗಪಕ್ಷಗಳ ನಾಯಕರು ನಾಳೆ ಐ.ಕೆ.ಗುಜ್ರಾಲ್ ಅವರ ನೇತೃತ್ವದಲ್ಲಿ ರಾಷ್ಟ್ರಪತಿ ಅವರನ್ನು ಭೇಟಿಯಾಗಿ ಸರ್ಕಾರ ರಚಿಸಲು ತಮ್ಮನ್ನು ಆಹ್ವಾನಿಸಬೇಕೆಂದು ಕೋರಲಿದ್ದಾರೆ.

• **ಮೌಲ್ಯಮಾಪನ ಭತ್ಯೆ ಹೆಚ್ಚಳ: ಬಹಿಷ್ಕಾರ ನಿರ್ಧಾರ ಬದಲಿಲ್ಲ**

ಬೆಂಗಳೂರು, ಏ. 19– ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಶಿಕ್ಷಕರ ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆಯನ್ನು ಹೆಚ್ಚಿಸಿ ಸರ್ಕಾರ ಇಂದು ಇಲ್ಲಿ ಆದೇಶ ಹೊರಡಿಸಿದೆ.

ದಿನಭತ್ಯೆಯನ್ನು ಬೆಂಗಳೂರಿನಲ್ಲಿ ದಿನಕ್ಕೆ 90ರಿಂದ 120 ರೂಪಾಯಿಗಳಿಗೆ ಹಾಗೂ ರಾಜ್ಯದ ಇತರ ಕೇಂದ್ರಗಳಲ್ಲಿ ದಿನಕ್ಕೆ ರೂ. 80ರಿಂದ 100ಕ್ಕೆ ಹೆಚ್ಚಿಸಲಾಗಿದೆ. ಸ್ಥಳೀಯ ಭತ್ಯೆಗಳ ದರಗಳನ್ನು ಸಹ ಬೆಂಗಳೂರಿನಲ್ಲಿ ದಿನಕ್ಕೆ 30ರಿಂದ 35 ರೂಪಾಯಿಗೆ ಮತ್ತು ರಾಜ್ಯದ ಇತರ ಕೇಂದ್ರಗಳಲ್ಲಿ ದಿನಕ್ಕೆ 18ರಿಂದ 20 ರೂಪಾಯಿಗೆ ಹೆಚ್ಚಿಸಲಾಗಿದೆ. ಆದರೆ ಸರ್ಕಾರ ಹೆಚ್ಚಿಸಿರುವ ದರಗಳು ಶಿಕ್ಷಕರ ಬೇಡಿಕೆಗಳಿಗೆ ಅನುಗುಣವಾಗಿ ಇಲ್ಲದಿರುವುದರಿಂದ ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದಾಗಿ ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘ ತಿಳಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 20-4-1972

• **ಅಸಮರ್ಪಕ ಖಾಸಗಿ ಶಾಲೆಗಳ ಸ್ವಾಧೀನಕ್ಕೆ ಸರ್ಕಾರದ ಆಲೋಚನೆ**

ಬೆಂಗಳೂರು, ಏ. 19– ಸರಿಯಾದ ಬೋಧನೆ ವ್ಯವಸ್ಥೆಯಿಲ್ಲದ ಹಾಗೂ ಸರ್ಕಾರಿ ಗ್ರ್ಯಾಂಟ್ ದುರುಪಯೋಗವಾಗುವ ಖಾಸಗಿ ಶಾಲೆಗಳನ್ನು ಸರ್ಕಾರವೇ ವಹಿಸಿಕೊಳ್ಳುವ ಬಗ್ಗೆ ಯೋಚನೆ ಮಾಡಲಾಗುತ್ತಿದೆ.

ಕೆಲವು ದಿನಗಳಿಂದ ವಿಧಾನಮಂಡಲದ ಒಳಗೂ ಹೊರಗೂ ಖಾಸಗಿ ಶಾಲೆಗಳ ಬಗ್ಗೆ ಏಳುತ್ತಿರುವ ಟೀಕೆಗಳನ್ನನುಸರಿಸಿ ರಾಜ್ಯ ಸರ್ಕಾರ ಈ ಕ್ರಮದತ್ತ ಯೋಚನೆ ಹರಿಸಿದೆ.

• **ಮನ್ನಣೆ ರದ್ದಾದ ಶಾಲಾ ವ್ಯವಸ್ಥಾಪಕರಿಂದ ಸಿ.ಎಂ.ಗೆ ಸತ್ಕಾರ!**

ಬೆಂಗಳೂರು, ಏ. 19– ಅಕ್ರಮಗಳಿಗಾಗಿ ಸರ್ಕಾರದಿಂದ ಮನ್ನಣೆಯನ್ನು ಕಳೆದುಕೊಂಡಿರುವ ಖಾಸಗಿ ಶಾಲೆಗಳ ವ್ಯವಸ್ಥಾಪಕರು ಕೂಟವೊಂದನ್ನು ರಚಿಸಿಕೊಂಡಿದ್ದಾರೆಂದೂ, ಅವರು ಮುಖ್ಯಮಂತ್ರಿಯವರ ಗೌರವಾರ್ಥ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದಾರೆಂದೂ ಇಂದು ವಿಧಾನಪರಿಷತ್ತಿನಲ್ಲಿ ತಿಳಿಸಿದ ಶ್ರೀ ಮಳ್ಳೂರು ಆನಂದರಾಯರು, ಈ ತಂತ್ರಗಳ ಬಗ್ಗೆ ಮುಖ್ಯಮಂತ್ರಿಯವರು ಹುಷಾರಾಗಿರಬೇಕು ಎಂದರು.

‘ಚಹಾ ಕೊಟ್ಟ ಮಾತ್ರಕ್ಕೇ ಮರುಳಾಗುವವರು ನಮ್ಮ ಮುಖ್ಯಮಂತ್ರಿಗಳಲ್ಲ’ ಎಂದು ನಗುವಿನ ಮಧ್ಯೆ ಉತ್ತರ ನೀಡಿದ ಕೃಷಿಮಂತ್ರಿ ಶ್ರೀ ಕೆ.ಎಚ್.ಪಾಟೀಲರು, ಈ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಸರ್ವಜನಾಂಗದ ಶಾಂತಿಯ ತೋಟಕ್ಕೆ ನೀರು– ಗೊಬ್ಬರ ಹಾಕುವವರಾರು?

ಎಡಮಧ್ಯಮ ಮಾರ್ಗಿಗಳು ಮಾತಾಡುವ ಕಾಲ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಹಿಜಾಬ್ ವಿವಾದದ ನಂತರ ಕೆಲವು ಹಿಂದೂ ಸಂಘಟನೆಗಳು ಕರ್ನಾಟಕದ ಮುಸಲ್ಮಾನ ಸಮುದಾಯದ ವಿರುದ್ಧ ಸಾರಿದ ಸರಣಿ ಬಹಿಷ್ಕಾರಗಳ ಕಾವು ಆರುವ ಮೊದಲೇ ಹುಬ್ಬಳ್ಳಿಯಲ್ಲಿ ಮತ್ತೊಂದು ಗಲಭೆಯ ಉರಿ ಧಗಧಗಿಸಿದೆ. ಶಾಂತಿ ಕದಡಲು ಪಣ ತೊಟ್ಟ ಎರಡೂ ಕಡೆಯ ದುಷ್ಟಶಕ್ತಿಗಳು ತಮ್ಮ ಪೂರ್ವ ಯೋಜಿತ ಕಾರ್ಯಸೂಚಿ ಜಾರಿಗೆ ನಿತ್ಯ ನೆಪ ಹುಡುಕುವಂತೆ ವರ್ತಿಸುತ್ತಿವೆ. ಹೋರಾಟ, ಪ್ರತಿಭಟನೆ ಮತ್ತು ದುಷ್ಕೃತ್ಯಗಳ ನಡುವಿನ ವ್ಯತ್ಯಾಸ ಅಳಿಸಿರುವ ಈ ಸಂಘರ್ಷವು ಸಮಾಜವನ್ನು ಎಲ್ಲಿಗೆ ಒಯ್ದು ಮುಟ್ಟಿಸುತ್ತದೆ ಎಂಬ ಆತಂಕ ಎಲ್ಲಾ ಆರೋಗ್ಯವಂತ ಮನಸ್ಸುಗಳನ್ನು ಕಲಕುತ್ತಿದೆ.

‘ಇದು ಹೀಗೇಕೆ?’ ಎಂಬ ಪ್ರಶ್ನೆಗೆ ತಾಕಲಾಟದ ಮುಂಚೂಣಿಯಲ್ಲಿರುವವರ ನೇರ ಉತ್ತರ: ‘ಇದು ಹಿಂದೂಗಳ ಕ್ರಿಯೆಯಲ್ಲ, ಪ್ರತಿಕ್ರಿಯೆ ಮಾತ್ರ!’ ಇದೇ ಧಾಟಿಯ ಮಾತುಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಅವರ ನೇತೃತ್ವದ ಸರ್ಕಾರದ, ಪಕ್ಷದ ಅನೇಕರ ಬಾಯಿಯಲ್ಲಿ ಪುನರಾವರ್ತನೆಯಾಗಿವೆ. ಆದರೆ ಇವರ ಈ ವಾದ ಹುಬ್ಬಳ್ಳಿ ಪ್ರಕರಣದಲ್ಲಿ ಮುಗ್ಗರಿಸಿದೆ.

ಅಷ್ಟಕ್ಕೂ ಮುಸಲ್ಮಾನರ ಯಾವ ಕ್ರಿಯೆಗೆ ಸರಣಿ ಬಹಿಷ್ಕಾರ, ಗುಂಪುದಾಳಿ ಪ್ರತಿಕ್ರಿಯೆಯಾಗಿದೆ? ಇತ್ತೀಚೆಗಿನ ಕಾಲಘಟ್ಟವನ್ನು ಪರಿಗಣಿಸಿದರೆ, ಇದು ಆರಂಭವಾಗಿದ್ದು ಹಿಜಾಬ್ ವಿವಾದದಿಂದ. ಶಾಲೆಯ ಸಮವಸ್ತ್ರ ನಿಯಮ, ಧಾರ್ಮಿಕ ಆಚರಣೆ ಮತ್ತು ಸಾಂವಿಧಾನಿಕ ಹಕ್ಕುಗಳಿಗೆ ಸಂಬಂಧಿಸಿದ ಈ ವಿಷಯದಲ್ಲಿ ಹಿಂದುತ್ವದ ವಕ್ತಾರರು ಮಧ್ಯೆ ಪ್ರವೇಶಿಸುವ ಅಗತ್ಯವೇ ಇರಲಿಲ್ಲ. ಆದರೆ ಆ ಸಂದರ್ಭ ಅಂತಿಮವಾಗಿ ಹಿಜಾಬು-ಕೇಸರಿಶಾಲು ಸಂಘರ್ಷವಾಗಿ, ಜೈ ಶ್ರೀರಾಮ್-ಅಲ್ಲಾಹು ಅಕ್ಬರ್ ಘೋಷಣೆಗಳಾಗಿ, ರಾಜಕೀಯ ಪಕ್ಷಗಳ ಬೇಳೆ ಬೇಯುವಿಕೆಗೆ ಕುದಿನೀರಾಗಿ ಪರಿಣಮಿಸಿದ್ದು ಆಕಸ್ಮಿಕ ವಿಸ್ಮಯದಂತೆ ಗೋಚರಿಸಿದರೂ ಒಳಗಿನ ತಳಮಳಕ್ಕೆ ಸಾಲು ಕಾರಣಗಳಿದ್ದವು.

ಉಡುಪಿಯ ಹುಡುಗಿಯರ ಹೇಳಿಕೆ, ವಿವಿಧೆಡೆ ಕಾಲೇಜುಗಳ ಬಹಿಷ್ಕಾರ, ಕೋರ್ಟ್ ಎದುರಿಗಿರಿಸಿದ ಕೋರಿಕೆ, ತೀರ್ಪು ವಿರೋಧಿಸಿದ ಬಂದ್ ಕರೆ ಇತ್ಯಾದಿ ಬೆಳವಣಿಗೆಗಳು ಒಂದು ಬದಿಯ ರಾಜಕೀಯ ಹಿತಾಸಕ್ತಿಗಳಿಗೆ ಆಹಾರವಾದರೆ, ಮಂಡ್ಯದ ಬಾಲೆಯ ‘ಅಲ್ಲಾಹು ಅಕ್ಬರ್’ ಘೋಷಣೆಯಲ್ಲಿ ಮತ್ತೊಂದು ಪಂಗಡ ತನ್ನ ಲಾಭಾಂಶ ಹುಡುಕತೊಡಗಿತು. ಬೀಸಿದ ಗಾಳಿಯಲ್ಲಿ ಮನದಣಿಯೆ ತೂರಿಕೊಂಡು ಮುಂದಿನ ಚುನಾವಣೆಗೆ ಕಾಳು ಸಂಗ್ರಹಿಸಿತು ಅಧಿಕಾರಸ್ಥ ಬಿಜೆಪಿ. ವಿರೋಧಪಕ್ಷ ಕಾಂಗ್ರೆಸ್ಸಿಗೆ ಅರೆ ತಟಸ್ಥ ನಿಲುವಿನಲ್ಲಿ ವಿಲಿವಿಲಿ ಒದ್ದಾಡುವ ಸ್ಥಿತಿ. ಜೆಡಿಎಸ್ ಪಕ್ಷದ್ದು ಎಂದಿನಂತೆ ಜೋಕಾಲಿ ಆಟ. ಅಮಾಯಕ ಬಾಲಕಿಯ ಪ್ರಕರಣ ಅಂತರರಾಷ್ಟ್ರೀಯ ಮಹತ್ವ ಪಡೆದು ಅಲ್‌ಕೈದಾ ಉಗ್ರನ ವಿಡಿಯೊ ಸಂದೇಶಕ್ಕೂ ಕಾರಣವಾಗಿದ್ದು ಮತ್ತೊಂದು ಮಜಲು.

ಸಾಮಾನ್ಯವಾಗಿ ಕೋಮುವಾದಿ ಶಕ್ತಿಗಳಿಗೆ ಝಳಪಿಸುವ ಕತ್ತಿಯಾಗಿ, ರಕ್ಷಿಸುವ ಗುರಾಣಿಯಾಗಿ ಒದಗಿ ಬರುವುದು ಭಾವೋದ್ವೇಗದ ಸಂಗತಿಗಳು. ಆದರೆ ಇತ್ತೀಚೆಗೆ ಸರಣಿ ವಿವಾದಗಳನ್ನು ಸೃಷ್ಟಿಸುವಾಗ ಈ ಗುಂಪುಗಳು ತರ್ಕಬದ್ಧ ಪ್ರಶ್ನೆಗಳನ್ನು ಎತ್ತಿ ತಮ್ಮ ಹೋರಾಟಕ್ಕೆ ತಾತ್ವಿಕ ಆಯಾಮ ಕಂಡುಕೊಳ್ಳಲು ಯತ್ನಿಸಿದ್ದು ಹೊಸದು.

ಒಂದು ಧರ್ಮದ ಸಂಪ್ರದಾಯವಾದ ಹಲಾಲ್ ಕ್ರಿಯೆಯನ್ನು ಇನ್ನೊಬ್ಬರು ಏಕೆ ಒಪ್ಪಿಕೊಳ್ಳಬೇಕು? ‘ಅಲ್ಲಾ ಹೊರತಾಗಿ ಬೇರೆ ದೇವರಿಲ್ಲ’ ಎಂಬ ಕೂಗನ್ನು ಅನ್ಯ ಧರ್ಮೀಯರು ಪ್ರತಿನಿತ್ಯ ಹೇಗೆ ಸಹಿಸಿಕೊಳ್ಳಬೇಕು? ಮೂರ್ತಿಪೂಜೆಯಲ್ಲಿ ನಂಬಿಕೆಯಿಲ್ಲದವರಿಗೆ ವಿಗ್ರಹ ತಯಾರಿಸಲು, ದೇವಸ್ಥಾನ-ಜಾತ್ರೆಗಳಲ್ಲಿ ಮಾರಾಟ ಮಾಡಲು ನೈತಿಕತೆ ಹೇಗೆ ಬರುತ್ತದೆ? ತಮ್ಮ ಧಾರ್ಮಿಕ ಗುರುಗಳೇ ‘ಹರಾಮ್’ ಎಂದು ಕರೆಯುವ ಕಾರ್ಯಗಳಲ್ಲಿ ತೊಡಗುವುದು ಧರ್ಮಭ್ರಷ್ಟತೆಯಲ್ಲವೇ? ಮೇಲ್ನೋಟಕ್ಕೆ ಎಂತಹ ವಿರೋಧಿಗಳಿಗೂ ಹೌದೆನ್ನಿಸಬಹುದಾದ ಈ ತರ್ಕಸರಣಿ ಎರಡು ಅಲಗಿನ ಖಡ್ಗವಿದ್ದಂತೆ. ಇದರ ಮೊದಲ ಬಲಿ ನಮ್ಮ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಹಿಷ್ಣುತೆ. ನಂತರ ಸೌಹಾರ್ದ, ಸಾಮರಸ್ಯ, ಸಹಬಾಳ್ವೆ, ಸಾಮುದಾಯಿಕ ಏಳಿಗೆಯ ಸಂಹಾರ.

ಯಾವುದೇ ಧಾರ್ಮಿಕ ಸಮುದಾಯ, ರಾಜಕೀಯ ಸಿದ್ಧಾಂತವು ದೇಶಕಾಲದ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾದರೆ, ಅಸ್ತಿತ್ವದಲ್ಲಿ ಉಳಿಯಬೇಕಾದರೆ ಬದಲಾವಣೆಗೆ ಒಡ್ಡಿಕೊಳ್ಳುವುದು ಅನಿವಾರ್ಯ. ಕಾಲಕ್ರಮೇಣ ಅರ್ಥ ಕಳೆದುಕೊಂಡು ಅಂಧಾಚರಣೆಯಾಗಿ ಚಾಲ್ತಿಯಲ್ಲಿರುವ ನಂಬಿಕೆಗಳ ಬಗ್ಗೆ ಆಯಾ ಸಮುದಾಯದೊಳಗೆ ಆಂತರಿಕ ವಿಮರ್ಶೆ ಏರ್ಪಡುವುದು ಅಪೇಕ್ಷಣೀಯ. ಇಂತಹ ಅವಲೋಕನಕ್ಕೆ ಒಡ್ಡಿಕೊಳ್ಳದ ಹಟಮಾರಿ ಧೋರಣೆಯೇ ಮುಸ್ಲಿಂ ಮೂಲಭೂತವಾದದ ರೂಪದಲ್ಲಿ ಅವತರಿಸುವುದು. ಇದು ಯಾವುದೇ ಸೆಕ್ಯುಲರ್ ಸಮುದಾಯಕ್ಕೆ ಅಪಾಯಕಾರಿಯಷ್ಟೇ ಅಲ್ಲ, ಜೊತೆಗಾರ ಧಾರ್ಮಿಕ ಸಮುದಾಯಗಳ ಹಾದಿಯನ್ನೂ ತಪ್ಪಿಸಬಲ್ಲದು. ಒಂದು ಧರ್ಮದ ಕಠೋರ ಧಾರ್ಮಿಕ ಅಂಧಾಚರಣೆಗಳು, ಪ್ರತಿಪಾದನೆಗಳು, ಪೈಪೋಟಿಗಳು ಇನ್ನೊಂದು ಧರ್ಮದ ಉದಾರವಾದಿ ಮನಸ್ಸುಗಳನ್ನೂ ವಿಚಲಿತಗೊಳಿಸಿ ಪ್ರಚೋದಿಸಬಹುದಾದ ವಿದ್ಯಮಾನವಿದು. ನಶೆ ಯಾವ ಮೂಲಭೂತವಾದದ್ದಾದರೂ ಸಾಮಾಜಿಕ ಶಾಂತಿ, ಸೌಹಾರ್ದಕ್ಕೇ ಏಟು.

ಸೌಹಾರ್ದದ ಸಂವೇದನೆ ಹೊರಡಿಸುವ ಪದಪುಂಜಗಳೆಲ್ಲಾ ಆದರ್ಶದ ನೆಲೆಯಲ್ಲಿ ಅಗದಿ ಚಂದ ಕಾಣಿಸುತ್ತವೆ. ಆದರೆ ಸಮುದಾಯದೊಳಗೆ ಅನ್ವಯಿಸಲು ಹೊರಟಾಗ ಹೊಮ್ಮುವ ಘಾತು ನಿವಾರಿಸಿಕೊಳ್ಳುವುದು ಸರಳವಲ್ಲ. ಇಂತಹ ಕಾರ್ಯಕ್ಕೆ ಕೈಹಾಕಿದವರು ಎರಡೂ ಕೋಮುಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಎರಡೂ ಬದಿಯವರು ಪರಸ್ಪರ ಕೇಳಿಕೊಳ್ಳಬೇಕಾದ ಪ್ರಶ್ನೆಗಳಿಗೆ ಸೌಹಾರ್ದ ಪ್ರತಿಪಾದಕರೇ ಉತ್ತರದಾಯಿಗಳಾಗಿ ಸಮಯ, ಸಂಯಮ, ವಿವೇಕ ವಿನಿಯೋಗಿಸಬೇಕು.



ಕೋಮು ದ್ವೇಷವನ್ನು ವ್ಯವಸ್ಥಿತವಾಗಿ, ಉದ್ದೇಶಪೂರ್ವಕವಾಗಿ ಹರಡುವವರ ಮನಃಪರಿವರ್ತನೆ ಕಾರ್ಯ ವ್ಯರ್ಥ. ಆದರೆ ತಪ್ಪು ತಿಳಿವಳಿಕೆಯಿಂದ, ಮಾಹಿತಿ ಕೊರತೆಯಿಂದ, ಹಾದಿತಪ್ಪಿಸುವವರ ದೆಸೆಯಿಂದ ಅನ್ಯ ಕೋಮಿನವರನ್ನು ಅನುಮಾನಿಸುತ್ತಿರುವ ಬಹುದೊಡ್ಡ ಸಂಖ್ಯೆಯ ಸಾಮಾನ್ಯ ಜನರನ್ನು ಖಂಡಿತವಾಗಿ ತಿದ್ದಲು ಸಾಧ್ಯ; ಅದು ಅಗತ್ಯವಾಗಿ ಆಗಬೇಕಾದ ಕೆಲಸ. ಆದರೆ ಅವರಿಗೆ ತಿಳಿ ಹೇಳುವವರ ಬಗ್ಗೆ ವಿಶ್ವಾಸವಿರಬೇಕು. ಅಂತಹ ವಿಶ್ವಾಸ ಮೂಡಿಸುವ ನಿಷ್ಪಕ್ಷಪಾತ ವರ್ತನೆ, ಧೋರಣೆಯನ್ನು ಪ್ರಗತಿಪರರು ಎಂದು ಗುರುತಿಸಿಕೊಳ್ಳುವವರು ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ.

ಆದರೆ ವಿಚಾರವಾದಿಗಳು, ಪ್ರಗತಿಪರರು ಎಂದರೆ ಒಂದು ಕೋಮನ್ನು ಓಲೈಸುವವರು, ಆ ಧರ್ಮದ ಹುಳುಕು-ಊನಗಳ ಕುರಿತು ಮಾತಾಡದವರು, ಕಾಂಗ್ರೆಸ್ ಒಲವುಳ್ಳವರು ಎಂಬ ವ್ಯಾಪಕ ಅಸಮಾಧಾನ ಇದೆ. ತಳಮಟ್ಟದಲ್ಲಿ ಹೆಚ್ಚೇನೂ ಪ್ರಭಾವಶಾಲಿಯಲ್ಲದ ಈ ಗುಂಪು ಅನೇಕ ಬಾರಿ ಉದ್ದೇಶಕ್ಕೆ ತದ್ವಿರುದ್ಧವಾಗಿ ಕೋಮುವಾದಿಗಳ ಧ್ರುವೀಕರಣಕ್ಕೆ ಕಾರಣವಾಗುವುದು ವಿಪರ್ಯಾಸ.

ಸೌಹಾರ್ದದ, ಶಾಂತಿಯ ಪಾಠಗಳು ನಮಗೇ ಏಕೆ? ಎಲ್ಲಾ ಸನ್ನಿವೇಶಗಳಲ್ಲಿ ನಿಷ್ಪಕ್ಷಪಾತವಾಗಿ, ನಿಷ್ಠುರವಾಗಿ ಏಕೆ ಮಾತನಾಡುವುದಿಲ್ಲ? ನಡೆದ ಕೊಲೆಗಳಿಗಿಂತ ಒಡೆದ ಕಲ್ಲಂಗಡಿ ದೊಡ್ಡದೇಕೆ ಆಗಬೇಕು? ಗಲಭೆಕೋರ ಗುಂಪು ಪೊಲೀಸ್ ಠಾಣೆಗಳ ಮೇಲೆ ದಾಳಿ ನಡೆಸುವುದು ಏನನ್ನು ತೋರಿಸುತ್ತದೆ? ಇಂತಹ ಅನೇಕ ಪ್ರಶ್ನೆಗಳನ್ನು ಹಿಂದುತ್ವವಾದಿಗಳು ಎತ್ತುತ್ತಾರೆ. ಅಸಹಾಯಕರ, ದುರ್ಬಲರ, ಅಲ್ಪಸಂಖ್ಯಾತರ ಬೆಂಬಲಕ್ಕೆ ನಿಲ್ಲುವುದು ಯಾವುದೇ ಮಾನವೀಯ ಗುಣದ ಪ್ರಾಥಮಿಕ ಲಕ್ಷಣ. ಹಾಗೆಯೇ ಒಟ್ಟು ಸಮಾಜದ ಸಾಮರಸ್ಯದ ದೃಷ್ಟಿಯಿಂದ ತಪ್ಪು-ಒಪ್ಪನ್ನು ನಿಷ್ಠುರವಾಗಿ ಹೇಳುವ ನಡೆ ಇಲ್ಲದಿದ್ದರೆ ಅಪನಂಬಿಕೆಗೆ ಗುರಿಯಾಗಬೇಕಾಗುತ್ತದೆ. ಅಪನಂಬಿಕೆ ಮಿತಿಮೀರಿದಾಗ ಕೆಮ್ಮಿದ್ದು ಕೂಡ ಕ್ಯಾಕರಿಸಿದಂತೆ ಕೇಳಿಸುತ್ತದೆ.

ಈಗ ಧಾರ್ಮಿಕ ನೆಲೆಯಲ್ಲಿ ಮತ್ತು ಸಿದ್ಧಾಂತದ ಪರಿಧಿಯಲ್ಲಿ ವೈಚಾರಿಕತೆ ಕಳೆದುಕೊಂಡವರ ಆರ್ಭಟ ಜೋರಾಗಿ ಕೇಳುತ್ತಿರಬಹುದು. ವಾಸ್ತವದಲ್ಲಿ ಈ ಎರಡೂ ಪಂಗಡಗಳ ಪ್ರತಿಪಾದಕರು, ಅನುಯಾಯಿಗಳ ಸಂಖ್ಯೆ ಅತ್ಯಂತ ಕಡಿಮೆ. ಆದರೆ ತೀವ್ರ ಪಂಥಾಂಧರಲ್ಲಿ ಕಣ್ಮರೆಯಾಗಿರುವ ವಿವೇಕ, ಸಂಯಮ, ಸಭ್ಯತೆ, ವಾಸ್ತವಿಕತೆ, ಸಮಚಿತ್ತ, ನಿಷ್ಠುರತೆ, ಭವಿಷ್ಯದ ನೋಟ ಹೊಂದಿರುವ ಬಹುದೊಡ್ಡ ‘ಎಡಮಧ್ಯಮ ಮಾರ್ಗಿ’ ಸಮುದಾಯ ನಮ್ಮ ನಡುವೆಯೇ ಇದೆ. ಎಡಬಿಡಂಗಿಗಳು ಎಂಬ ಮೂದಲಿಕೆಗೆ ಗುರಿಯಾಗಿರುವ ಈ ವರ್ಗ ಮಾತನಾಡಿ ಸಮಾಜದಲ್ಲಿ ವಿಶ್ವಾಸ ಮೂಡಿಸುವ ತುರ್ತು ಈಗ ಉದ್ಭವಿಸಿದೆ.

ಚುರುಮುರಿ



ಮಿಷನ್ ಕಮಿಷನ್!

• ಗುರು ಪಿ.ಎಸ್.

ಮಿನಿಸ್ಟರ್ ವಿಜಿಗೆ ತುಂಬಾ ಕ್ಲೋಸ್ ಇರೋ ಒಬ್ರ ಮುಂದೆ ನಿಂತ ಮುದ್ದಣ್ಣ, ‘ನಿಮ್ಮ ಸಚಿವರ ಅಡ್ವೈಸರ್ ಪೋಸ್ಟ್‌ಗೆ ನನ್ನ ಹೆಸರು ರೆಕ್ಮಂಡ್ ಮಾಡಿ ಸರ್’ ಎಂದು ಬೇಡಿಕೊಂಡ.

‘ನೀನು ಅಡ್ವೈಸರ್ ಆದ್ರೆ ನಂಗೇನ್ ಲಾಭ’ ಕೇಳ್ದ ಆ ವ್ಯಕ್ತಿ.

‘ಪ್ರತೀ ತಿಂಗಳೂ ನನ್ನ ಸ್ಯಾಲರೀಲಿ ನಿಮ್ಗೆ 20 ಪರ್ಸೆಂಟ್ ಕಮಿಷನ್...’

ವಾರದಲ್ಲೇ ಆಫರ್ ಲೆಟರ್ ಬಂತು.

ಕೆಲವೇ ದಿನಗಳಲ್ಲಿ ಮಿನಿಸ್ಟರ್ ವಿಜಿಗಿಂತ ಅಡ್ವೈಸರ್ರೇ ಫೇಮಸ್ ಆಗಿಬಿಟ್ಟ.

‘ಏನ್ ಮುದ್ದಣ್ಣ, ನಿಮ್ಮ ಮಿನಿಸ್ಟರ್ ಈಗ ನನ್ನ ಕೈಗೇ ಸಿಗ್ತಿಲ್ಲ, ಒಂದ್ ಇಂಪಾರ್ಟೆಂಟ್ ಕೆಲಸ ಇತ್ತು ಮಾಡಿಸಿಕೊಡು’ ಕೇಳ್ದ ಆ ‘ರೆಕ್ಮಂಡ್’ ಮನುಷ್ಯ.

‘30% ಕಮಿಷನ್ ಕೊಟ್ಟರೆ ನಿಮ್ಮ ಕೆಲಸ ಆಗುತ್ತೆ...’ ಮುದ್ದಣ್ಣನ ವರಸೆ ಕಂಡು ಆ ವ್ಯಕ್ತಿಯ ಪಿತ್ತ ನೆತ್ತಿಗೇರಿತು. ಅದನ್ನು ತೋರಗೊಡದೆ ಹಲ್ಲು ಗಿಂಜಿ ಕಮಿಷನ್ ದುಡ್ಡು ಕೊಟ್ಟು ಹೊರಟ.

ಮುದ್ದಣ್ಣನ ಚಾಕಚಕ್ಯತೆ, ಅವನು ಎಲ್ಲದರಲ್ಲೂ ಕಮಿಷನ್ ಹೊಡೆಯುವ ಪರಿ, ಮೇಲೇರಿಸಿದವರನ್ನೇ ಕೆಳಗಿಳಿಸುವ ವೈಖರಿಯ ಬಗ್ಗೆ ‘ರಾಜಕೀಯ ಪಡಸಾಲೆ’ಯಲ್ಲಿ ಮೆಚ್ಚುಗೆಯ ಮಾತುಗಳು ಕೇಳಿಬರಲಾರಂಭಿಸಿದವು.

‘ಇಂಥ ಅಡ್ವೈಸರ್ ನಮಗೂ ಸಿಗಬಾರದಾ’ ಎಂದು ಉಳಿದ ಮಿನಿಸ್ಟರ್‌ಗಳು ಕೈ ಕೈ ಹಿಸುಕಿಕೊಳ್ಳತೊಡಗಿದರು.

ಮಂತ್ರಿ ಆಗಬೇಕೆಂಬ ಮಹದಾಸೆ ಹೊಂದಿದ್ದ ಎಮ್ಮೆಲ್ಲೆ ಒಬ್ರು ಮುದ್ದಣ್ಣನನ್ನ ಭೇಟಿಯಾದರು.

‘ನಾನು ಮಂತ್ರಿಯಾಗ್ಬೇಕು’

‘ಎಲ್ಲದರಲ್ಲೂ 40% ಕಮಿಷನ್ ಕೊಟ್ಟರೆ ಆಗ್ತೀರ...’

‘ಡನ್’

‘ಮಿಷನ್ ಕಮಿಷನ್’ ಪ್ರಾರಂಭವಾಯಿತು. ವಿಜಿ ಏನು ಹೇಳಿದರೂ ಕಾಂಟ್ರವರ್ಸಿ ಆಗತೊಡಗಿತು. ಹಾಗೆ ಮುದ್ದಣ್ಣನೇ ಮಾಡತೊಡಗಿದ.

ವಿಜಿ ಮಂತ್ರಿಗಿರಿ ಹೋಯಿತು. 40 ಪರ್ಸೆಂಟ್ ಆಶ್ವಾಸನೆಯ ಎಮ್ಮೆಲ್ಲೆ ಈಗ ಹೊಸ ಮಿನಿಸ್ಟರ್. ಮುದ್ದಣ್ಣನೇ ಅವನಿಗೆ ಅಡ್ವೈಸರ್!

ಹಳೇ ಮಿನಿಸ್ಟರ್ ಒಬ್ರು ಬಂದು ಮುದ್ದಣ್ಣನ ಮುಂದೆ ನಿಂತರು.

‘ನಾನು ಸೀಎಂ ಆಗಬೇಕು...’

‘50 ಪರ್ಸೆಂಟ್‌ಗೆ ಓಕೆ ಅಂದ್ರೆ ನೀವೇ ಮುಖ್ಯಮಂತ್ರಿ...’!

ಸಂಗತ

ಇದು ಬರೀ ಜಾತ್ರೆಯಲ್ಲೋ ಅಣ್ಣಾ...!

ಸಹಬಾಳ್ವೆಗೆ ಸಾಕಾರರೂಪ ಕೊಡುವ ಒಂದು ಕೊಂಡಿಯಾಗಿದ್ದ ಜಾತ್ರೆಗಳು ಇಂದು ಯಾವ ಸ್ವರೂಪ ಪಡೆದುಕೊಳ್ಳುತ್ತಿವೆ?

• ಎಚ್.ಎಚ್.ನದಾಫ ಹತ್ತಿಮತ್ತೂರು

ಜಾತ್ರೆ ಎಂದರೆ ಊರಿಗೆ ಊರೇ ಸಂಭ್ರಮಪಡುವ ದಿನ. ಜಾತಿ- ಮತ- ಪಂಥ ಭೇದವಿಲ್ಲದೆ ಎಲ್ಲ ಕುಲ ವೃತ್ತಿಬಾಂಧವರು ಇದರಲ್ಲಿ ಭಾಗಿಯಾಗಿ ಸಹಕಾರ ಹಾಗೂ ಸಹಯೋಗದಿಂದ ಪರಸ್ಪರ ಒಂದಾಗಿ ನಡೆದುಕೊಳ್ಳುವುದಕ್ಕೆ ಇದು ಮಾರ್ಗಸೂಚಿ. ಮೂಲತಃ ಬುಡಕಟ್ಟು ಸಮಾಜಗಳ ನಡುವಿನ ವ್ಯಾಪಾರ ವಿನಿಮಯಕ್ಕಾಗಿ ರೂಪುಗೊಂಡ ಇದು, ಊಳಿಗಮಾನ್ಯ ಕಾಲಕ್ಕೆ ವಿಸ್ತೃತರೂಪ ತಾಳಿ ಮಾರುಕಟ್ಟೆಯ ಸ್ವರೂಪವನ್ನು ಪಡೆದುಕೊಂಡಿತು.

ನಮ್ಮ ಜನಪದರು ಎಲ್ಲರಿಗೂ ಉದ್ಯೋಗ ಕಲ್ಪಿಸಿಕೊಡಬೇಕು ಎಂಬ ಹಿನ್ನೆಲೆಯಲ್ಲಿಯೇ ಸೃಷ್ಟಿಸಿದ ಈ ಜಾತ್ರೆಗಳಲ್ಲಿ, ವಿವಿಧ ವೃತ್ತಿಯವರು ತಯಾರಿಸಿದ ವಸ್ತುಗಳನ್ನು ಜಾತ್ರೆಯ ಆಚರಣೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಅದನ್ನು ಸಾಕಾರಗೊಳಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ, ದೇವರಿಗೆ ನೈವೇದ್ಯ ಸಲ್ಲಿಸುವ ಪದಾರ್ಥ ಹೊಸ ಗಡಿಗೆಯಲ್ಲಿಯೇ ಬೆಂದು ತಯಾರಾಗಿರಬೇಕು. ಈ ಅಡುಗೆ ಮನೆಯಲ್ಲಿದ್ದ ಪದಾರ್ಥವನ್ನು ಬಳಸುವಂತಿಲ್ಲ. ಏಕೆಂದರೆ ಅದನ್ನು ಈಗಾಗಲೇ ಬಳಸಿರುತ್ತಾರೆ. ಹಾಗಾಗಿ ದೇವರಿಗಾಗಿಯೇ ಹೊಸದಾಗಿ ಖರೀದಿಸಿ ತರಬೇಕು.


ಜಾತ್ರೆಯ ಸಂದರ್ಭದಲ್ಲಿ ದೇವರ ದರ್ಶನಕ್ಕಾಗಿ ಹೊಸ ಬಟ್ಟೆಗಳನ್ನು ತೊಡಬೇಕು. ಹೆಣ್ಣು ಮಕ್ಕಳಂತೂ ಹೊಸ ಬಳೆಗಳನ್ನು ತೊಡಲೇಬೇಕು. ಅಲ್ಲದೆ ಜಾತ್ರೆಗೆ ಬರಮಾಡಿಕೊಂಡ ಸಂಬಂಧಿಕರನ್ನು ಹೊಸ ಬಟ್ಟೆ ತೊಡಿಸಲೇಬೇಕು. ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಹೊಸತನ ಬೇಕೇಬೇಕು ಎನ್ನುವಂತಹ ಸಂಪ್ರದಾಯವನ್ನು ಹುಟ್ಟುಹಾಕಿ, ಎಲ್ಲ ವೃತ್ತಿಯವರಿಗೂ ಆರ್ಥಿಕ ಸಂಪತ್ತು ದೊರಕುವ ಹಾಗೆ ನಮ್ಮ ಹಿರೀಕರು ಜಾತ್ರೆಗಳನ್ನು ಸೃಷ್ಟಿಸಿದ್ದರು.

ಜನಪದರು ಈ ಜಾತ್ರೆಗಾಗಿ ಮೊದಲೇ ಏನೆಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡು ಅದರ ಬರುವಿಕೆಗಾಗಿ ಕಾಯುತ್ತಿರುತ್ತಾರೆ. ಸಂಬಂಧಿಕರಿಗೆ ಆಹ್ವಾನಿಸಿ ಸುಖ-ದುಃಖ ಹಂಚಿಕೊಂಡು, ಪರಸ್ಪರ ಖುಷಿಯಿಂದ ಬೆರೆತು ಮನಸ್ಸನ್ನು ಚೇತೋಹಾರಿ ಆಗಿಸಿಕೊಳ್ಳುವಂತಹದ್ದು, ಸ್ವಂತಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಳ್ಳುವುದು, ಮನೆಗೆ, ಕೃಷಿಗೆ ಮತ್ತು ಕಾರ್ಮಿಕ ಕೆಲಸಕ್ಕೆ ಬೇಕಾಗುವ ಉಪಕರಣಗಳನ್ನು ಖರೀದಿಸುವುದು ಎಲ್ಲವೂ ನಡೆಯುತ್ತವೆ.

ಒಂದು ಕಾಲಕ್ಕಂತೂ ಜನ ತಮ್ಮ ಮಾರುಕಟ್ಟೆಯ ಬಹುಪಾಲು ಬೇಡಿಕೆಗಳನ್ನು ಜಾತ್ರೆಯ ಸಂದರ್ಭದಲ್ಲಿಯೇ ಈಡೇರಿಸಿಕೊಳ್ಳುತ್ತಿದ್ದರು. ಹಾಗಾಗಿ ಜಾತ್ರೆ ಎಂದರೆ ಸಾಕು ಅದು ಬಹುಮೂಲ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಸುದಿನ ಎಂಬ ಭಾವನೆ ಇದೆ. ಅನೇಕ ವೃತ್ತಿವಂತರು ವರ್ಷದ ಸಂಪಾದನೆಯನ್ನು ಈ ಜಾತ್ರೆಗಳಲ್ಲಿಯೇ ದುಡಿದು ಜೀವನಕ್ಕೆ ಆಧಾರ ಮಾಡಿಕೊಳ್ಳುತ್ತಿದ್ದರು.

ಈ ಹಿನ್ನೆಲೆಯಲ್ಲಿ ಜಾತ್ರೆ ಎನ್ನುವುದು ಸಹಬಾಳ್ವೆಗೆ ಸಾಕಾರರೂಪ ಕೊಡುವ ಒಂದು ಕೊಂಡಿ. ಈ ಸಹಬಾಳ್ವೆಗೆ ಸಹಕಾರ ಎಂಬಂತೆ ದೇವರುಗಳ ನಡುವೆ ಸಂಬಂಧ ಬೆಸೆಯುವುದನ್ನೂ ಜಾತ್ರೆಗಳು ಸಾಕ್ಷೀಕರಿಸುತ್ತವೆ. ಕೆಲವು ಜಾತ್ರೆಗಳಲ್ಲಿ ಆರಾಧನೆಗೊಳ್ಳುವ ಪ್ರಮುಖ ದೈವ ಅದೇ ಊರಿನ ಇತರ ಕುಲಕಸುಬು ಸಮುದಾಯಗಳ ದೈವಗಳನ್ನು ಭೇಟಿ ಮಾಡುವ ಪರಿಪಾಟವಿದೆ. ಇದು ಹಿಂದೂ ದೈವಗಳ ನಡುವಿನ ಬಂಧುತ್ವವನ್ನು ಸಾಕ್ಷೀಕರಿಸಿದರೆ, ಇನ್ನು ವಿವಿಧ ಧರ್ಮಗಳ ದೇವರ ನಡುವೆಯೂ ಸಂಬಂಧ ಕಲ್ಪಿಸುವ ಆಚರಣೆಗಳು ನಮ್ಮ ಜನಪದರಲ್ಲಿ ಇವೆ. ಇದು ಮೊಹರಂ ಆಚರಣೆಯಲ್ಲಿ ಸಾಕಾರಗೊಳ್ಳುತ್ತದೆ. ಕೆಲವು ಆಚರಣೆಗಳು ನಡೆದಾಗ ಅಕ್ಕತಂಗಿ, ಅಣ್ಣತಮ್ಮ ವರ್ಷಕ್ಕೊಮ್ಮೆ ಭೇಟಿಯಾಗಿ ತಮ್ಮ ಸುಖದುಃಖ ಹಂಚಿಕೊಳ್ಳುತ್ತಾರೆ ಎಂಬ ಪ್ರತೀತಿ ಇದೆ.

ಇಂತಹ ಬಹುಮೂಲ ಆಶಯಗಳನ್ನು ಹೊತ್ತು ಜನಪದರ ನೆಮ್ಮದಿಗೆ ಮತ್ತು ಅವರ ಆರ್ಥಿಕ ವ್ಯವಹಾರಗಳಿಗೆ ವೇದಿಕೆಯಾಗುವ ಜಾತ್ರೆಗಳಿಗೆ ಈಗೀಗ



ಕೋಮು ಎಂಬ ಗರ ಅಪ್ಪಳಿಸುತ್ತಿದೆ. ಇದು ಯುವಕರ ಮೈಮೇಲೆ ಆವರಿಸಿ ಅವರನ್ನು ಮತಿಹೀನರನ್ನಾಗಿ ಮಾಡುತ್ತಿದೆ. ಎಷ್ಟು ಯುವಕರು ಇದರ ಭ್ರಾಂತಿಗೆ ಒಳಗಾಗಿ ಕುಣಿಯುತ್ತಾರೆಯೋ ಹೇಳತೀರದು. ಒಂದು ಕಾಲಕ್ಕೆ ಸಮಾಜದ ಸ್ವಸ್ಥ ಬದುಕಿಗೆ ನಾಂದಿಯಾಗುತ್ತಿದ್ದ ಜಾತ್ರೆಗಳು ಇಂದು ಕೆಲವರ ಕದನದ ಗೂಡುಗಳಾಗಿ ಪರಿವರ್ತನೆಯಾಗುತ್ತಿವೆ.

ಇಂತಹ ಕಾರ್ಯಗಳು ಜನರ ಆರೋಗ್ಯವಂತ ಜೀವನಕ್ಕೆ ಯಾವ ರೀತಿ ಹೊಡೆತ ಕೊಡುತ್ತಿವೆ ಎಂಬುದನ್ನು ನೋಡಿದರೆ, ಆ ದೇವರುಗಳೇ ಕಕ್ಕಾಬಿಕ್ಕಿಯಾಗಿ ಓಡುವಂತೆ ಇರುತ್ತದೆ.

ಜಾತ್ರೆಯ ಹೆಸರಿನಲ್ಲಿ ಮನಸ್ಸುಗಳು ವಿಚಲಿತವಾಗುವುದು, ಗುಂಪು ಕಟ್ಟಿಕೊಂಡು ರೋಷಾವೇಶದ ಸ್ಲೋಗನ್‌ಗಳನ್ನು ಇಟ್ಟುಕೊಳ್ಳುವುದು, ವೈಯಕ್ತಿಕ ವೈಷಮ್ಯಗಳನ್ನು ಸಾರ್ವತ್ರಿಕಗೊಳಿಸುವಂತಹ ಅಂಶಗಳ ಆಗರವಾಗಿ ಇಂದಿನ ಜಾತ್ರೆಗಳು ಮೈದಾಳುತ್ತಿವೆ. ವ್ಯಾಪಾರ ವಹಿವಾಟುಗಳು ಮತಧರ್ಮದ ಹಣೆಪಟ್ಟಿಗಳನ್ನು ಕಟ್ಟಿಕೊಂಡು ಆರ್ಥಿಕ ವ್ಯವಹಾರವನ್ನೇ ಕೋಮುಕೇಂದ್ರಿತ ವಹಿವಾಟಾಗಿ ಮಾಡಲು ಸನ್ನದ್ಧವಾಗುತ್ತಿವೆ. ಇದನ್ನು ನೋಡಿದರೆ, ನಮ್ಮ ಜನಪದರ ಬಹುಮುಖಿ ಆಶಯಗಳುಳ್ಳ ಜಾತ್ರೆಗಳ ಮಹದಾಶಯವನ್ನು ಪುನರ್ ಸಾಕ್ಷಾತ್ಕರಿಸಬೇಕಾದ ತುರ್ತು ಅಗತ್ಯ ಇರುವುದು ನಮ್ಮ ಅರಿವಿಗೆ ಬರುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು

ವಾಚಕರ ವಾಣಿ

ಮನಬಂದಂತೆ ತೆರಿಗೆ ವಿಧಿಸಲು ಬ್ರಿಟಿಷರ ಸರ್ಕಾರವೇ?

ಜಿಎಸ್‌ಟಿಯ ಶೇ 5ರ ಸ್ತರವನ್ನು ರದ್ದು ಮಾಡಿ, ಅದರ ವ್ಯಾಪ್ತಿಯಲ್ಲಿರುವ ಸರಕುಗಳನ್ನು ಶೇ 8 ಅಥವಾ ಇನ್ನೂ ಹೆಚ್ಚಿನ ಸ್ತರದ ವ್ಯಾಪ್ತಿಗೆ ಸೇರಿಸಲು ಜಿಎಸ್‌ಟಿ ಮಂಡಳಿ ಚಿಂತನೆ ನಡೆಸಿದೆ ಎಂದು ವರದಿಯಾಗಿದೆ. ಈ ಯೋಚನೆ ಸರಿಯಲ್ಲ. ಹೋಟೆಲ್ ತಿಂಡಿಗಳು ಜಿಎಸ್‌ಟಿಯಿಂದಾಗಿ ದುಬಾರಿಯಾಗಿವೆ. ಅಡುಗೆ ಅನಿಲದ ಬೆಲೆ ಏರಿಕೆಯಿಂದಾಗಿ ಈಗಲೇ ಹೋಟೆಲ್ ತಿಂಡಿ ಗಂಟಲಲ್ಲಿ ಇಳಿಯದಂತಾಗಿದೆ. ಇನ್ನು ಇದನ್ನು 8ರ ವ್ಯಾಪ್ತಿಗೆ ತಂದರೆ ದಿನವೂ ಹೋಟೆಲ್ ತಿಂಡಿ ಅವಲಂಬಿಸಿರುವ ಜನರಿಗೆ ಭಾರಿ ಹೊಡೆತ ಬೀಳಲಿದೆ. ಆದ್ದರಿಂದ ಸ್ಟಾರ್ ಅಲ್ಲದ ಹೋಟೆಲ್‌ಗಳಲ್ಲಿ ಜಿಎಸ್‌ಟಿಯನ್ನು ಶೇ 2 ಅಥವಾ 3ಕ್ಕೆ ಇಳಿಸಬೇಕು. ಜನರ ಆಹಾರ ಪದಾರ್ಥಗಳ ಮೇಲೆ ಹೆಚ್ಚು ತೆರಿಗೆ ವಿಧಿಸುವುದು ನ್ಯಾಯಯುತವಲ್ಲ. ಮನಬಂದಂತೆ ತೆರಿಗೆ ವಿಧಿಸಿ ಜನರನ್ನು ಸುಲಿಯಲು ಇದೇನು ಬ್ರಿಟಿಷರ ಸರ್ಕಾರವೇ?

ಮುಳ್ಳೂರು ಪ್ರಕಾಶ್, ಮೈಸೂರು

ಪ್ರಾಣ ತೆಗೆಯಲು ಪರವಾನಗಿ!

ಬಿಬಿಎಂಪಿಯ ಕಸ ಸಾಗಣೆ ಲಾರಿಗೆ ಸಿಲುಕಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಎಸ್‌ಬಿಐ ಮಹಿಳಾ ಉದ್ಯೋಗಿಯೊಬ್ಬರು ಸೋಮವಾರ ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ಒಂದು ತಿಂಗಳಲ್ಲಿ ಬಿಬಿಎಂಪಿಯ ಕಸ ಸಾಗಣೆ ಲಾರಿಗೆ ಸಿಲುಕಿ ಅಸುನೀಗಿರುವ ಮೂರನೇ ಪ್ರಕರಣವಿದು. ಈ ವಾಹನ ಚಾಲಕರು ಅಧಿಕೃತ ವಾಹನ ಚಲಾವಣೆಯ ಪರವಾನಗಿ ಪಡೆಯದಿರುವ ಬಗ್ಗೆ ಅಥವಾ ವಾಹನ ಚಾಲಕರಲ್ಲದವರೂ ಅನಧಿಕೃತವಾಗಿ ಚಾಲಕರಾಗಿ ಕೆಲಸ ಮಾಡುತ್ತಿರುವ ಬಗ್ಗೆ ಅನುಮಾನ ಮೂಡುತ್ತದೆ. ಅಥವಾ ಅವರಿಗೆ ದ್ವಿಚಕ್ರ ವಾಹನ ಸವಾರರು ಮತ್ತು ಪಾದಚಾರಿಗಳ ಮೇಲೆ ವಾಹನ ಹರಿಸಲು ಅನಧಿಕೃತವಾಗಿ ಪರವಾನಗಿಯೇನಾದರೂ ಇದೆಯೇ ಎಂಬ ಸಂಶಯವೂ ಕಾಡುತ್ತದೆ. ಸಂವೇದನಾಶೀಲತೆಯನ್ನೇ ಸಂಪೂರ್ಣವಾಗಿ ಕಳೆದುಕೊಂಡಿರುವ ಬಿಬಿಎಂಪಿಗೆ ಇದು ಮತ್ತೊಂದು ಘಟನೆಯಷ್ಟೆ. ಮುಂದೆ ಇಂತಹ ಘಟನೆಗಳು ಜರುಗಿದರೂ ಅಧಿಕಾರಿಗಳಂತೂ ತಲೆಕೆಡಿಸಿಕೊಳ್ಳದೆ ಸಮಜಾಯಿಷಿ ನೀಡುವುದರಲ್ಲಿ ನಿರತರಾಗುತ್ತಾರೆ. ಉತ್ತರದಾಯಿತ್ವವೇ ಇಲ್ಲದಂತಿರುವ ಅವರು ಅದರಲ್ಲಿ ಪರಿಣತರು ಸಹ!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಬೆಳಗಾವಿ ಜಿಲ್ಲೆ ವಿಭಜನೆಯಾದರೆ...

ಬೆಳಗಾವಿ ಜಿಲ್ಲೆ ವಿಭಜನೆ ಕುರಿತ ವಿಷಯವನ್ನು ರಾಜಕೀಯ ನಾಯಕರು ಕೆಲ ದಿನಗಳಿಂದ ಮತ್ತೆ ಪ್ರಸ್ತಾಪ ಮಾಡುತ್ತಿರುವುದನ್ನು ಸುದ್ದಿ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಇದರಿಂದ ಜಿಲ್ಲಾ ಹೋರಾಟ ಸಂಘಟನೆಗಳು ಸಕ್ರಿಯವಾಗಿದ್ದು, ಹೋರಾಟಗಾರರು ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಗಡಿ ವಿಷಯವನ್ನು ಮುಂದಿಟ್ಟುಕೊಂಡು ಕನ್ನಡ ಹೋರಾಟಗಾರರು ಜಿಲ್ಲಾ ವಿಭಜನೆ ಸದ್ಯಕ್ಕೆ ಬೇಡ ಎಂದು ಹೇಳುತ್ತಾ ಬಂದಿದ್ದಾರೆ. ಜಿಲ್ಲಾ ವಿಭಜನೆ ಆಗಲೇಬೇಕು ಎಂದು ಸರ್ಕಾರ ನಿಶ್ಚಯಿಸಿದ್ದೇ ಆದರೆ ಈ ಕೆಳಗಿನ ಕ್ರಮಗಳು ಸೂಕ್ತವಾಗಬಹುದು: ಮೊದಲನೆಯದಾಗಿ, ಬೆಳಗಾವಿ ಜಿಲ್ಲೆಯನ್ನು ವಿಭಜಿಸಿ ಬೆಳಗಾವಿ ಮತ್ತು ಚಿಕ್ಕೋಡಿ ಎಂದು ಇಬ್ಭಾಗ ಮಾಡಿ ಚಿಕ್ಕೋಡಿ ಜಿಲ್ಲೆಗೆ ಚಿಕ್ಕೋಡಿ, ನಿಪ್ಪಾಣಿ, ಅಥಣಿ, ಕಾಗವಾಡ, ರಾಯಬಾಗ ತಾಲ್ಲೂಕುಗಳನ್ನು ಮಾತ್ರ ಸೇರಿಸಿ ಉಳಿದ ತಾಲ್ಲೂಕುಗಳನ್ನು ಬೆಳಗಾವಿ ಜಿಲ್ಲೆಯಲ್ಲಿಯೇ ಉಳಿಸಿಕೊಳ್ಳುವುದು. ಎರಡನೆಯದಾಗಿ, ಉಪ ವಿಭಾಗಗಳನ್ನು ಗಮನದಲ್ಲಿಟ್ಟುಕೊಂಡು ವಿಭಜಿಸುವುದಾದರೆ- ಚಿಕ್ಕೋಡಿ ವಿಭಾಗದ ಎಲ್ಲ ತಾಲ್ಲೂಕುಗಳನ್ನು ಒಳಗೊಂಡಂತೆ ಚಿಕ್ಕೋಡಿ ಜಿಲ್ಲೆ ಹಾಗೂ ಗೋಕಾಕ, ಮೂಡಲಗಿ ತಾಲ್ಲೂಕುಗಳನ್ನು ಹೊರತುಪಡಿಸಿ ಬೈಲಹೊಂಗಲ ಉಪವಿಭಾಗದಲ್ಲಿ ಇರುವ ಬೈಲಹೊಂಗಲ, ಸವದತ್ತಿ, ರಾಮದುರ್ಗ, ಕಿತ್ತೂರ ಜೊತೆಗೆ ಖಾನಾಪುರ ತಾಲ್ಲೂಕನ್ನು ಬೈಲಹೊಂಗಲ ಉಪವಿಭಾಗಕ್ಕೆ ಸೇರಿಸಿ ಬೈಲಹೊಂಗಲ ಜಿಲ್ಲೆ ರಚಿಸುವುದು ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ, ಹುಕ್ಕೇರಿ, ಗೋಕಾಕ, ಮೂಡಲಗಿ ತಾಲ್ಲೂಕುಗಳನ್ನು ಇರಿಸಿಕೊಂಡು ಮೂರು ಜಿಲ್ಲೆಗಳನ್ನಾಗಿ ವಿಭಜಿಸುವುದು. ಈ ರೀತಿ ಜಿಲ್ಲೆಗಳನ್ನಾಗಿ ವಿಭಜಿಸಿದರೆ ಮೂರೂ ಜಿಲ್ಲೆಗಳಲ್ಲಿ ಕನ್ನಡ ಭಾಷಿಕರು ಬಹುಸಂಖ್ಯಾತರಾಗಿಯೇ ಉಳಿಯುತ್ತಾರೆ.

ಮೂರನೆಯದಾಗಿ, ಈಗಾಗಲೇ ಬೆಳಗಾವಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಾಗಿ ಕಾರ್ಯನಿರ್ವಹಿಸುತ್ತಿರುವ ಪ್ರದೇಶಗಳನ್ನು ಒಳಗೊಂಡಂತೆ ಅಧಿಕೃತವಾಗಿ ಎರಡು ಜಿಲ್ಲೆಗಳನ್ನಾಗಿ ಘೋಷಿಸುವುದು. ಈ ಮೂರರಲ್ಲಿ ಯಾವುದೇ ತೀರ್ಮಾನದಿಂದ ಪ್ರತೀ ಜಿಲ್ಲೆಯಲ್ಲಿ ಕನ್ನಡಿಗರ ಸಂಖ್ಯೆ ಅಧಿಕವಾಗಿಯೇ ಇರುತ್ತದೆ.

ಸಿ.ಎಂ.ಬೂದಿಹಾಳ, ಬೆಳಗಾವಿ

ಸರ್ಕಾರವನ್ನು ಪ್ರಚೋದಿಸುವುದು ಸಲ್ಲ

ಇತ್ತೀಚಿನ ಹುಬ್ಬಳ್ಳಿ ಹಿಂಸಾಚಾರದ ಆರೋಪಿಗಳ ಮನೆಗಳನ್ನು ಮಧ್ಯಪ್ರದೇಶ, ಉತ್ತರಪ್ರದೇಶ ಮಾದರಿಯಲ್ಲಿ ಬುಲ್ಡೋಜರ್ ಬಳಸಿ ಕೆಡವಬೇಕು ಎಂದು ಕೆಲ ಮಾಧ್ಯಮಗಳು, ವಿಶೇಷವಾಗಿ ಸುದ್ದಿವಾಹಿನಿಗಳು ಸರ್ಕಾರವನ್ನು ಪರೋಕ್ಷವಾಗಿ ಆಗ್ರಹಿಸುತ್ತಿರುವುದು ಅತ್ಯಂತ ಆಘಾತಕಾರಿ ಸಂಗತಿ. ಪ್ರಭುತ್ವವು ತನ್ನ ಪ್ರಜೆಗಳ ಸಾಂವಿಧಾನಿಕ ಹಕ್ಕುಗಳನ್ನು ಮತ್ತು ಮಾನವಹಕ್ಕುಗಳನ್ನು ಉಲ್ಲಂಘಿಸಹೊರಟಾಗ ಅದರ ಕಿವಿ ಹಿಂಡಬೇಕಾದ ಪ್ರಜಾತಂತ್ರದ ನಾಲ್ಕನೇ ಕಂಬವೇ ಹೀಗೆ ಕ್ರೂರ ಕೃತ್ಯಗಳಿಗೆ ಕರೆ ಮತ್ತು ಪ್ರಚೋದನೆ ನೀಡಿದರೆ ಹೇಗೆ?!

ಇಲ್ಲಿ ಕೆಲ ವಿಚಾರಗಳನ್ನು ಮುಖ್ಯವಾಗಿ ಗಮನಿಸಬೇಕು. ಅವರೆಲ್ಲರೂ ಆರೋಪಿಗಳೇ ಹೊರತು ಅಪರಾಧಿಗಳಲ್ಲ. ಅವರು ಅಪರಾಧಿಗಳೋ ಎಂಬುದನ್ನು ತೀರ್ಮಾನಿಸಬೇಕಾಗಿರುವುದು ನ್ಯಾಯಾಲಯ. ಒಂದು ವೇಳೆ ಅವರು ಅಪರಾಧಿಗಳು ಎಂದೇ ತೀರ್ಮಾನವಾದರೂ ಅದಕ್ಕೆ ಈಗಾಗಲೇ ಕಾನೂನು ನಿಗದಿಪಡಿಸಿದ ಸೂಕ್ತ ಶಿಕ್ಷೆಗಳಿವೆ. ಆ ಶಿಕ್ಷೆಗಳಲ್ಲಿ ಅಪರಾಧಿಯ ಮನೆ ಕೆಡವಿ ಹಾಕುವುದಂತೂ ಖಂಡಿತಾ ಇಲ್ಲ. ಇನ್ನು, ಆರೋಪಿಯ ಮನೆಯನ್ನು ಕೆಡವಿದ ಮೇಲೆ ಒಂದು ವೇಳೆ ಆತ ನಿರಪರಾಧಿ ಎಂದು ರುಜುವಾತಾದರೆ ಆಗ ಆತನ ಮನೆಯನ್ನು ಮತ್ತೆ ಕಟ್ಟಿಕೊಡಲಾಗುತ್ತದೆಯೇ? ಯುವಕನೊಬ್ಬ ಹಿಂಸಾಚಾರದಲ್ಲಿ ತೊಡಗಿದ ಅಂತ ಇಟ್ಟುಕೊಂಡರೂ ಅದಕ್ಕೆ ಆತ ಶಿಕ್ಷೆ ಅನುಭವಿಸಬೇಕೇ ಹೊರತು ಆತನ ಮನೆಯವರಲ್ಲ ಅಲ್ಲವೇ?

ಹಾಗಾಗಿ ಇಂತಹ ಅನಾಗರಿಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವನ್ನು ಪ್ರಚೋದಿಸುವ ಕೆಲಸವನ್ನು ಮಾಧ್ಯಮಗಳು ನಿಲ್ಲಿಸಬೇಕು. ಕರ್ನಾಟಕವು ಉತ್ತರಪ್ರದೇಶ, ಮಧ್ಯಪ್ರದೇಶದಂತಲ್ಲ. ಅದಕ್ಕೆ ಬೇರೆಯದೇ ಆದ ಒಂದು ನಾಗರಿಕ ಪರಂಪರೆ ಇದೆ ಎಂಬುದನ್ನೂ ಈ ಮಾಧ್ಯಮದ ಮಂದಿ ಅರ್ಥಮಾಡಿಕೊಳ್ಳಬೇಕು.

ಶ್ರೀನಿವಾಸ ಕಾರ್ಕಳ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಡ್ಡಿದರ ಏರಿಸದ ಆರ್‌ಬಿಐ

ಅವಧಿ	ಬ್ರೆಜಿಲ್		ಭಾರತ		ಮೆಕ್ಸಿಕೊ		ರಷ್ಯಾ		ದಕ್ಷಿಣ ಆಫ್ರಿಕಾ		ಬ್ರಿಟನ್		ಅಮೆರಿಕ	
	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)	ಹಣದುಬ್ಬರ ದರ	ಬಡ್ಡಿ ದರ (%)
ಮಾರ್ಚ್ 2020	3.3	4.25	5.8	5.15	3.2	7	2.5	6	4.1	6.25	1.5	0.75	1.5	0.65
ಸೆಪ್ಟೆಂಬರ್ 2020	3.14	2	7.25	4	4.01	4.25	3.67	4.25	2.92	3.5	0.74	0.1	1.37	0.09
ಸೆಪ್ಟೆಂಬರ್ 2021	10.25	5.25	3.55	4	6	4.5	7.41	6.5	5.07	3.5	2.93	0.1	5.39	0.08
ಫೆಬ್ರುವರಿ 2022	10.54	--	6.07	--	7.28	--	9.15	--	5.7	--	6.2	--	7.9	--
ಮಾರ್ಚ್ 2022	--	10.75	--	4	--	6	--	20	--	4	--	0.75	--	0.25-0.5

ಹಣದುಬ್ಬರಕ್ಕೆ ಅಂಕುಶ ಆರ್‌ಬಿಐ ತಾತ್ಸಾರ

ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿ
ಭಾಗ–3

• ಸೋಮೇಶ್ ಝಾ

ಕೋವಿಡೋತ್ತರ ಯುಗದಲ್ಲಿ ಹಣದುಬ್ಬರ ಏರುತ್ತಲೇ ಇದ್ದರೂ ಬಡ್ಡಿದರವನ್ನು ಏರಿಸಲು ಮನಸ್ಸು ಮಾಡದೆ, ಬಡ್ಡಿದರ ಕಡಿತಕ್ಕೆ ಸದಾ ಮುಕ್ತವಾಗಿರುವ ಮೂಲಕ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೇಂದ್ರೀಯ ಬ್ಯಾಂಕುಗಳಲ್ಲಿಯೇ ಭಿನ್ನವಾಗಿ ನಿಂತಿದೆ.

ಹಣಕಾಸು ನೀತಿಯಲ್ಲಿ ಇರುವ, ಹಣಕಾಸು ಸಚಿವಾಲಯವು 'ತಪ್ಪಿಸಿಕೊಳ್ಳುವ ಷರತ್ತು' ಎಂದು ಬಣ್ಣಿಸುವ ಅಂಶವನ್ನು ಮುಂದಿರಿಸಿಕೊಂಡು ಬಡ್ಡಿದರವನ್ನು ಆರ್‌ಬಿಐ ಕೆಳ ಮಟ್ಟದಲ್ಲಿಯೇ ಇರಿಸಿಕೊಂಡಿದೆ. ಹಣದುಬ್ಬರ ದರವು ಶೇ 4ಕ್ಕಿಂತ ಹೆಚ್ಚು ಇರಲು ಈ ಷರತ್ತು ಅವಕಾಶ ಮಾಡಿಕೊಡುತ್ತದೆ.

2021ರಲ್ಲಿ ನಡೆದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಬಡ್ಡಿದರವನ್ನು ಹೆಚ್ಚಿಸಲಿಲ್ಲ. ಆರ್ಥಿಕ ಪುನಶ್ಚೇತನಕ್ಕೆ 'ನೀತಿಯ ಸುಸ್ಥಿರ ಬೆಂಬಲ' ಅಗತ್ಯ ಎಂದು ಆರ್‌ಬಿಐ ಹೇಳಿತು. 'ದೃಢ ನಿರ್ಧಾರಕ್ಕಾಗಿ ಪ್ರಗತಿಯ ಸಂಕೇತಗಳನ್ನು ಎದುರು ನೋಡಲಾಗುತ್ತಿದೆ ಮತ್ತು ಹಣದುಬ್ಬರದ ವಿಚಾರದ ಬಗ್ಗೆಯೂ ನಿಗಾ ಇರಿಸಲಾಗಿದೆ' ಎಂದು ಹೇಳಿದೆ. ಹಣಕಾಸು ನೀತಿಯಲ್ಲಿ ಯಾವುದೇ ಬದಲಾವಣೆ ಮಾಡದೇ ಇರುವ ಮೂಲಕ ಆರ್‌ಬಿಐ 2022ರ ಫೆಬ್ರುವರಿಯಲ್ಲಿಯೂ ವಿಶ್ಲೇಷಕರನ್ನು ಅಚ್ಚರಿಗೊಳಿಸಿತು. ಹಣದುಬ್ಬರವು ನಿಭಾಯಿಸಬಹುದಾದ ಮಟ್ಟದಲ್ಲಿದೆ ಮತ್ತು ಓಮೈಕ್ರಾನ್‌ಗೆ ಸಂಬಂಧಿಸಿ ಅನಿಶ್ಚಿತ ಸ್ಥಿತಿ ಇದೆ ಎಂದು ಕಾರಣ ಕೊಟ್ಟಿತು.

ಈ ನಿರ್ಧಾರಗಳು ನೀತಿ ವಿಶ್ಲೇಷಕರ ನಡುವೆ ಚರ್ಚೆ ಹುಟ್ಟು ಹಾಕಿತು. ಅಭಿವೃದ್ಧಿ ಮತ್ತು ಸರ್ಕಾರಿ ಸಾಲ ನಿರ್ವಹಣೆಗೆ ಆರ್‌ಬಿಐ ಆದ್ಯತೆ ನೀಡಿದೆ ಎಂಬುದಕ್ಕೆ ಇದು ಪುರಾವೆ ಎಂದು ಕೆಲವರು ಹೇಳಿದರು. ಸರ್ಕಾರಕ್ಕಾಗಿ ಸಾಲ ಪಡೆಯುವುದು ಆರ್‌ಬಿಐನ ಕೆಲಸ. ಬಡ್ಡಿದರವು ಕಡಿಮೆ ಇದ್ದರೆ ಸರ್ಕಾರವು ಕಡಿಮೆ ಬಡ್ಡಿದರದಲ್ಲಿ ಮಾರುಕಟ್ಟೆಯಿಂದ ಸಾಲ ಪಡೆಯುವುದು ಸಾಧ್ಯವಾಗುತ್ತದೆ. ಆರ್ಥಿಕ ಪ್ರಗತಿಯೇ ಕೇಂದ್ರೀಯ ಬ್ಯಾಂಕ್‌ನ ಆದ್ಯತೆ ಎಂದು ಹೇಳುವ ಮೂಲಕ ಎಂಪಿಸಿಯ ನಿರ್ಧಾರಗಳನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಬಹಿರಂಗವಾಗಿಯೇ ಸಮರ್ಥಿಸಿಕೊಂಡಿದ್ದಾರೆ.


'ಪ್ರಗತಿಯೇ ತನ್ನ ಆದ್ಯತೆ ಎಂದು ಆರ್‌ಬಿಐ ಹೇಳಿಕೊಂಡಿದೆ. ಆದರೆ, ಸಾಲ ನಿರ್ವಹಣೆ ಹೊಣೆಗಾರಿಕೆಯೇ ಬಡ್ಡಿದರ ಏರಿಸದೇ ಇರಲು ಪ್ರಾಥಮಿಕ ಕಾರಣ ಎಂದು ಅನ್ನಿಸುತ್ತದೆ' ಎಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಫೈನಾನ್ಸ್ ಆ್ಯಂಡ್ ಪಾಲಿಸಿಯ (ಎನ್‌ಐಪಿಎಫ್‌ಪಿ) ಹಿರಿಯ ಫೆಲೊ ರಾಧಿಕಾ ಪಾಂಡೆ ಹೇಳುತ್ತಾರೆ.


ಹಣದುಬ್ಬರ ನಿಯಂತ್ರಣವನ್ನು ಗುರಿಯಾಗಿಸಿರುವ ಹಣಕಾಸು ನೀತಿ ಚೌಕಟ್ಟಿನ ಕರಡು ನೀತಿ ರೂಪಿಸುವಲ್ಲಿ ಹಣಕಾಸು ಸಚಿವಾಲಯದ ಜತೆಗೆ ಕೆಲಸ ಮಾಡಿರುವವರಲ್ಲಿ ರಾಧಿಕಾ ಅವರೂ ಒಬ್ಬರು.

ಜಗತ್ತಿನಾದ್ಯಂತ ಹಣದುಬ್ಬರವು ಹೆಚ್ಚುತ್ತಲೇ ಹೋದಾಗ ಕೇಂದ್ರೀಯ ಬ್ಯಾಂಕುಗಳು ತಮ್ಮ ಸುಲಭ ಹಣಕಾಸು ನೀತಿಯನ್ನು ಕೈಬಿಟ್ಟಿವೆ. ಬ್ಯಾಂಕ್ ಆಫ್ ಇಂಗ್ಲೆಂಡ್ ಇತ್ತೀಚಿನ ದಿನಗಳಲ್ಲಿ ಮೂರು ಬಾರಿ ಬಡ್ಡಿ ದರ ಏರಿಕೆ ಮಾಡಿದೆ. ಅಮೆರಿಕದ ಫೆಡರಲ್ ರಿಸರ್ವ್ ಈ ವರ್ಷ ಆರು ಬಾರಿ ಬಡ್ಡಿದರ ಕಡಿತದ ಯೋಜನೆ ರೂಪಿಸಿದ್ದು, ಮಾರ್ಚ್‌ನಲ್ಲಿ ಮೊದಲ ಕಡಿತ ಜಾರಿಗೆ ಬಂದಿದೆ.

ರೆಪೊ ದರ: ಯಾರ ಅವಧಿಯಲ್ಲಿ ಎಷ್ಟು ಇಳಿಕೆ?


0.75%
ರಘುರಾಮ್ ರಾಜನ್ ಅವರ ಅವಧಿಯಲ್ಲಿ ರೆಪೊ ದರದಲ್ಲಿ ಆದ ಒಟ್ಟಾರೆ ಇಳಿಕೆ


0%
ಉರ್ಜಿತ್ ಪಟೇಲ್ ಅವಧಿಯಲ್ಲಿ ರೆಪೊ ದರದಲ್ಲಿ ಆದ ಒಟ್ಟಾರೆ ಬದಲಾವಣೆ


2.5%
ಶಕ್ತಿಕಾಂತ್ ದಾಸ್ ಅವರ ಅವಧಿಯಲ್ಲಿ ರೆಪೊ ದರದಲ್ಲಿ ಆದ ಒಟ್ಟಾರೆ ಇಳಿಕೆ

ಬ್ರೆಜಿಲ್, ಮೆಕ್ಸಿಕೊ, ದಕ್ಷಿಣ ಆಫ್ರಿಕಾ, ಚಿಲಿ, ರಷ್ಯಾ ದೇಶದ ಕೇಂದ್ರೀಯ ಬ್ಯಾಂಕುಗಳು ಕೂಡ ಬಡ್ಡಿ ದರ ಏರಿಕೆಯ ತಂತ್ರವನ್ನು ಅನುಸರಿಸಲು ತೊಡಗಿವೆ.

ರಷ್ಯಾ–ಉಕ್ರೇನ್ ಯುದ್ಧಕ್ಕೂ ಮುಂಚೆಯೇ ಭಾರತದಲ್ಲಿ ಸತತ ಐದು ತಿಂಗಳು ಹಣದುಬ್ಬರ ದರ ಏರುತ್ತಲೇ ಇತ್ತು. ಹಾಗಿದ್ದರೂ ಬಡ್ಡಿದರ ಏರಿಕೆಗೆ ಆರ್‌ಬಿಐ ಮುಂದಾಗಲಿಲ್ಲ. 2022ರ ಜನವರಿಯಲ್ಲಿ ಹಣದುಬ್ಬರ ದರವು ಶೇ 6.1ರಷ್ಟಿದ್ದರೆ, ನಂತರದ ತಿಂಗಳಲ್ಲಿ ಶೇ 6.07ರಷ್ಟು ಇತ್ತು. ದರಗಳು ಇನ್ನಷ್ಟು ಏರುವ ಅಂದಾಜು ಇದೆ. ಈ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 6.2ಕ್ಕೆ ತಲುಪಲಿದೆ, ಆರ್‌ಬಿಐ ಅಂದಾಜಿಸಿದಂತೆ ಶೇ 4.5ರಷ್ಟು ಅಲ್ಲ ಎಂದು ಜಪಾನ್‌ನ ಬ್ರೋಕರೇಜ್ ಸಂಸ್ಥೆ ನೊಮುರಾ ಹೋಲ್ಡಿಂಗ್ಸ್ ಇ. ಹೇಳಿದೆ.

ಸರ್ಕಾರಿ ಸಾಲದಲ್ಲಿ ಏರಿಕೆ: ಬಡ್ಡಿದರ ಏರಿಕೆ ಮಾಡದಿರುವ ಮೂಲಕ ಸರ್ಕಾರಕ್ಕೆ ಕಡಿಮೆ ವೆಚ್ಚದಲ್ಲಿ ಸಾಲ ದೊರೆಯುವಂತೆ ಆರ್‌ಬಿಐ ನೋಡಿಕೊಂಡಿದೆ.

2022–23ರಲ್ಲಿ ₹15 ಲಕ್ಷ ಕೋಟಿ ಸಾಲ ಪಡೆಯುವ ಯೋಜನೆಯನ್ನು ಕೇಂದ್ರ ಸರ್ಕಾರ ಹೊಂದಿದೆ. 2021–22ರಲ್ಲಿ ₹10.5 ಲಕ್ಷ ಕೋಟಿ, 2020–21ರಲ್ಲಿ ₹12.6 ಲಕ್ಷ ಕೋಟಿ ಸಾಲ ಪಡೆಯಲಾಗಿದೆ.

ಆರ್‌ಬಿಐನ ನೀತಿ ಉದ್ದೇಶಗಳಲ್ಲಿ ಹಿತಾಸಕ್ತಿ ಸಂಘರ್ಷವನ್ನು ತಪ್ಪಿಸುವುದಕ್ಕಾಗಿ ಸಾಲ ನಿರ್ವಹಣೆಯನ್ನು ಪ್ರತ್ಯೇಕಗೊಳಿಸಬೇಕು– ಹಣದುಬ್ಬರ ಕೇಂದ್ರಿತವಾದ ಹೊಸ ಹಣಕಾಸು ನೀತಿ ವ್ಯವಸ್ಥೆಗೆ ದೇಶವು 2015ರಲ್ಲಿ ಹೊರಳಿಕೊಂಡಾಗ ನೀತಿ ನಿರೂಪಕರು ನೀಡಿದ್ದ ಸಲಹೆ ಇದು.

'ಹಣಕಾಸು ನೀತಿ ಮತ್ತು ಸಾಲ ನಿರ್ವಹಣೆ ಹೊಣೆಗಾರಿಕೆಗಳ ನಡುವೆ ಹಿತಾಸಕ್ತಿ ಸಂಘರ್ಷ ಏರ್ಪಡುತ್ತದೆ ಎಂಬುದು ಅಂತರರಾಷ್ಟ್ರೀಯ ಅನುಭವ ಮತ್ತು ಪರಿಣತರ ಸಮಿತಿಗಳ ಶಿಫಾರಸುಗಳಿಂದ ಸ್ಪಷ್ಟವಾಗಿದೆ' ಎಂದು ಪ್ರಧಾನ ಆರ್ಥಿಕ ಸಲಹೆಗಾರರಾಗಿದ್ದ ಇಳಾ ಪಟ್ನಾಯಕ್ 2015ರ ಫೆಬ್ರುವರಿ 11ರ ಆಂತರಿಕ ಟಿಪ್ಪಣಿಯಲ್ಲಿ ಹೇಳಿದ್ದರು. 'ಹಾಗಾಗಿ, ಸಾಲ ನಿರ್ವಹಣೆ ಹೊಣೆಯನ್ನು ಆರ್‌ಬಿಐನಿಂದ ಪ್ರತ್ಯೇಕಿಸುವವರೆಗೆ ಹಣಕಾಸು ನೀತಿ ಉದ್ದೇಶಗಳನ್ನು ಆರ್‌ಬಿಐ ಕಾಯ್ದೆಯಲ್ಲಿ ಸೇರಿಸಿಕೊಳ್ಳಬಾರದು' ಎಂಬ ಸಲಹೆಯನ್ನು ಅವರು ನೀಡಿದ್ದರು.

ಈ ಅಸಮಂಜಸತೆಯನ್ನು ನಿವಾರಿಸುವ ಪ್ರಯತ್ನಕ್ಕೆ ಕೇಂದ್ರ ಸರ್ಕಾರವು ಮುಂದಾಗಿತ್ತು. ಕಾಯ್ದೆಗೆ ತಿದ್ದುಪಡಿ ಮಾಡಿ ಸಾಲ ನಿರ್ವಹಣೆಗೆ ಪ್ರತ್ಯೇಕ ಸಂಸ್ಥೆಯೊಂದನ್ನು ಸ್ಥಾಪಿಸಿ, ಸರ್ಕಾರದ ಸಾಲ ನಿರ್ವಹಣೆಯ ಮೇಲ್ವಿಚಾರಣೆಯನ್ನು ಆರ್‌ಬಿಐನಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ವಹಿಸುವ ಪ್ರಸ್ತಾವವನ್ನು ಮುಂದಿಟ್ಟಿತ್ತು. ಆದರೆ, ಆರ್‌ಬಿಐ ಆಕ್ಷೇಪ ವ್ಯಕ್ತಪಡಿಸಿದ ಕಾರಣ, ಸರ್ಕಾರವು ಪ್ರಸ್ತಾವವನ್ನು ಕೈಬಿಟ್ಟಿತು.

ಹಣದುಬ್ಬರವನ್ನು ಈ ಹಂತದಲ್ಲಿಯೇ ನಿಯಂತ್ರಿಸದಿದ್ದರೆ, ಹಣದುಬ್ಬರವು ಹೆಚ್ಚುತ್ತಲೇ ಇರುತ್ತದೆ ಎಂಬ ಭಾವ ದೃಢಗೊಳ್ಳುತ್ತದೆ. ಹಾಗಾದರೆ, ದರ ನಿಯಂತ್ರಣವು ಇನ್ನಷ್ಟು ಕಷ್ಟಕರವಾಗುತ್ತದೆ.

ಬಡ್ಡಿದರ ನಿಗದಿಯಲ್ಲಿ ಸಾಲ ನಿರ್ವಹಣೆಯು ಯಾವುದೇ ಪಾತ್ರ ವಹಿಸುವುದಿಲ್ಲ. ಸಮಿತಿಯ ಸದಸ್ಯರಲ್ಲಿ ಅರ್ಧದಷ್ಟು ಮಂದಿ ಬಾಹ್ಯ ತಜ್ಞರಾಗಿರುವ ಕಾರಣ ಹಿತಾಸಕ್ತಿ ಸಂಘರ್ಷಕ್ಕೆ ಅವಕಾಶ ಇಲ್ಲ ಎಂದು ಎಂಪಿಸಿಯ ಬಾಹ್ಯ ಸದಸ್ಯರಾಗಿರುವ ಜಯಂತ್ ಆರ್. ವರ್ಮಾ ಹೇಳಿದ್ದಾರೆ.

ಈ ಕುರಿತಂತೆ ಕೇಳಿದ್ದ ಪ್ರತಿಕ್ರಿಯೆಗೆ ಹಣಕಾಸು ಸಚಿವಾಲಯ ಮತ್ತು ಆರ್‌ಬಿಐ ಸ್ಪಂದಿಸಿಲ್ಲ.

ಸಾಂಕ್ರಾಮಿಕದ ಪರಿಣಾಮ

ಕೋವಿಡ್ ಸಾಂಕ್ರಾಮಿಕದ ಹೊಡೆತದ ನಂತರ ವಿಶ್ವದ ಬಹುತೇಕ ಭಾಗಗಳಲ್ಲಿ ಹಣದುಬ್ಬರ ಇಳಿಕೆಯ ಹಾದಿಯಲ್ಲಿತ್ತು. ಆದರೆ ಭಾರತದಲ್ಲಿ ಮಾತ್ರ 2020ರ ಏಪ್ರಿಲ್‌ನಿಂದ 2021ರ ಮಾರ್ಚ್‌ವರೆಗಿನ ಆರ್ಥಿಕ ವರ್ಷದಲ್ಲಿ ಹಣದುಬ್ಬರವು ಶೇ 6.2ರಷ್ಟು ಇತ್ತು. ಇಂಧನದ ಮೇಲೆ ತೆರಿಗೆ ಹೆಚ್ಚಳ ಮತ್ತು ಪೂರೈಕೆಯಲ್ಲಿನ ವ್ಯತ್ಯಯಗಳೇ ಈ ಏರಿಕೆಗೆ ಕಾರಣವಾಗಿದ್ದವು.

'ಆರ್ಥಿಕತೆಯ ಮೇಲೆ ಕೋವಿಡ್–19ರ ಪರಿಣಾಮಗಳನ್ನು ಹೋಗಲಾಡಿಸಲು ಮತ್ತು ಹಣದುಬ್ಬರವು ನಿಗದಿತ ಮಟ್ಟದ ಒಳಗೇ ಇರುವಂತೆ ನೋಡಿಕೊಳ್ಳಲು ಆರ್ಥಿಕತೆಯ ಪುನಶ್ಚೇತನ, ಸ್ಥಿರ ಬೆಳವಣಿಗೆಯನ್ನು ಕಾಯ್ದುಕೊಳ್ಳುವುದು ಅವಶ್ಯವಾಗಿರುವವರೆಗೂ ದರ ಕಡಿತ ನೀತಿಯನ್ನು ಮುಂದುವರಿಸುತ್ತೇವೆ' ಎಂದು ಎಲ್ಲಾ ಎಂಪಿಸಿ ಸಭೆಗಳಲ್ಲಿ ಆರ್‌ಬಿಐ ಹೇಳಿತ್ತು.

ಆರ್‌ಬಿಐನ ಈ ನೀತಿಗೆ ಎಂಪಿಸಿಯ ಎಲ್ಲಾ ಸದಸ್ಯರ ಸಹಮತವಿರಲಿಲ್ಲ. 2020ರ ಆಗಸ್ಟ್‌ನಲ್ಲಿ ಎಂಪಿಸಿ ಸದಸ್ಯತ್ವ ಪಡೆದಿದ್ದ ವರ್ಮಾ ಅವರು, ಆರ್ಥಿಕ ಬೆಳವಣಿಗೆಯೇ ಆದ್ಯತೆ ಎನ್ನುತ್ತಿದ್ದ ಆರ್‌ಬಿಐನ ನೀತಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು. 'ಆರ್ಥಿಕ ಬೆಳವಣಿಗೆಯೊಂದಕ್ಕೇ ಆದ್ಯತೆ ನೀಡುವ ಮೂಲಕ ಹಣದುಬ್ಬರದ ಬಗ್ಗೆ ಯಾವುದೇ ಕಾಳಜಿ ಇಲ್ಲ ಎಂಬ ತಪ್ಪಾದ ಗ್ರಹಿಕೆಯನ್ನು ಎಂಪಿಸಿ ಸೃಷ್ಟಿಸುತ್ತಿದೆ...' ಎಂದು ವರ್ಮಾ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಹಣದುಬ್ಬರ ನಿಯಂತ್ರಣಕ್ಕೆ ಎಂಪಿಸಿ ಕ್ರಮ ತೆಗೆದುಕೊಳ್ಳಲೇಬೇಕು ಎಂದು ಆಗ್ರಹಿಸಿದ್ದರು.

ಭಿನ್ನ ಆದ್ಯತೆಗಳು

'ಭಾರತದ ಕೇಂದ್ರೀಯ ಬ್ಯಾಂಕ್‌ನ ಆದ್ಯತೆ ಪ್ರಗತಿಯೇ ಅಥವಾ ಹಣದುಬ್ಬರವೇ?'– 2021ರ ಡಿಸೆಂಬರ್ 8ರಂದು ನಡೆದ ಹಣಕಾಸು ನೀತಿ ಘೋಷಣೆಯ ಮಾಧ್ಯಮಗೋಷ್ಠಿಯಲ್ಲಿ ಮಾಧ್ಯಮ ಪ್ರತಿನಿಧಿಯೊಬ್ಬರು ಶಕ್ತಿಕಾಂತ ಅವರಿಗೆ ಕೇಳಿದ್ದ ನೇರವಾದ ಮತ್ತು ಮಹತ್ವದ ಪ್ರಶ್ನೆ ಇದು.

'ನನ್ನ ಹೇಳಿಕೆಯಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ, ಈ ಹಂತದಲ್ಲಿ ಆರ್‌ಬಿಐನ ಒಟ್ಟಾರೆ ಆದ್ಯತೆಯು ಪ್ರಗತಿಯೇ ಆಗಿದೆ. ಅದರ ಜತೆಗೆ, ದರ ಸ್ಥಿರತೆ ಕೂಡ ನಮ್ಮ ಗಮನದಲ್ಲಿ ಇದೆ. ಹಾಗಾಗಿ, ದರ ಸ್ಥಿರತೆಯನ್ನು ಗಮನದಲ್ಲಿ ಇರಿಸಿಕೊಂಡೇ ಪ್ರಗತಿಯನ್ನು ಒಟ್ಟಾರೆ ಆದ್ಯತೆಯಾಗಿ ಇರಿಸಿಕೊಳ್ಳಲಾಗಿದೆ' ಎಂದು ಶಕ್ತಿಕಾಂತ ಉತ್ತರಿಸಿದ್ದರು.

ಅನಿಯಂತ್ರಿತ ಹಣದುಬ್ಬರದ ವಿರುದ್ಧ ವಾದ ಮಾಡುವಲ್ಲಿ ಶಕ್ತಿಕಾಂತ ಅವರು ನಿಸ್ಸೀಮ. 2016ರಲ್ಲಿ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ಶಕ್ತಿಕಾಂತ ಅವರು ಹಣಕಾಸು ನೀತಿ ಗುರಿಗಳನ್ನು ನಿಗದಿ ಮಾಡುವ ಸಂಪುಟ ಟಿಪ್ಪಣಿಯ ಕರಡು ತಯಾರಿಯಲ್ಲಿ ಭಾಗಿಯಾಗಿದ್ದರು. ಸಂಪುಟ ಟಿಪ್ಪಣಿಯು ಹೀಗಿತ್ತು: 'ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವುದು ಮತ್ತು ಹಣದುಬ್ಬರವು ಅಪೇಕ್ಷಿತ ಮಟ್ಟವನ್ನು ಮೀರಿ ಹೋಗುವುದನ್ನು ತಡೆಯುವುದು ಹಣಕಾಸು ನೀತಿಯ ಅತ್ಯಂತ ಮುಖ್ಯ ಮತ್ತು ಮೊದಲ ಉದ್ದೇಶವಾಗಿರಬೇಕು'.

ಕಾಯ್ದೆಯಲ್ಲಿ ಹೀಗೆ ಹೇಳಲಾಗಿದೆ: 'ಪ್ರಗತಿಯ ಗುರಿಯನ್ನೂ ಗಮನದಲ್ಲಿ ಇರಿಸಿಕೊಂಡು ದರ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಹಣಕಾಸು ನೀತಿಯ ಮೊದಲ ಉದ್ದೇಶ'. ಅರ್ಥ ವ್ಯವಸ್ಥೆಯು ಪುನಶ್ಚೇತನದ ಹಾದಿಯಲ್ಲಿದ್ದು, ಹಣದುಬ್ಬರವು ಏರುತ್ತಲೇ ಇರುವಾಗಲೂ ಆರ್ಥಿಕ ಪ್ರಗತಿಯು ದರ ಸ್ಥಿರತೆಯಷ್ಟೇ ಅಥವಾ ಅದಕ್ಕೂ ಹೆಚ್ಚು ಮುಖ್ಯ ಎಂದು 2018ರಲ್ಲಿ ಆರ್‌ಬಿಐ ಗವರ್ನರ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ಶಕ್ತಿಕಾಂತ ಅವರು ಹಲವು ಬಾರಿ ಹೇಳಿದ್ದಾರೆ.

2019ರಲ್ಲಿ ಐದು ಬಾರಿ ಬಡ್ಡಿದರ ಕಡಿತ ಮಾಡುವ ಮೂಲಕ ಎಂಪಿಸಿಯು ಅರ್ಥ ವ್ಯವಸ್ಥೆಗೆ ಹಣ ಹರಿದು ಬರುವಂತೆ ನೋಡಿಕೊಂಡಿದೆ. 2019ರ ಫೆಬ್ರುವರಿಯಿಂದ 2020ರ ಫೆಬ್ರುವರಿ ಅವಧಿಯಲ್ಲಿ ರೆಪೊ ದರವನ್ನು (ಬ್ಯಾಂಕ್‌ಗಳಿಗೆ ಆರ್‌ಬಿಐ ನೀಡುವ ಸಾಲದ ಬಡ್ಡಿದರ) ಶೇ 1.35ರಷ್ಟು ತಗ್ಗಿಸಲಾಗಿದೆ. ಸಾಂಕ್ರಾಮಿಕವು ಆರಂಭಗೊಂಡ ಬಳಿಕ, ಪ್ರಗತಿಗೆ ಬೆಂಬಲ ನೀಡುವುದಕ್ಕೆ ಅಗತ್ಯ ಇರುವ ಕ್ರಮ ಕೈಗೊಳ್ಳಲಾಗುವುದು ಎಂದು ಶಕ್ತಿಕಾಂತ ಹೇಳಿದ್ದರು. ಹಣದುಬ್ಬರ ತೀವ್ರವಾಗಿಯೇ ಇದ್ದರೂ 2020ರಲ್ಲಿ ಶೇ 1.15ರಷ್ಟು ಬಡ್ಡಿದರ ಕಡಿತ ಮಾಡಲಾಗಿದೆ. ಇದರೊಂದಿಗೆ ರೆಪೊ ದರವು ಶೇ 4ಕ್ಕೆ ಕುಸಿದಿದೆ.

ಹಣಕಾಸು ನೀತಿಯ ಉದ್ದೇಶಗಳನ್ನು ಭಿನ್ನವಾಗಿ ವ್ಯಾಖ್ಯಾನಿಸಿರುವುದೇ ಶಕ್ತಿಕಾಂತ ಅವರು ಭಿನ್ನ ಧೋರಣೆಗಳನ್ನು ಅನುಸರಿಸಲು ಇರುವ ಮುಖ್ಯ ಕಾರಣಗಳಲ್ಲಿ ಒಂದು ಎಂದು ಪರಿಣತರು ಹೇಳುತ್ತಾರೆ.

(ರಿಪೋರ್ಟರ್ಸ್ ಕಲೆಕ್ಟಿವ್‌ನ ಈ ವರದಿಯ ಇಂಗ್ಲಿಷ್ ಅವತರಣಿಕೆಯು 'ಅಲ್ ಜಝೀರಾ'ದಲ್ಲಿ ಪ್ರಕಟವಾಗಿದೆ)

ಸರ್ಕಾರದ ನೀತಿ...

ಹಣದುಬ್ಬರದ ಗರಿಷ್ಠ ಮಟ್ಟವನ್ನು ನಿಗದಿ ಮಾಡಲು ಆರ್‌ಬಿಐ, ಆರ್‌ಬಿಐನ ಮಾಜಿ ಗವರ್ನರ್‌ಗಳು ಮತ್ತು ತಜ್ಞರ ಜತೆಯಲ್ಲಿ 2016ರಲ್ಲಿ ಸಮಾಲೋಚನೆ ನಡೆಸಲಾಗಿತ್ತು. ಆನಂತರ, ಹಣದುಬ್ಬರವು ಶೇ 4ರಷ್ಟು ಇದ್ದರೆ, ಆರ್ಥಿಕತೆಯು ಗರಿಷ್ಠ ಮತ್ತು ಅತ್ಯಂತ ದಕ್ಷತೆಯಲ್ಲಿ ಬೆಳವಣಿಗೆ ಸಾಧಿಸುತ್ತದೆ ಎಂದು ಅಂದಾಜಿಸಲಾಗಿತ್ತು. ಇದಕ್ಕಿಂತ ಹೆಚ್ಚಾದರೆ, ಜನರಿಗೆ ಹೊರೆ ಎಂದು ಹೇಳಲಾಗಿತ್ತು.

'ಶೇ 4 +/–2ರಷ್ಟು ಹಣದುಬ್ಬರ ದರವು ಆರ್‌ಬಿಐಗೆ ಸಾಕಷ್ಟು ಅವಕಾಶವನ್ನು ನೀಡುತ್ತದೆ. ಆದರೆ ಶೇ 6ಕ್ಕಿಂತಲೂ (ಶೇ 4 + 2) ಹೆಚ್ಚಿನ ದರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು 2016ರ ಜುಲೈನಲ್ಲಿ ಹಣಕಾಸು ಸಚಿವಾಲಯಕ್ಕೆ ಬರೆದಿದ್ದ ಶಿಫಾರಸಿನಲ್ಲಿ ಶಕ್ತಿಕಾಂತ ದಾಸ್ ಅವರು ಆಗ್ರಹಿಸಿದ್ದರು.

ಹಣದುಬ್ಬರದ ಗರಿಷ್ಠ ದರ ನಿಗದಿ ಮಾಡುವ ಸಭೆಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ಹಣದುಬ್ಬರವು ಗರಿಷ್ಠ ಮಿತಿಯನ್ನು ದಾಟುವುದಕ್ಕೆ ಅವಕಾಶ ಕೊಡುವ 'ತಪ್ಪಿಸಿಕೊಳ್ಳುವ ಷರತ್ತು' ಬಗ್ಗೆಯೂ ಪರಿಶೀಲನೆ ನಡೆಸಲಾಗಿತ್ತು. ಝೆಕ್ ಗಣರಾಜ್ಯ ಮತ್ತು ರೊಮೇನಿಯಾದಲ್ಲಿ ಇಂತಹ ಷರತ್ತುಗಳ ಇರುವ ಬಗ್ಗೆ ಚರ್ಚಿಸಲಾಗಿತ್ತು.

ಹಣದುಬ್ಬರವು ನಿಗದಿತ ಗರಿಷ್ಠ ಮಟ್ಟಕ್ಕಿಂತಲೂ ಏರಿಕೆಯಾದಾಗ ಈ ದೇಶಗಳು 'ತಪ್ಪಿಸಿಕೊಳ್ಳುವ ಷರತ್ತು' ಅನುಷ್ಠಾನಕ್ಕೆ ತಂದ ರೀತಿಯಲ್ಲೇ, ಭಾರತದಲ್ಲಿ ಈಗಾಗಲೇ ಹಣದುಬ್ಬರದ ದರ ಏರಿಕೆಯನ್ನು ಈ ರೀತಿಯಲ್ಲಿ ನಿರ್ವಹಿಸಲಾಗಿದೆ ಎಂಬ ನಿರ್ಣಯಕ್ಕೆ ಹಣಕಾಸು ಸಚಿವಾಲಯವು ಬಂದಿತು. ಆದರೆ ಇದಕ್ಕೆ ಯಾವುದೇ ಕಾನೂನು ಇಲ್ಲ.

ಬಹುತೇಕ ದೇಶಗಳಲ್ಲಿ ಹಣದುಬ್ಬರದ ನಿಯಂತ್ರಣವು ಒಂದು ತಿಂಗಳಲ್ಲಿ ಸಾಧ್ಯವಾಗದೇ ಇದ್ದರೆ, ಅದನ್ನು ಕೇಂದ್ರೀಯ ಬ್ಯಾಂಕ್‌ನ ವೈಫಲ್ಯ ಎಂದು ಪರಿಗಣಿಸಲಾಗುತ್ತದೆ. ಆದರೆ ಭಾರತದಲ್ಲಿ ಹಣದುಬ್ಬರದ ನಿಯಂತ್ರಣವು ಸತತ ಮೂರು ತ್ರೈಮಾಸಿಕಗಳವರೆಗೆ ಸಾಧ್ಯವಾಗದೇ ಇದ್ದರೆ ಮಾತ್ರ ಅದು ಕೇಂದ್ರೀಯ ಬ್ಯಾಂಕ್‌ನ ವೈಫಲ್ಯ ಎಂದು ಪರಿಗಣಿಸಲಾಗುತ್ತದೆ.

'ಈಗಿನ ಹಣದುಬ್ಬರವು ತಾತ್ಕಾಲಿಕ ಮಾತ್ರ' ಎಂದು ಶಕ್ತಿಕಾಂತ ಅವರು ಮಾರ್ಚ್‌ನಲ್ಲಿ ಹೇಳಿದ್ದರು. 'ಇದು ತಾತ್ಕಾಲಿಕವಲ್ಲ ಎಂಬುದನ್ನು ಒಪ್ಪಿಕೊಳ್ಳಲು ಇದು ಸರಿಯಾದ ಸಮಯ. ಹಣದುಬ್ಬರವನ್ನು ಶೇ 4ರೊಳಗೆ ಉಳಿಸಿಕೊಳ್ಳಬೇಕು ಎಂಬ ಬಗ್ಗೆ ಆರ್‌ಬಿಐ ಗಂಭೀರವಾಗಿ ಇರುವುದೇ ಆದರೆ, ತಕ್ಷಣವೇ ಬಡ್ಡಿ ದರವನ್ನು ಏರಿಕೆ ಮಾಡಬೇಕು' ಎಂದು ಬ್ಯುಟರ್ ಹೇಳಿದ್ದಾರೆ.




ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 99

ಜ್ಞಾನ-ವಿಜ್ಞಾನಕ್ಕೆ ಭಕ್ತಿಯೇ ಮೂಲ

ಸಗುಣಸ್ವರೂಪದ ಆರಾಧನೆಯಿಂದ ನಿರ್ಗುಣನಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸಬಹುದೆಂಬುದು ನಿರ್ವಿವಾದ. ಹೀಗಾಗಿ, ಎಲ್ಲ ದೇವತೆಗಳಿಗೂ ಪ್ರತಿಮೆಗಳು ನಿರ್ಮಾಣವಾದವು. ಶಿವನಿಗೆ ಲಿಂಗಾಕಾರದಲ್ಲಿ ಪೂಜೆ ಸಲ್ಲುವುದು. ಪ್ರತಿಮೆಯೇ ಇಲ್ಲದಿದ್ದರೆ ಗಂಧ, ಚಂದನ, ಹೂವು ಮೊದಲಾದ ಸಾಮಗ್ರಿಗಳೆಲ್ಲಾ ವ್ಯರ್ಥವೆನಿಸುವುದು. ಎಲ್ಲವೂ ಶಿವಮಯವೆಂಬ ಶುದ್ಧವಾದ ಜ್ಞಾನವು ಹುಟ್ಟುವವರೆಗೂ ದೇವತಾಮೂರ್ತಿಗಳನ್ನು ಪೂಜಿಸುತ್ತಿರಬೇಕು. ಅಂತಹ ಮಹಾಜ್ಞಾನವಿಲ್ಲದೆ, ವಿಗ್ರಹಾರಾಧನೆಯನ್ನೂ ಮಾಡದಿದ್ದರೆ, ಅಂಥವನು ನರಕದಲ್ಲಿ ಬೀಳುವುದು ಖಂಡಿತ – ಎನ್ನುತ್ತಾನೆ ಬ್ರಹ್ಮ.

ತನ್ನ ಜಾತಿಗೆ ವಿಹಿತವಾದ ಯಾವ ಕರ್ಮವುಂಟೋ, ಅದೆಲ್ಲವನ್ನೂ ತಪ್ಪದೆ ನಡೆಸಿಕೊಂಡು ಬರಬೇಕು. ಯಾವುದರಲ್ಲಿ ಭಕ್ತಿಯು ಯಾವ ರೀತಿ ಇರುವುದೋ, ಆ ರೀತಿ ಅವುಗಳಿಗೆ ಪೂಜಾದಿಗಳನ್ನು ಮಾಡಬೇಕು. ದೇವರ ಪೂಜೆ ಮತ್ತು ದಾನಧರ್ಮಗಳು ಇಲ್ಲದಿದ್ದರೆ ಪಾಪವು ದೂರವಾಗುವುದಿಲ್ಲ – ಎಂದೂ ನಾರದನಿಗೆ ತಿಳಿಸುತ್ತಾನೆ.

ಎಲ್ಲಿಯವರೆಗೆ ಈ ದೇಹದಲ್ಲಿ ಪಾಪಸಂಬಂಧವಿರುವುದೋ, ಅಲ್ಲಿಯವರೆಗೆ ಆತನಿಗೆ ಸಿದ್ಧಿಯು ಲಭಿಸಲಾರದು. ಪಾಪಸಂಬಂಧವು ಬಿಟ್ಟುಹೋದಾಗ, ಅವನು ಮಾಡಿದ ಕರ್ಮವೆಲ್ಲವೂ ಸಫಲವಾಗುವುದು. ಕೊಳಕು ಬಟ್ಟೆಯ ಮೇಲೆ ಯಾವ ಬಣ್ಣವೂ ಕಾಣಿಸಲಾರದು, ಬಟ್ಟೆಯನ್ನು ಒಗೆದಾಗ ಕೊಳೆಯೆಲ್ಲವೂ ಕಳೆದುಹೋದ ಮೇಲೆ, ಅದರ ಅಸಲಿ ಬಣ್ಣ ಚೆನ್ನಾಗಿ ಕಾಣುವುದು. ಹಾಗೆಯೇ, ದೇವತಾರಾಧನೆಯಿಂದ ಶರೀರವೆಲ್ಲವೂ ಪಾಪರಹಿತವಾಗಿ ಶುದ್ಧವಾದಾಗ, ಜ್ಞಾನವೆಂಬ ಬಣ್ಣವು ಕಾಣಲು ಅನುವಾಗುವುದು. ಆಗಲೇ ವಿಜ್ಞಾನವು ಹುಟ್ಟುವುದು.

ವಿಜ್ಞಾನಕ್ಕೆ ಮೂಲಕಾರಣ ಅನನ್ಯವಾದ ಭಕ್ತಿ. ಜ್ಞಾನಕ್ಕೂ ಮುಖ್ಯಕಾರಣ ಭಕ್ತಿಯೇ. ಭಕ್ತಿಯು ಹುಟ್ಟಬೇಕಾದರೆ, ತನಗೆ ಇಷ್ಟವಾದ ದೇವತೆಗಳ ಪೂಜೆ ಮುಂತಾದ ಸತ್ಕರ್ಮಗಳನ್ನು ಮಾಡುವುದು ಅವಶ್ಯಕ. ಆ ಸತ್ಕರ್ಮಗಳಿಗೆ ಗುರುವು ಕಾರಣ. ಗುರುವು ದೊರೆಯಲು ಸಜ್ಜನರ ಸಹವಾಸವು ಕಾರಣ. ಗುರುವಿನಿಂದ ಮಂತ್ರಗಳು ದೊರೆತು, ದೇವನನ್ನು ಪೂಜಿಸಲು ಅನುಕೂಲವಾಗುವುದು. ಆ ಪೂಜೆಯಿಂದ ಭಕ್ತಿಯುಂಟಾಗುವುದು. ಭಕ್ತಿಯಿಂದ ಜ್ಞಾನವು ಲಭಿಸುವುದು.


ಪರಬ್ರಹ್ಮನನ್ನು ಸಾಕ್ಷಾತ್ಕರಿಸಲು ಬೇಕಾದ ಆ ವಿಜ್ಞಾನವು ಜ್ಞಾನದಿಂದ ಹುಟ್ಟುವುದು. ವಿಜ್ಞಾನವು ಹುಟ್ಟಿದ ಮೇಲೆ ಭೇದವೆಲ್ಲಾ ಹೋಗಿ ಅಭೇದ ಜ್ಞಾನವುಂಟಾಗುವುದು. ಆಗ ಶೀತೋಷ್ಣಾದಿ ದುಃಖಗಳು ಇರುವುದಿಲ್ಲ. ಯಾವಾಗ ದ್ವಂದ್ವಗಳ ಬಾಧೆಯೆಲ್ಲವೋ ಆಗ ಸಾಕ್ಷಾತ್ ಶಿವನೇ ಇವನಾಗುವನು. ವಿಜ್ಞಾನಿಗೆ ಸುಖ-ದುಃಖಗಳೂ ಇರುವುದಿಲ್ಲ; ವಿಹಿತವೂ ಅವಿಹಿತವೂ ಇರುವುದಿಲ್ಲ.

ಈ ರೀತಿ ಮನೆ, ಆಶ್ರಮ ಯಾವೊಂದೂ ಇಲ್ಲದೆ ಇರುವವನು ಈ ಪ್ರಪಂಚದಲ್ಲಿ ಬಹು ಅಪರೂಪ. ಅಂಥವನನ್ನು ನೋಡಿದ ಮಾತ್ರದಿಂದಲೇ ಪಾಪಗಳೆಲ್ಲವೂ ಪರಿಹಾರವಾಗುವುದು. ಅವನನ್ನು ಪರಬ್ರಹ್ಮಸ್ವರೂಪನಾದ ಶಿವನೇ ಎಂದು ತೀರ್ಥಗಳೂ ದೇವತೆಗಳೂ ಋಷಿಗಳೂ ಹೊಗಳುವರು. ತೀರ್ಥಗಳೂ ಮತ್ತು ಮಣ್ಣಿನಲ್ಲಿ ಮಾಡಿದ, ಕಲ್ಲಿನಲ್ಲಿ ಕಡೆದ ದೇವರುಗಳೂ ಆ ವಿಜ್ಞಾನಿಯನ್ನು ಹೋಲಲಾರವು. ತೀರ್ಥಾದಿಗಳು ಬಹಳ ದಿವಸಗಳ ಮೇಲೆ ಮನುಷ್ಯನನ್ನು ಪಾವನನ್ನಾಗಿ ಮಾಡುತ್ತವೆ. ವಿಜ್ಞಾನಿಯಾದರೋ ದರ್ಶನ ಮಾತ್ರದಿಂದಲೇ ಪಾವನಗೊಳಿಸುವನು.

ಎಲ್ಲಿಯರೆಗೆ, ಮನೆ, ಆಶ್ರಮ ಮುಂತಾದವುಗಳ ಸಂಬಂಧವಿರುವುದೋ, ಅಲ್ಲಿಯವರೆಗೆ ಐದು ಮಂದಿ ಪ್ರಸಿದ್ಧವಾದ ದೇವತೆಗಳಲ್ಲಿ ಶ್ರೇಷ್ಠನಾದವನ ವಿಗ್ರಹವನ್ನು ಪ್ರೀತಿಯಿಂದ ಮಾಡಿ ಪೂಜಿಸಬೇಕು. ಇಲ್ಲದಿದ್ದರೆ ಶಿವನೊಬ್ಬನನ್ನೇ ಪೂಜಿಸಬಹುದು. ಕೊಂಬೆಗಳಿಗಿಂತಲೂ ಬುಡಕ್ಕೆ ಹೆಚ್ಚು ಬೆಲೆಯಂತೆ, ಬುಡಕ್ಕೆ ನೀರೆರೆದರೆ ಕೊಂಬೆಗಳೂ ತಣಿಯುತ್ತವೆ. ಹಾಗೆಯೇ, ದೇವತೆಗಳೆಲ್ಲರ ಮೂಲಸ್ವರೂಪಿಯಾದ ಶಿವನನ್ನು ಪೂಜಿಸಿದರೆ ದೇವತೆಗಳೆಲ್ಲರೂ ತಣಿಯುವರು. ಕೊಂಬೆಗಳು ಚೆನ್ನಾಗಿ ತಣಿದ ಮಾತ್ರಕ್ಕೆ ಬುಡವು ಎಂದಿಗೂ ತಣಿದಂತೆ ಆಗುವುದಿಲ್ಲ. ಎಲ್ಲ ದೇವತೆಗಳು ಸಂಪ್ರೀತರಾದರೂ ಶಿವನು ತೃಪ್ತನಾಗಲಿಲ್ಲವೆಂದು ಸೂಕ್ಷ್ಮಬುದ್ಧಿಗಳಾದವರು ಅರಿಯಬೇಕು.

ಆದುದರಿಂದ, ತನ್ನ ಮನೋರಥಗಳೆಲ್ಲವನ್ನೂ ಪಡೆಯಬೇಕು ಎನ್ನುವವರು ಮತ್ತು ಸರ್ವ ಪ್ರಾಣಿಗಳಿಗೂ ಹಿತವನ್ನುಂಟು ಮಾಡಲು ಆಸೆಯುಳ್ಳವರು, ಪ್ರಪಂಚಕ್ಕೆ ಕಲ್ಯಾಣದಾಯಕನಾದ ಶಂಕರನನ್ನು ಪೂಜಿಸಬೇಕು – ಎಂದು ಬ್ರಹ್ಮ ತನಗೆ ವಿಷ್ಣು ಹೇಳಿದ ಶಿವಪೂಜಾವಿಧಿಯನ್ನು ದೇವತೆಗಳಿಗೆ ತಿಳಿಸಿದ್ದಾಗಿ ನಾರದನಿಗೆ ವಿವರಿಸುತ್ತಾನೆ. ಇಲ್ಲಿಗೆ ಶ್ರೀ ಶಿವಮಹಾಪುರಾಣದ ಸೃಷ್ಟಿ ಉಪಾಖ್ಯಾನದಲ್ಲಿ ಪೂಜಾವಿಧಿವರ್ಣನದಲ್ಲಿಯ 'ಸಾರಾಸಾರವಿಚಾರವರ್ಣನ' ಎಂಬ ಹನ್ನೆರಡನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಹಸಿವು-ಮಮತೆಗಳ ಉಪಕಾರ

ಕ್ಷುತ್ತು ಮಮತೆಗಳು ಜೀವಕೆ ಕುಲಿಮೆ ಸುತ್ತಿಗೆಗಳ್ |
ಉತ್ತಮವದೆನಿಪುವವು ಕಿಟ್ಟಗಳ ಕಳೆದು ||
ಚಿತ್ತಸಂಸ್ಕಾರಸಾಧನವಯ್ಯ ಸಂಸಾರ |
ತತ್ತ್ವಪ್ರವೃತ್ತಂಗೆ – ಮಂಕುತಿಮ್ಮ || 610 ||

ಪದ-ಅರ್ಥ: ಕ್ಷುತ್ತು = ಹಸಿವೆ, ಕುಲಿಮೆ = ಅಕ್ಕಸಾಲಿಗನ ಅಥವಾ ಕಮ್ಮಾರನ ಬಲೆ, ಉತ್ತಮವದೆನಿಪುವವು = ಉತ್ತಮವದು + ಎನಿಪುವವು, ಕಿಟ್ಟ = ಕಸ, ಕೊಳೆ, ಚಿತ್ತಸಂಸ್ಕಾರಸಾಧನವಯ್ಯ = ಚಿತ್ತ + ಸಂಸ್ಕಾರ + ಸಾಧನವಯ್ಯ, ತತ್ವಪ್ರವೃತ್ತಂಗೆ = ತತ್ವವನ್ನು ತಿಳಿಯಬಯಸುವವನಿಗೆ.

ವಾಚ್ಯಾರ್ಥ: ಹಸಿವು ಮತ್ತು ಮಮತೆಗಳು ಮನುಷ್ಯನ ಬದುಕಿಗೆ ಒಲೆ ಹಾಗೂ ಸುತ್ತಿಗೆಗಳಿದ್ದಂತೆ. ಅವು ಕೊಳೆಯನ್ನು ತೆಗೆದು ಜೀವನವನ್ನು ಉತ್ತಮ ಎನ್ನುವಂತೆ ಮಾಡುತ್ತವೆ. ಈ ಸಂಸಾರ ಮನಸ್ಸಿನ ಸಂಸ್ಕಾರ ಸಾಧನವಾದದ್ದು, ತತ್ವವನ್ನು ತಿಳಿದು ಬಳಸುವವನಿಗೆ.

ವಿವರಣೆ: ಹೊಟ್ಟೆಯಲ್ಲಿಯ ಹಸಿವು, ಅದರ ತಣಿಕೆಗೆ ಏನನ್ನಾದರೂ ಮಾಡುತ್ತದೆ. ಕೃಷ್ಣನಿಗೆ ಶಾಪಕೊಟ್ಟ ಗಾಂಧಾರಿ ಸತ್ತ ಮಕ್ಕಳ ಶವಗಳನ್ನು ನೋಡಲು ಯುದ್ಧಭೂಮಿಗೆ ಹೋಗುತ್ತಾಳೆ. ಕೃಷ್ಣ ಅದನ್ನು ನೋಡುವುದು ಬೇಡ ಎಂದರೂ ಕೇಳದೆ ಹೋಗುತ್ತಾಳೆ. ಕಣ್ಣಿಗೆ ಕಟ್ಟಿಕೊಂಡಿದ್ದ ಪಟ್ಟಿಯನ್ನು ತೆಗೆದೊಗೆದು ಮಕ್ಕಳ ಹೆಣಗಳನ್ನು ಹುಡುಕುತ್ತ ಆ ವಿಸ್ತಾರ ಪ್ರದೇಶದಲ್ಲಿ ಹುಚ್ಚಿಯಂತೆ ಅಲೆಯುತ್ತಾಳೆ. ಹೃದಯ ಭಾವನೆಗಳಿಂದ ನಜ್ಜುಗುಜ್ಜಾಗಿ ಹೋಗಿದ್ದರೂ ಹಸಿವೆ ಕೇಳೀತೇ? ಏನಾದರೂ ದೊರೆತೀತೇ ಎಂದು ಕಂಗಾಲಾಗಿ ನೋಡುತ್ತಾಳೆ. ಅಲ್ಲೊಂದು ಮರ. ಅದರಲ್ಲಿ ಹಣ್ಣುಗಳಿವೆ. ಅವು ಆಕೆಗೆ ನಿಲುಕುವಂತಿಲ್ಲ. ಕತ್ತಲಲ್ಲಿ ಮೃತದೇಹಗಳನ್ನೇ ಕಲ್ಲುಗಳು ಎಂದು ಭಾವಿಸಿ, ಅವುಗಳನ್ನು ಒಂದರ ಮೇಲೊಂದು ಪೇರಿಸಿ, ಅವುಗಳ ಮೇಲೆ ನಿಂತು, ಮರದ ಹಣ್ಣು ಕಿತ್ತು ತಿನ್ನುತ್ತಾಳೆ. ಹಸ್ತಿನಾವತಿಯ ರಾಣಿಯಾಗಿದ್ದ ಗಾಂಧಾರಿಗೆ ಹಸಿವು ಎಲ್ಲವನ್ನೂ ಮರೆಸಿಬಿಟ್ಟಿತ್ತು. ನಾವೇ ಪತ್ರಿಕೆಗಳಲ್ಲಿ ಓದಿದ್ದೇವೆ. ಒಂದು ತುತ್ತು ಅನ್ನಕ್ಕಾಗಿ ಕಲಹ, ಕೋಲಾಹಲ, ಕೊಲೆಗಳು ನಡೆದಿವೆ. ಕಗ್ಗ ಹೊಟ್ಟೆಯ ಹಸಿವಿನ ಬಗ್ಗೆ ಮಾತ್ರ ಮಾತನಾಡುತ್ತಿಲ್ಲ. ನಮಗೆ ತರತರಹದ ಹಸಿವೆಗಳಿವೆ. ಹೆಸರು ಗಳಿಸುವ ಹಸಿವೆ, ಹಣ ಮಾಡುವ ಹಸಿವೆ, ಅಧಿಕಾರದ ಹಸಿವೆ, ದಾನಶೂರತ್ವವನ್ನು ತೋರಿಸಿಕೊಳ್ಳುವ ಹಸಿವೆ, ಜನಪ್ರಿಯತೆಯ ಹಸಿವೆ. ಈ ಹಸಿವೆಗಳು ಮನುಷ್ಯನನ್ನು ಏನೇನು ಕಾರ್ಯಮಾಡಲು ಪ್ರೇರೇಪಿಸುವುವು ಎಂಬುದನ್ನು ಹೇಳುವುದು ಸಾಧ್ಯವಿಲ್ಲ.

ಇದರ ಜೊತೆಗೆ ಮಮತೆ ಕೂಡ ಅನೇಕ ಒಳ್ಳೆಯ, ಕೆಟ್ಟ ಕಾರ್ಯಗಳಿಗೆ ಪ್ರೇರಕವಾಗುತ್ತದೆ. ಬರೀ ಧೃತರಾಷ್ಟ್ರನಿಗೆ ಮಾತ್ರ ಪುತ್ರಮೋಹವಿತ್ತು ಎಂದು ಏಕೆ ಅವನನ್ನು ತೆಗಳಬೇಕು? ಪುತ್ರಮೋಹ ಇಲ್ಲದಿರುವವರೆ ಅಪರೂಪ. ಪುತ್ರಮೋಹ ಮಾತ್ರವಲ್ಲ, ಮಮತೆ, ಮೋಹದ ಅನೇಕ ಎಳೆಗಳು ನಮ್ಮನ್ನು ಕಟ್ಟಿ, ಕುಲುಕಾಡಿಸಿ ಹೈರಾಣ ಮಾಡುತ್ತವೆ. ಆದರೂ ಅದನ್ನು ಬಿಡುವುದಾಗುವುದಿಲ್ಲ. ಹೀಗೆ ಹಸಿವು ಮತ್ತು ಮಮತೆಗಳು ನಮ್ಮನ್ನು ತಾಪದ ಒಲೆಯೊಳಗೆ ಕಾಯಿಸಿ, ಸುತ್ತಿಗೆಯಿಂದ ಹೊಡೆಯುವ ಕಾರ್ಯ ಮಾಡುತ್ತವೆ. ಅದು ಒಳ್ಳೆಯದು ಎಂದು ಕಗ್ಗ ಹೇಳುತ್ತದೆ. ಕಾಯಿಸುವಿಕೆ ಮತ್ತು ಸುತ್ತಿಗೆಯ ಪೆಟ್ಟುಗಳು ನಮ್ಮಲ್ಲಿ ಶೇಖರವಾಗಿರುವ ದೋಷಗಳನ್ನು ಹೊರತೆಗೆದು ಹಾಕುತ್ತವೆ. ಬದುಕು ಉತ್ತಮವಾಗುತ್ತದೆ.

ತತ್ವವನ್ನು ನಂಬಿ ನಡೆಯುವ ಮನುಷ್ಯನಿಗೆ ಈ ಸಂಸಾರ, ತಾಪವಾಗುವುದಿಲ್ಲ, ಅದೊಂದು ತಪವಾಗುತ್ತದೆ, ಚಿತ್ತಶುದ್ಧಿಯನ್ನು ಮಾಡಿ, ಅವನನ್ನು ಸಂಸ್ಕಾರಯುತನನ್ನಾಗಿ ಮಾಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಏಪ್ರಿಲ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ಥಿ ಗಂ. 13-53 ನಕ್ಷತ್ರ: ಜ್ಯೇಷ್ಠ ಗಂ. 23-41 ಯೋಗ: ವರಿಯಾನ್ ಗಂ. 13-39, ಕರಣ: ಬಾಲವ ಗಂ. 13-53, ಮೇಷ ಮಾಸದ 06 ನೇ ದಿನ. ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 06-18 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 18 ರಂಜಾನ್ ಅದೃಷ್ಟ ಸಂಖ್ಯೆ: 3, 10

ಮೇಷ: ನಿಮ್ಮ ಅವಶ್ಯಕತೆಗಳು ಆಶ್ಚರ್ಯಕರ ರೀತಿಯಲ್ಲಿ ಲಭಿಸಲಿವೆ. ನಿಮ್ಮ ಎದುರಾಳಿಗಳನ್ನು ಮಾತಿನಲ್ಲಿ ಸುಲಭವಾಗಿ ಕಟ್ಟಿಹಾಕುವಿರಿ. ದೈವಾನುಗ್ರಹದಿಂದ ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭ ಪಡೆಯುವಿರಿ.

ವೃಷಭ: ಸ್ನೇಹಿತರಲ್ಲಿ ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ. ನಿಮ್ಮ ನಡವಳಿಕೆಯ ತಪ್ಪು ಅರಿವಾಗುವುದು. ಚಲನಚಿತ್ರರಂಗದವರಿಗೆ ಖ್ಯಾತಿ ದೊರೆಯುವುದು.

ಮಿಥುನ: ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ನಿಮ್ಮ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿದೆ..

ಕರ್ಕಾಟಕ: ವೃತ್ತಿ ಮಾಡುವ ಸ್ಥಳದಲ್ಲಿ ಯಾವುದೇ ವಾದ ವಿವಾದಗಳು ನಡೆಸಬೇಡಿ, ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗುವುದು. ಯಶಸ್ಸಿನ ಹೊಸ ಮಾರ್ಗಗಳು ಗೋಚರಿಸಲಿವೆ. ಚಿಲ್ಲರೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ಸಿಂಹ: ಸಾಂಸಾರಿಕ ಅಥವಾ ವೈಯಕ್ತಿಕವಾಗಿ ಕೆಲವು ಮುಖ್ಯವಾದ ನಿರ್ಧಾರಗಳನ್ನು ಕೈಗೊಳ್ಳುವಿರಿ. ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಶೀಘ್ರವಾಗಿ ಮನಸ್ಸಿಗೆ ಹಿತ ಕೊಡುವ ರೀತಿಯಲ್ಲಿ ಪೂರ್ಣಗೊಳ್ಳಲಿದೆ.

ಕನ್ಯಾ: ನಿಮ್ಮೆದುರಿಗಿರುವ ಸವಾಲನ್ನು ಎದುರಿಸುವ ಶಕ್ತಿ ಮತ್ತು ಸಾಮರ್ಥ್ಯ ಅಭಿವೃದ್ಧಿಯಾಗುವುದು. ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ಭಾಗ್ಯವಂತರಾದ ನಿಮಗೆ ನಿಮ್ಮ ಸಂಸ್ಥೆಯ ಹೊಸ ಯೋಜನೆ ಸುಲಭವೆನಿಸಲಿದೆ.

ತುಲಾ: ನಿಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವತ್ತ ಸಾಗುವುದು. ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳು ದೊರಯಲಿದೆ. ಅಧಿಕಾರಕ್ಕಾಗಿ ಹೆಚ್ಚಿನ ಓಡಾಟ. ಸಗಟು ವ್ಯಾಪಾರಿಗಳಿಗೆ ಇದು ಶುಭದಿನವಾಗಿದೆ.

ವೃಶ್ಚಿಕ: ಎಂಜಿನಿಯರಿಂಗ್ ವಿದ್ಯಾರ್ಥಿಗಳು ಓದಿನ ಬಗ್ಗೆ ಹೆಚ್ಚಿನ ಗಮನ ವಹಿಸಬೇಕಾಗುವುದು. ನಿರೀಕ್ಷೆಗೂ ಮೀರಿದ ಫಲಿತಾಂಶವನ್ನು ಎಲ್ಲಾ ಕೆಲಸಗಳಲ್ಲಿಯೂ ಕಾಣುವಿರಿ. ಸಂಬಂಧಿಗಳಲ್ಲಿರುವ ವ್ಯವಹಾರ ಮುಗಿಸುವ ಯತ್ನ ಮಾಡಿ.

ಧನು: ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ, ಏಕೆಂದರೆ ಅದರಿಂದ ನಿಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಹೊಂದುವಿರಿ. ಈ ಹಿಂದೆ ನಡೆದ ದುರ್ಘಟನೆ ಮತ್ತೆ ಮರುಕಳಿಸದಂತೆ ಎಚ್ಚರ ವಹಿಸುವುದು ಸೂಕ್ತ.

ಮಕರ: ಔಷಧ ಮಾರಾಟಗಳಲ್ಲಿ ಸಂಪಾದನೆ ಹೆಚ್ಚಲಿದೆ. ಈ ದಿನದ ಕಾರ್ಯಗಳನ್ನು ಮೊದಲೇ ನಿಶ್ಚಯಿಸಿಕೊಂಡು ಕ್ರಮ ಪ್ರಕಾರವಾಗಿ ಮಾಡುವುದು ಉತ್ತಮ. ದೇಹಾಯಾಸ ಮತ್ತು ಶೀತಬಾಧೆ ನಿವಾರಣೆ.

ಕುಂಭ: ಖರ್ಚುವೆಚ್ಚಗಳನ್ನು ಸಮತೋಲನದಿಂದ ನಡೆಸಿಕೊಂಡು ಹೋಗಿ. ಸಮಯ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸಿ, ಗೆಲುವು ನಿಮ್ಮದಾಗುವುದು. ಸ್ವತಂತ್ರ ಜೀವನ ನಡೆಸುವ ನಿಮ್ಮ ಮುಂಗೋಪಿತನದ ತೀರ್ಮಾನ ಸರಿಯಲ್ಲ.


ಮೀನ: ಆತ್ಮವಿಶ್ವಾಸ ಹೆಚ್ಚಲಿದೆ. ದೃಢ ನಿಶ್ಚಯ ಮತ್ತು ಸಾಧಿಸಲೇಬೇಕೆಂಬ ಛಲದ ಮನೋಭಾವ ಯಶಸ್ಸಿಗೆ ಕಾರಣವೆನಿಸಲಿದೆ. ಕಾರ್ಮಿಕರ ಸಮಸ್ಯೆಗಳಿಗೆ ಪ್ರತಿಕ್ರಿಯೆ ಸಿಗಲಿದೆ. ಸಹಚರರಲ್ಲಿ ವೈರತ್ವ ಕಟ್ಟಿಕೊಳ್ಳದೆ ಕಾರ್ಯ ನಿರ್ವಹಿಸಿ.

ಪದಬಂಧ 4933

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಹುತಿಯಾಗುವ ಪ್ರಾಣಿ (4)
3.ದಡಿಯ ಹಿಡಿದಿರುವ ಬಿಡಿಗಾಸು (3)
4.ಬೆನ್ನೆಲುಬು ಇರುವ ಪ್ರಾಣಿ (4)
6.ಯಾವ ಕಳಂಕವೂ ಇಲ್ಲದ್ದು (4)
7.ರತಿ ಪತಿಯಿಂದ ಉದಯಿಸಿದ ಆಸೆ (3)
8.ನಡುವಿನ ದಾರ ಉಲ್ಟಾ ಆದರೆ ಹೀಗೆ ಪೇಚಾಡು (4)
11.ಕಾಲ ಸೂಚಕ ಯಂತ್ರ (4)
13.ಗಲೀಜ ಹತ್ತಿರವೇ ವೇದಿಕೆ ಇದೆಯಲ್ಲಾ! (3)
14.ಕನ್ನಡಿಗ ಮಾಡಿಕೊಂಡ ಎಕ್ಸ್‌ಚೇಂಜ್ ! (4)

ಮೇಲಿಂದ ಕೆಳಕ್ಕೆ
1.ಬರದಲ್ಲಿಯೂ ತೋರುತ್ತಿರುವ ಡೌಲು! (4)
2.ಶುನಕದ ಹತ್ತಿರ ಹಾರಿ ಬಂದ ಗಿಣಿ (2)
3.ಹತ್ತರ ಗುಂಪು (3)
5.ಕಲೆಸಿದ ಗೋಧಿಹಿಟ್ಟು (3)
6.ಆ ಮನೆ ಹತ್ತಿರವಿರುವ ಗಜ (2)
7.ಕಾದಾಡುತ್ತಲೇ ಪ್ರವೇಶಿಸಿದ ಅರಣ್ಯ (2)
8.ಹೂವಿನ ಹುಡಿಯಿದು (3)
9.ರಾಜ ನಡುವಿದ್ದಾಗಿನ ಸೋಲು! (4)
10.ಉಯ್ಯಾಲೆ ಇಲ್ಲಿದೆ (3)
12.ವಿರಮಿಸುತ್ತಿದ್ದಾಗಲೇ ಉದಯಿಸಿದ ನೇಸರ (3)



4932ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲರಂಬು 3.ಕಷಾಯ
5.ಗದ್ಗದ 7.ಒಸಡು
8.ಸಮೂಹಗಾನ 11.ಗಲಾಟೆ
12.ಜವಾರಿ 15.ಪರೋಕ್ಷ
16.ಆಜುಬಾಜು

ಮೇಲಿಂದ ಕೆಳಕ್ಕೆ:
1.ಅಭ್ಯಂಗ 2.ಬುತ್ತಿ
3.ಕರಡು 4.ಯಮಶಿಕ್ಷೆ
6.ದವಸ 7.ಒಣಹರಟೆ
9.ನದೀಜ 10.ಪರಿತಾಪ
11.ಗವಾಕ್ಷ 13.ರಿವಾಜು
14.ಮೇಳ

ಸುಡೊಕು 5319

		8				5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5318 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಷೇರುಪೇಟೆ ವಹಿವಾಟು

703

ಹಿಂದಿನ ಅಂತ್ಯ	57,166
ಇಂದಿನ ಅಂತ್ಯ	58,576

(57500, 57000, 56500, 56000, 55500; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,173
ಇಂದಿನ ಅಂತ್ಯ	16,958
▼	215
ದಿನದ ಕನಿಷ್ಠ	17,275

ವಿನಿಮಯ ದರ

$ ಡಾಲರ್	76.5
£ ಪೌಂಡ್	99.2
€ ಯುರೊ	82.25
¥ ಯೆನ್ (100ಕ್ಕೆ)	59.42

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹420
12 ಮೊಟ್ಟೆಗೆ ₹58
ಮೈಸೂರು
100 ಮೊಟ್ಟೆಗೆ ₹420

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1640 (1640)
ಸೋಯಾ (ರಿಫೈಂಡ್)	₹1570 (1570)
ಸೂರ್ಯಕಾಂತಿ (ರಿಫೈಂಡ್)	₹1900 (1875)
ಪಾಮೋಲಿನ್	₹1500 (1502)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹375-612
ದ್ವಿತಳಿ (ಬಿ.ವಿ)
₹244-820

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹16000-20000
2ನೇ ದರ್ಜೆ
₹10000-15000

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹168
ಆರ್‌ಎಸ್‌ಎಸ್-5 ₹162.50
ಗುಡ್ ಲಾಟ್ ₹158.50
(ಪ್ರತಿ ಕೆ.ಜಿಗೆ)

'ತೆರಿಗೆ ಸ್ಲ್ಯಾಬ್ ಬದಲಾವಣೆ: ನಡೆದಿಲ್ಲ ಪರಿಶೀಲನೆ'

ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ಪ್ರಮಾಣವನ್ನು ಸರಳಗೊಳಿಸುವ ಪರಿಶೀಲನೆ ನಡೆಸುತ್ತಿರುವ ಸಚಿವರ ಸಮಿತಿಯು, ಶೇಕಡ 5ರ ತೆರಿಗೆ ಸ್ಲ್ಯಾಬ್‌ಅನ್ನು ಶೇ 8ಕ್ಕೆ ಹೆಚ್ಚಿಸುವ ದಿಕ್ಕಿನಲ್ಲಿ ಮುಂದಡಿ ಇರಿಸಿಲ್ಲ ಎಂದು ಮೂಲಗಳು ಹೇಳಿವೆ.

ಏಳು ಸಚಿವರ ಸಮಿತಿಗೆ ರಾಜ್ಯದ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧ್ಯಕ್ಷರು. ಜಿಎಸ್‌ಟಿ ವ್ಯವಸ್ಥೆಯಲ್ಲಿ ಕನಿಷ್ಠ ತೆರಿಗೆ ಪ್ರಮಾಣವನ್ನು ಈಗಿನ ಶೇ 5ರಿಂದ, ಶೇ 8ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಸಮಿತಿಯು ಪರಿಶೀಲನೆಗೇ ಎತ್ತಿಕೊಂಡಿಲ್ಲ ಎಂದು ಮೂಲಗಳು ವಿವರಿಸಿವೆ. ಈ ಶಿಫಾರಸನ್ನು ಜಿಎಸ್‌ಟಿ ಮಂಡಳಿ ಮುಂದೆ ಇರಿಸಲಾಗುತ್ತದೆ. ಜಿಎಸ್‌ಟಿ ಮಂಡಳಿ ಸಭೆಯು ಮೇ 15ರ ನಂತರ ನಡೆಯುವ ಸಾಧ್ಯತೆ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ- ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು 500
ಅಡಿಕೆ- ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಭದ್ರಾವತಿ
ರಾಶಿ 44519-48509
ಚನ್ನಗಿರಿ
ರಾಶಿ 46399-48899
ಚಿತ್ರದುರ್ಗ
ಆಪಿ 48009-48419
ಬೆಟ್ಟೆ 37729-38189
ಕೆಂಪುಗೋಟು 31710-32159
ರಾಶಿ 47539-47969
ಕಾರ್ಕಳ
ಹೊಸತು 38000-53000
ಹಳತು 46000-53000
ಕುಂದಾಪುರ
ಹೊಸಚಾಲಿ 43500-44500
ಪುತ್ತೂರು
ಕೋಕ 11000-26000
ಹೊಸತು 27500-45000
ಶಿವಮೊಗ್ಗ
ಬೆಟ್ಟೆ 48810-52710
ಗೊರಬಲು 17189-35489
ರಾಶಿ 43369-48849
ಸರಕು 53300-78009
ಸಿದ್ದಾಪುರ
ಬಿಳಿಗೋಟು 23959-31099
ಕೋಕ 21199-30100
ಹೊಸಚಾಲಿ 36599-40699
ಕೆಂಪುಗೋಟು 30191-31699
ರಾಶಿ 45069-48779
ತಟ್ಟಿಬೆಟ್ಟೆ 32689-42499
ಶಿರಸಿ
ಬೆಟ್ಟೆ 21899-46899
ಬಿಳಿಗೋಟು 16099-34319
ಚಾಲಿ 25389-41189
ರಾಶಿ 38839-49499
ಯಲ್ಲಾಪುರ
ಆಪಿ 54001-56777
ಬಿಳಿಗೋಟು 26899-33899
ಚಾಲಿ 36209-41369
ಕೋಕ 18899-30899
ಕೆಂಪುಗೋಟು 32131-35216
ರಾಶಿ 48001-53869
ತಟ್ಟಿಬೆಟ್ಟೆ 38799-47609

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,000	15800	15800	223.50ಸೆಂಟ್ಸ್
ಎಸಿ	8,400	8000	8425	
ಆರ್‌ಪಿ	9,300	9,200	9300	ಲಂಡನ್
ಆರ್‌ಸಿ	4,365	6,050	4225	2087 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

19-4-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1545 (15550)
ಪಾಮ್ ವಾರದ ಡೆಲಿವರಿ	1498 (1500)
ಸೂರ್ಯಕಾಂತಿ ಎಣ್ಣೆ ಕಚ್ಚಾ	1850 (1825)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	53,000 (53,300)
ಬೆಳ್ಳಿ ಕೆ.ಜಿ	69,900 (70,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ



ಪುತ್ತೂರು
₹4000-10500

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

- **ಪ್ರಶ್ನೆ: ನಾನು ಎರಡು ವರ್ಷಗಳಿಂದ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ವಯಸ್ಸು 25 ವರ್ಷ. ನಾನು ₹ 40,000 ಸಂಪಾದಿಸುತ್ತಿದ್ದೇನೆ. ತಿಂಗಳ ಬಾಡಿಗೆ ₹ 6,000 ಹಾಗೂ ಇತರ ಖರ್ಚು ₹ 5,000. ನಾನು ಶಿಕ್ಷಣಕ್ಕಾಗಿ ಪಡೆದ ಸಾಲ ಮುಂದಿನ 5 ವರ್ಷಗಳಲ್ಲಿ ಪಾವತಿಸಬೇಕು. ಮಾಸಿಕ ಕಂತು ಸರಿಸುಮಾರು ₹ 7,500. ಅಧಿಕ ಲಾಭಕ್ಕಾಗಿ ನಾನು ಹೇಗೆ ಹೂಡಿಕೆ ಮಾಡಬಹುದು?**

ಉತ್ತರ: ವೃತ್ತಿ ಬದುಕಿನ ಆರಂಭದಲ್ಲಿ ಹೂಡಿಕೆ ಬಗ್ಗೆ ಒಲವು ಹೆಚ್ಚಿಸಿಕೊಳ್ಳುತ್ತಿರುವ ಇಂದಿನ ಯುವಕರನ್ನು ಮೆಚ್ಚಬೇಕು. ಆರಂಭಿಕ ಹಂತದ ಹೂಡಿಕೆಯು ನಿಮಗೆ ಅಪಾಯವನ್ನು ತಡೆದುಕೊಳ್ಳುವ ಹೆಚ್ಚಿನ ಸಾಮರ್ಥ್ಯ ನೀಡುತ್ತದೆ, ನಷ್ಟವಾದ ಸಂದರ್ಭದಲ್ಲಿ ಚೇತರಿಸಿಕೊಳ್ಳುವ ಅವಕಾಶ ನೀಡುತ್ತದೆ. ಈ ಹಂತದಲ್ಲಿ ಆರ್ಥಿಕ ಒತ್ತಡ ಹೆಚ್ಚಿರುವುದಿಲ್ಲ. ನಿಗದಿತ ಮಟ್ಟದ ಆದಾಯ ಗಳಿಸಿ, ಅದರಲ್ಲಿ ಒಂದಿಷ್ಟು ಮೊತ್ತ ಹೂಡಿಕೆ ಮಾಡುವುದು ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು. ಇದು ಬದುಕಿನಲ್ಲಿ ಬರುವ ಪ್ರಮುಖ ಖರ್ಚುಗಳನ್ನು ಸಾಲ ಅಥವಾ ಅನ್ಯರ ಹಂಗಿಲ್ಲದೆ ನಿರ್ವಹಿಸಲು ನೆರವಾಗಬಲ್ಲದು. ಮಕ್ಕಳ ವಿದ್ಯಾಭ್ಯಾಸ, ವಿವಾಹ, ಮನೆ ಕಟ್ಟುವ ಯೋಜನೆ, ವಾಹನ ಖರೀದಿ ಅಥವಾ ಆರೋಗ್ಯ ಸಮಸ್ಯೆಯ ನಿರ್ವಹಣೆ ಇತ್ಯಾದಿ ಯಾವುದೂ ಇರಬಹುದು. ಒಟ್ಟಿನಲ್ಲಿ ನಿರಂತರ ಹೂಡಿಕೆ, ಹಣಕಾಸಿನ ಗುರಿಯನ್ನು ಪೂರೈಸಲು ಸಹಾಯ ಮಾಡುತ್ತದೆ.

ನಿಮ್ಮ ವಯಸ್ಸು ಈಗ 25 ವರ್ಷ. ಇನ್ನೂ ಮೂರು ದಶಕಗಳ ವೃತ್ತಿ ಬದುಕು ನಿಮಗೆ ಇದೆ. ಹೀಗಾಗಿ, ನಿಮ್ಮ ಎಲ್ಲ ಖರ್ಚುಗಳನ್ನು ಒಂದು ಡೈರಿ ಅಥವಾ ಎಕ್ಸೆಲ್ ಪುಟದೊಳಗೆ ಬರೆಯುವ ಕೆಲಸ ಮಾಡಿ. ಇದಾದ ಬಳಿಕ ಹೂಡಿಕೆಗಾಗಿ ಉಳಿಯುವ ಮೊತ್ತವನ್ನು ಗೊತ್ತು ಮಾಡಿಕೊಳ್ಳಿ. ಉಳಿಕೆಗೆ ಸಿಗುವ ಮೊತ್ತವನ್ನು ಎಲ್ಲ ವರ್ಗಗಳ ಹೂಡಿಕೆಗಳಲ್ಲಿ ತೊಡಗಿಸಿ. ಉದಾಹರಣೆಗೆ, ನಿಶ್ಚಿತ ಆದಾಯ ನೀಡುವ ಬ್ಯಾಂಕ್/ಅಂಚೆ ಕಚೇರಿ ಹೂಡಿಕೆಯಿಂದ ತೊಡಗಿ, ಮ್ಯೂಚುವಲ್ ಫಂಡ್, ಜೀವ ವಿಮಾ ಯೋಜನೆ, ಆರೋಗ್ಯ ವಿಮೆ, ಅವಧಿ ವಿಮೆ, ಷೇರುಪೇಟೆ ಹೂಡಿಕೆ, ಚಿನ್ನದ ಬಾಂಡ್ ಇತ್ಯಾದಿಗಳಲ್ಲಿ ನಿಮ್ಮ ಹೂಡಿಕೆ ಇರಲಿ. ಆದಾಯ ಹೆಚ್ಚಿದಂತೆ ಇದರ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗಿ. ಎಲ್ಲ ಆರ್ಥಿಕ ಉತ್ಪನ್ನಗಳು ಎಲ್ಲ ಕಾಲಗಳಲ್ಲಿ ಒಂದೇ ರೀತಿಯ ಆದಾಯ ನೀಡಲಾರವು. ಇವು ಏರಿಳಿತ ಕಾಣುತ್ತಿರುತ್ತವೆ. ಈಗ ನೀವು ಹೆಚ್ಚಿನ ರಿಸ್ಕ್ ಇರುವ ಮತ್ತು ಹೆಚ್ಚು ಲಾಭ ನೀಡಬಹುದಾದ ಉತ್ತಮ ಈಕ್ವಿಟಿ ಆಧರಿತ ಹೂಡಿಕೆಗಳನ್ನು ಆಯ್ಕೆ ಮಾಡಬಹುದು. ಇವು ದೀರ್ಘ ಕಾಲದಲ್ಲಿ ಉತ್ತಮ ಲಾಭ ಕೊಡಬಲ್ಲದು.

ಧನುಷ್ ಕುಮಾರ್ ಬಿ.ವಿ., ಬೆಂಗಳೂರು

- **ಪ್ರಶ್ನೆ: ನಾನು 29 ವರ್ಷ ವಯಸ್ಸಿನ ಸಿವಿಲ್ ಎಂಜಿನಿಯರ್. ಆರು ವರ್ಷಗಳಿಂದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ಈಗ ಏನಾದರೂ ಸ್ವಂತ ವ್ಯವಹಾರ ಮಾಡಬೇಕೆಂದಿದ್ದೇನೆ. ನನ್ನ ಬಳಿ ಸುಮಾರು ₹ 5 ಲಕ್ಷ ಉಳಿತಾಯದ ಹಣವಿದೆ. ವಿದೇಶದ ಖಾಸಗಿ ಹಣಕಾಸು ನಿರ್ವಹಣಾ ಸಂಸ್ಥೆಯೊಂದು ರಿಮೋಟ್ ಅಲ್ಗಾರಿತಮ್ ವ್ಯವಸ್ಥೆಯಲ್ಲಿ ಹೂಡಿಕೆದಾರರ ಹಣವನ್ನು ಅಮೆರಿಕದ ಷೇರು ಪೇಟೆಯಲ್ಲಿ ತೊಡಗಿಸಿ ಶೇಕಡಾ 5ರಿಂದ 6ರಷ್ಟು ಲಾಭಾಂಶ ತಂದುಕೊಡುತ್ತದೆ ಎಂದು ಕೇಳಿದ್ದೇನೆ. ಅಲ್ಲದೆ ಅವರು ನಿರ್ವಹಣಾ ವೆಚ್ಚವಾಗಿ ನಮ್ಮಿಂದ ಮಾಸಿಕ ₹ 9000 ದಿಂದ ₹ 11000 ಸಂಗ್ರಹಿಸುತ್ತಾರೆ ಎಂದು ತಿಳಿಯಿತು. ಅಲ್ಲದೆ ನಾವು ಬೇರೆ ಸದಸ್ಯರನ್ನು ಸಂಸ್ಥೆಗೆ ಪರಿಚಯಿಸಿದರೆ ಬೋನಸ್ ರೂಪದಲ್ಲಿ ಹಣ ಪಡೆಯಬಹುದು. ಇದೊಂದು ಚೈನ್ ಲಿಂಕ್ ವ್ಯವಸ್ಥೆ ಎಂದೆನಿಸುತ್ತದೆ. ಇಲ್ಲಿ ಹಣ ಹೂಡಿದರೆ ಏನಾದರೂ ಅಪಾಯಗಳಿವೆಯೇ ಎಂದು ತಿಳಿಸಿ.**

ಉತ್ತರ: ಹೂಡಿಕೆಯಲ್ಲಿ ನಾವು ಮೊದಲು ನೋಡಬೇಕಾದ ಮೂಲಭೂತ ಅಂಶ ನಮ್ಮ ಮೂಲಧನದ ಸುರಕ್ಷತೆ. ನಂತರ ದ್ರವ್ಯತೆ, ಕೊನೆಯದಾಗಿ ಹೂಡಿಕೆಯ ಮೇಲಣ ಲಾಭಾಂಶ. ಇದು ಎಲ್ಲ ಸಂದರ್ಭಗಳಲ್ಲಿ ಯಾವುದೇ ಹೂಡಿಕೆದಾರ ಅಗತ್ಯವಾಗಿ ಪರಿಗಣಿಸಬೇಕಾದುದು. ಎಷ್ಟೇ ಲಾಭ ನೀಡುವ ಸಂಸ್ಥೆಗಳಾಗಿದ್ದರೂ ನಮ್ಮ ಮೂಲಧನ ನಷ್ಟವಾಗಬಹುದಾದ ಅಪಾಯವಿದ್ದಾಗ ಅಂತಹ ಹೂಡಿಕೆಗಳಿಂದ ದೂರವಿರುವುದು ಒಳಿತು.

ನೀವು ನೀಡಿದ ಮಾಹಿತಿಯಂತೆ, ಹೂಡಿಕೆ ಮಾಡಬೇಕೆಂದಿರುವ ಸಂಸ್ಥೆ ನಿರ್ವಹಣಾ ವೆಚ್ಚವಾಗಿ ನಿಮ್ಮಿಂದ ಮಾಸಿಕ ಕಂತುಗಳಲ್ಲಿ ಹಣ ಪಡೆಯುತ್ತದೆ. ಈ ಮೊತ್ತ ವರ್ಷಕ್ಕೆ ಸುಮಾರು ₹ 1 ಲಕ್ಷಕ್ಕಿಂತ ಅಧಿಕ. ಇದು ಬಹುಶಃ ನಿಮ್ಮ ಹೂಡಿಕೆಯ ಮೊತ್ತದಲ್ಲಿ ಕಡಿತಗೊಳ್ಳುವ ಶುಲ್ಕ. ಇಂತಹ ಸಂಸ್ಥೆಗಳು ಎಲ್ಲಾದರೂ ಅಧಿಕೃತ ಪರವಾನಗಿ ಹೊಂದಿವೆಯೇ ಎಂದು ತಿಳಿದುಕೊಳ್ಳಿ. ಅವರ ವ್ಯವಹಾರವನ್ನು ಮೊದಲು ತಿಳಿಯಿರಿ. ಎಲ್ಲಿಯತನಕ ನಿಮಗೆ ಇದರ ಬಗ್ಗೆ ಖಚಿತ ಮಾಹಿತಿ ಅಥವಾ ಸ್ಪಷ್ಟ ನಿಲುವು ತಾಳಲು ಅಸಾಧ್ಯವೋ ಅಲ್ಲಿಯತನಕ ಅಂತಹ ಸಂಸ್ಥೆಗಳಲ್ಲಿ ಹೂಡಿಕೆ ಮಾಡದಿರಿ.

ಇಷ್ಟೇ ಅಲ್ಲದೆ ಅನೇಕ ಗೋಪ್ಯ ಶುಲ್ಕಗಳನ್ನು ಗ್ರಾಹಕರಿಂದ ವಿವಿಧ ರೂಪಗಳಲ್ಲಿ ವಸೂಲಿ ಮಾಡುವ ನಿಯಮಗಳು ಇರುವ ಸಾಧ್ಯತೆಯೂ ಇದೆ. ಉದಾಹರಣೆಗೆ, ಲಾಭಾಂಶ ಅಥವಾ ಅಸಲು ಮೊತ್ತವನ್ನು ಮೊದಲ ಕೆಲವು ತಿಂಗಳು ಹಿಂಪಡೆಯುವುದನ್ನು ಸ್ಥಗಿತಗೊಳಿಸಬಹುದು, ಹಿಂಪಡೆಯುವ ಮೊತ್ತದ ಮೇಲೆ ಶುಲ್ಕ ವಿಧಿಸಬಹುದು, ಬ್ಯಾಂಕ್ ಶುಲ್ಕ ವಸೂಲು ಮಾಡಬಹುದು, ಹೆಚ್ಚುವರಿ ಹೂಡಿಕೆಯ ಷರತ್ತುಗಳನ್ನು ಮುಂದಿಡಬಹುದು. ಈ ಬಗ್ಗೆ ಸ್ಪಷ್ಟ ಮಾಹಿತಿ ಪಡೆದುಕೊಳ್ಳಿ. ಇ-ಮೇಲ್ ಮೂಲಕ ಪೂರ್ಣ ಮಾಹಿತಿ ಪಡೆಯಿರಿ. ಇಂದು ಅನೇಕ ಸಂಸ್ಥೆಗಳು ಅನೇಕ ರೀತಿಯ ಬೋನಸ್, ಹೆಚ್ಚುವರಿ ಕ್ರೆಡಿಟ್ ಇತ್ಯಾದಿ ಆಮಿಷ ಒಡ್ಡಿ ಜನರನ್ನು ತಮ್ಮತ್ತ ಸೆಳೆದು ವಂಚಿಸುತ್ತಿವೆ. ಆ ಬಗ್ಗೆ ಜಾಗೃತರಾಗಿರಿ.

ನಿಮ್ಮ ನಿರೀಕ್ಷೆಗೆ ಹಾಗೂ ಇರುವ ಮೊತ್ತದ ಸಮರ್ಥ ಹೂಡಿಕೆಗೆ ನಮ್ಮಲ್ಲೇ ಇರುವ ಎನ್‌ಎಸ್‌ಇ, ಬಿಎಸ್‌ಇನಲ್ಲಿ ವ್ಯವಹರಿಸಲ್ಪಡುವ ಉತ್ತಮ ಕಂಪನಿಗಳ ಷೇರುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. 'ಅರಿಯದಿರುವ ಭೂತಕ್ಕಿಂತ ಅರಿತಿರುವ ಪೆಡಂಭೂತ ವಾಸಿ' ಎಂಬ ಮಾತಿದೆಯಲ್ಲ! ಹೀಗಾಗಿ ಮೊದಲ ಹೆಜ್ಜೆಯಾಗಿ ಭಾರತೀಯ ಮಾರುಕಟ್ಟೆಯಲ್ಲಿ ವ್ಯವಹರಿಸಿ ಅನುಭವ ಪಡೆಯಿರಿ. ಹೂಡಿಕೆಯ ಒಳ ಮರ್ಮಗಳನ್ನು ತಿಳಿದುಕೊಳ್ಳಿ, ಹೂಡಿಕೆಗೆ ಉತ್ತಮ ಕಂಪನಿಗಳನ್ನು ಆಯ್ಕೆ ಮಾಡುವ ಬಗೆಯನ್ನು ಅರಿತುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಸತತ ಐದನೆಯ ದಿನವೂ ಸೆನ್ಸೆಕ್ಸ್ ಇಳಿಕೆ, ಹೂಡಿಕೆದಾರರಿಗೆ ನಷ್ಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಹೂಡಿಕೆದಾರರು ಮಂಗಳವಾರ ಐ.ಟಿ. ಮತ್ತು ಬ್ಯಾಂಕಿಂಗ್ ವಲಯದ ಷೇರುಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಿದರು. ವಹಿವಾಟಿನ ಆರಂಭದಿಂದ ಏರುಮುಖವಾಗಿ ಸಾಗಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಕೊನೆಯಲ್ಲಿ ಕುಸಿತ ಕಂಡಿತು.

ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ತೀವ್ರಗೊಂಡಿರುವುದು, ವಿದೇಶಿ ಹೂಡಿಕೆದಾರರು ಹಣ ಹಿಂದಕ್ಕೆ ಪಡೆಯುತ್ತಿರುವುದು, ರೂಪಾಯಿ ಮೌಲ್ಯ ಇಳಿಕೆ ಮತ್ತು ಹಣದುಬ್ಬರ ಹೆಚ್ಚಳವಾಗಿರುವುದು ಹೂಡಿಕೆದಾರರ ಉತ್ಸಾಹ ತಗ್ಗಲು ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಸೆನ್ಸೆಕ್ಸ್ ಮಂಗಳವಾರ 703 ಅಂಶ ಕುಸಿದಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 215 ಅಂಶ ಇಳಿಕೆಯಾಗಿದೆ. ಐದು ವಹಿವಾಟಿನ ದಿನಗಳಲ್ಲಿ ಸೆನ್ಸೆಕ್ಸ್ 2,984 ಅಂಶ ಕುಸಿದಿದೆ, ನಿಫ್ಟಿ 825 ಅಂಶ ಇಳಿಕೆಯಾಗಿದೆ. ಮಾರುಕಟ್ಟೆಯು ಐದು ದಿನಗಳಿಂದ ಇಳಿಕೆಯ ಹಾದಿಯಲ್ಲಿರುವ ಪರಿಣಾಮ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 8 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

ಸೇನಾ ಆಸ್ತಿಗಳು ನಾಶ; 'ಮರಿಯುಪೋಲ್‌ನಲ್ಲಿ ಕೊನೆಯ ಪಡೆ ಶೀಘ್ರ ಅಂತ್ಯ'

ಶಸ್ತ್ರ ತ್ಯಜಿಸಲು ರಷ್ಯಾ ಕೊನೆ ಗಡುವು



ಉಕ್ರೇನ್‌ನ ರಾಜಧಾನಿ ಕೀವ್‌ನ ಈಶಾನ್ಯದಲ್ಲಿರುವ ಜಲಿಶ್ಯಾ ಗ್ರಾಮದಲ್ಲಿ ಮಂಗಳವಾರ ರಷ್ಯಾ ಪಡೆಗಳ ದಾಳಿಗೆ ಮನೆಗಳು ಮತ್ತು ಯುದ್ಧೋಪಕರಣಗಳು ಧ್ವಂಸವಾಗಿವೆ – ಎಎಫ್‌ಪಿ ಚಿತ್ರ

ಮಾಸ್ಕೊ/ಕ್ರಾಮರೊಸ್ಕಿ (ಎಎಫ್‌ಪಿ/ಎಪಿ): ಉಕ್ರೇನ್ ಸೇನೆಗೆ ತಕ್ಷಣವೇ ಶಸ್ತ್ರಾಸ್ತ್ರ ತ್ಯಜಿಸಲು ರಷ್ಯಾ ರಕ್ಷಣಾ ಸಚಿವಾಲಯ ಮಂಗಳವಾರ ತಾಕೀತು ಮಾಡಿದೆ.

ಬಂದರು ನಗರ ಮರಿಯುಪೋಲ್ ರಕ್ಷಣೆಗೆ ನಿಂತಿರುವ ಉಕ್ರೇನ್ ಸೈನಿಕರು ಮತ್ತು ಬಾಡಿಗೆ ಸೈನಿಕರು ಪ್ರತಿರೋಧ ಕೈಬಿಡಬೇಕು. ಶಸ್ತ್ರತ್ಯಾಗಕ್ಕೆ ವಿಧಿಸಿರುವ ಅಂತಿಮ ಗಡುವು ಮಂಗಳವಾರ ಮಧ್ಯಾಹ್ನದಿಂದಲೇ ಶುರುವಾಗಿದೆ.

ಉಕ್ರೇನಿನ ಪೂರ್ವ ಭಾಗ ಕೇಂದ್ರೀಕರಿಸಿ ರಷ್ಯಾ ಪಡೆಗಳು ಹೊಸ ದಾಳಿ ಆರಂಭಿಸಿವೆ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿಕೆ ನೀಡಿದ ಬೆನ್ನಲ್ಲೇ ರಷ್ಯಾ ರಕ್ಷಣಾ ಸಚಿವಾಲಯದಿಂದ ಈ ಎಚ್ಚರಿಕೆ ಹೊರಬಿದ್ದಿದೆ.

ಅರ್ಥಹೀನ ಪ್ರತಿರೋಧ ತೋರುತ್ತಿರುವ ಸೈನಿಕರಿಗೆ ತಕ್ಷಣ ಶಸ್ತ್ರ ತ್ಯಜಿಸಲು ಆದೇಶ ರವಾನಿಸುವಂತೆ ಕೀವ್ ಅಧಿಕಾರಿಗಳಿಗೆ ಮತ್ತೊಮ್ಮೆ ಎಚ್ಚರಿಕೆ ನೀಡಲಾಗಿದೆ. ಕೀವ್ ಅಧಿಕಾರಿಗಳಿಂದ ಈ ಸಂದೇಶ ರವಾನೆಯಾಗದಿದ್ದರೆ ಹೋರಾಟಗಾರರು ಸ್ವಯಂಪ್ರೇರಿತವಾಗಿ ಶಸ್ತ್ರತ್ಯಜಿಸಲು ನಿರ್ಧರಿಸಬೇಕು ಎಂದು ರಕ್ಷಣಾ ಸಚಿವಾಲಯ ತಾಕೀತು ಮಾಡಿದೆ.

'ಕೀವ್ ಆಡಳಿತವು ಭಯಾನಕವಾದ ಹೊಸ ಅಪರಾಧಗಳನ್ನು ನಡೆಸಲು ಸಿದ್ಧತೆ ನಡೆಸಿರುವ ಬಗ್ಗೆ ನೈಜ ಪುರಾವೆಗಳು ಸಿಕ್ಕಿವೆ. ಅಜೋವಾ ಸಮುದ್ರದ ಬಂದರು ನಗರ ಮರಿಯುಪೋಲ್‌ನಲ್ಲಿ ಪ್ರತಿರೋಧ ತೋರುತ್ತಿರುವ ಉಕ್ರೇನ್ ಯೋಧರು ಮತ್ತು ಬಾಡಿಗೆ ಸೈನಿಕರು ದುರಂತ ಸ್ಥಿತಿಯಲ್ಲಿದ್ದಾರೆ' ಎಂದು ರಷ್ಯಾ ಹೇಳಿದೆ.

ವಾಯು ದಾಳಿ: ಪೂರ್ವ ಉಕ್ರೇನ್ ದೇಶದಾದ್ಯಂತ ಸೋಮವಾರ ತಡರಾತ್ರಿ ಹಲವು ಬಾರಿ ವಾಯು ದಾಳಿ ನಡೆಸಲಾಗಿದೆ ರಷ್ಯಾ ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ.

ಹಾರ್ಕಿವ್‌ನಲ್ಲಿ ಐವರು ನಾಗರಿಕರ ಸಾವು

ಕೀವ್ (ಎಪಿ): ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಯಿಂದ ಉತ್ತರ ಉಕ್ರೇನಿನಲ್ಲಿ ಐವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಪ್ರಾದೇಶಿಕ ಗವರ್ನರ್ ಮಂಗಳವಾರ ತಿಳಿಸಿದರು.

ಹಾರ್ಕಿವ್ ನಗರ ಕೇಂದ್ರ ಭಾಗ ಮತ್ತು ಹೊರವಲಯಗಳಲ್ಲಿ ರಷ್ಯಾದ ಕ್ಷಿಪಣಿಗಳು ಅಪ್ಪಳಿಸಿ, 17ಕ್ಕೂ ಹೆಚ್ಚು ನಾಗರಿಕರು ಗಾಯಗೊಂಡಿದ್ದಾರೆ ಎಂದು ಗವರ್ನರ್ ಓಲೆಹ್ ಸಿನೆಹುಬೊವ್ ತಿಳಿಸಿದರು.

ಉಕ್ರೇನ್‌ನ ಎರಡನೇ ಅತಿದೊಡ್ಡ ನಗರ ಹಾರ್ಕಿವ್ ರಷ್ಯಾದ ಆಕ್ರಮಣದ ಪ್ರಾರಂಭದಿಂದಲೂ ತೀವ್ರ ದಾಳಿಗೆ ತುತ್ತಾಗಿದೆ.



'ಹೊಸ ಘಟ್ಟದಲ್ಲಿ ಸೇನಾ ಕಾರ್ಯಾಚರಣೆ'

ಮಾಸ್ಕೊ (ಎಪಿ): ಉಕ್ರೇನ್‌ನಲ್ಲಿ ಕೈಗೊಂಡಿರುವ ವಿಶೇಷ ಸೇನಾ ಕಾರ್ಯಾಚರಣೆಯು ಈಗ ಹೊಸ ಘಟ್ಟವನ್ನು ತಲುಪಿದೆ ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಮಂಗಳವಾರ ತಿಳಿಸಿದ್ದಾರೆ. 'ಇಂಡಿಯಾ ಟುಡೆ' ಟಿ.ವಿ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಅವರು, 'ಸೇನಾ ಕಾರ್ಯಾಚರಣೆಯು ಮುಂದುವರಿದಿದೆ. ಈ ಕಾರ್ಯಾಚರಣೆಯ ಮತ್ತೊಂದು ಹಂತವು ಈಗ ಪ್ರಾರಂಭವಾಗುತ್ತಿದೆ' ಎಂದು ಹೇಳಿದರು.

ಎಕ್ಸಿಸ್, ಕೋಟಕ್ ಬ್ಯಾಂಕ್ ಬಡ್ಡಿ ಏರಿಕೆ

ನವದೆಹಲಿ (ಪಿಟಿಐ): ಎಸ್‌ಬಿಐ ಮತ್ತು ಬ್ಯಾಂಕ್ ಆಫ್ ಬರೋಡ ನಂತರ ಈಗ ಎಕ್ಸಿಸ್ ಬ್ಯಾಂಕ್ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್ ಕೂಡ ಸಾಲದ ಮೇಲಿನ ಬಡ್ಡಿ ದರವನ್ನು (ಎಂಸಿಎಲ್‌ಆರ್) ಶೇಕಡ 0.05ರಷ್ಟು ಹೆಚ್ಚಿಸಿವೆ.

ಸಾಲದ ಮೇಲಿನ ಬಡ್ಡಿ ದರ ಹೆಚ್ಚಳವನ್ನು ಇತರ ಬ್ಯಾಂಕ್‌ಗಳೂ ಅನುಸರಿಸುವ ಸಾಧ್ಯತೆ ಇದೆ. ಇದರಿಂದಾಗಿ ಬೇರೆ ಬೇರೆ ಬಗೆಯ ಸಾಲಗಳ ಮರುಪಾವತಿ ಕಂತುಗಳ ಮೊತ್ತ ಜಾಸ್ತಿ ಆಗಲಿದೆ. ಬ್ಯಾಂಕ್‌ಗಳು ಸರಿಸುಮಾರು ಮೂರು ವರ್ಷಗಳ ನಂತರದಲ್ಲಿ ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸುತ್ತಿವೆ.

ಎಕ್ಸಿಸ್ ಬ್ಯಾಂಕ್‌ನ ಬಡ್ಡಿ ದರ ಹೆಚ್ಚಳವು ಏಪ್ರಿಲ್ 18ರಿಂದ, ಕೋಟಕ್ ಮಹೀಂದ್ರ ಬ್ಯಾಂಕ್‌ನ ಬಡ್ಡಿ ದರ ಹೆಚ್ಚಳವು ಏಪ್ರಿಲ್ 16ರಿಂದ ಜಾರಿಗೆ ಬಂದಿದೆ. ಇದರಿಂದಾಗಿ ಎಂಸಿಎಲ್‌ಆರ್ ಆಧರಿಸಿದ ಸಾಲದ ಕಂತುಗಳ ಮೊತ್ತವು ತುಸು ಜಾಸ್ತಿ ಆಗುತ್ತದೆ.

ಶಾಂತಿ ಸೇಠಿ ನೇಮಕ

ವಾಷಿಂಗ್ಟನ್(ಪಿಟಿಐ): ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಕಾರ್ಯನಿರ್ವಾಹಕ ಕಾರ್ಯದರ್ಶಿ ಹಾಗೂ ರಕ್ಷಣಾ ಸಲಹೆಗಾರರನ್ನಾಗಿ ಭಾರತೀಯ ಅಮೆರಿಕನ್ ನೌಕಾಪಡೆಯ ನಿವೃತ್ತ ಅಧಿಕಾರಿ ಶಾಂತಿ ಸೇಠಿ ಅವರನ್ನು ನೇಮಕ ಮಾಡಲಾಗಿದೆ.

ಉತ್ತರ ಪ್ರದೇಶ: ಕೋಮು ಸಂಘರ್ಷ ತಪ್ಪಿಸಲು ಕ್ರಮ

ಅನುಮತಿ ಇಲ್ಲದೆ ಧಾರ್ಮಿಕ ಮೆರವಣಿಗೆಯಿಲ್ಲ: ಯೋಗಿ

ಲಖನೌ (ಪಿಟಿಐ): 'ಅನುಮತಿ ಪಡೆಯದೆ ಯಾವುದೇ ಧಾರ್ಮಿಕ ಮೆರವಣಿಗೆ ನಡೆಸುವಂತಿಲ್ಲ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಹನುಮಾನ್ ಜಯಂತಿ, ಗುಜರಾತ್, ಮಧ್ಯಪ್ರದೇಶ ಮತ್ತ ಪಶ್ಚಿಮ ಬಂಗಾಳದಲ್ಲಿ ರಾಮನವಮಿ ಆಚರಣೆ ವೇಳೆ ಘರ್ಷಣೆಗಳು ನಡೆದ ಕಾರಣ, ಮುನ್ನೆಚ್ಚರಿಕೆ ಕ್ರಮವಾಗಿ ಯೋಗಿ ಆದಿತ್ಯನಾಥ ಅವರು ಈ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ಈ ಸಂಬಂಧ ರಾಜ್ಯದ ಹಿರಿಯ ಪೊಲೀಸರ ಜತೆಗೆ ಯೋಗಿ ಅವರು ಮಂಗಳವಾರ ಸಭೆ ನಡೆಸಿದರು.

ಪ್ರತಿಯೊಬ್ಬರೂ ಅವರ ಧರ್ಮಕ್ಕೆ ಅನುಸಾರವಾಗಿ, ಪ್ರಾರ್ಥನೆ ಸಲ್ಲಿಸುವ ಸ್ವಾತಂತ್ರ್ಯ ಹೊಂದಿದ್ದಾರೆ. ಆದರೆ, ಅನುಮತಿ ಪಡೆಯದೆ ಧಾರ್ಮಿಕ ಮೆರವಣಿಗೆ ನಡೆಸುವಂತಿಲ್ಲ ಎಂದು ಯೋಗಿ ಅವರು ಟ್ವೀಟ್ ಮಾಡಿದ್ದಾರೆ. ಈದ್ ಹಬ್ಬ ಮತ್ತು ಅಕ್ಷತ ತೃತೀಯ ಆಚರಣೆ ಒಂದೇ ದಿನ ಬರುವ ಸಾಧ್ಯತೆ ಇರುವ ಕಾರಣ ಶಾಂತಿ ಮತ್ತು ಸಾಮರಸ್ಯ ಕಾಪಾಡಲು ಒತ್ತು ನೀಡಬೇಕು. ಇದಕ್ಕಾಗಿ ಮೇ 4ರವರೆಗೆ ಪೊಲೀಸರ ರಜೆಯನ್ನು ರದ್ದುಗೊಳಿಸಲಾಗಿದೆ. ರಜೆ ಮೇಲೆ ತೆರಳಿರುವ ಪೊಲೀಸರು 24 ಗಂಟೆಗಳ ಒಳಗೆ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಯೋಗಿ ಅವರು ಆದೇಶಿಸಿದ್ದಾರೆ.

ನಿರ್ದೇಶನಗಳು

- 'ಮೆರವಣಿಗೆ ವೇಳೆ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳುತ್ತೇವೆ' ಎಂದು ಮೆರವಣಿಗೆಯ ಆಯೋಜಕರಿಂದ ಪ್ರಮಾಣ ಪತ್ರ ಪಡೆಯಬೇಕು
- ಸಾಂಪ್ರದಾಯಿಕವಾಗಿ ಈ ಹಿಂದಿನಿಂದಲೂ ನಡೆಸುಕೊಂಡು ಬರುತ್ತಿರುವಂತಹ ಮೆರವಣಿಗೆಗಳಿಗೆ ಮಾತ್ರವೇ ಅನುಮತಿ ನೀಡಬೇಕು. ಹೊಸ ಸ್ವರೂಪದ ಮೆರವಣಿಗೆಗಳಿಗೆ ಅನುಮತಿ ನೀಡಬಾರದು
- ಧಾರ್ಮಿಕ ಆಚರಣೆ ಮತ್ತು ಕಾರ್ಯಕ್ರಮಗಳು ಸೂಚಿತ ಪ್ರದೇಶದಲ್ಲಷ್ಟೇ ನಡೆಯಬೇಕು. ಸಂಚಾರಕ್ಕೆ ಅಡಚಣೆಯಾಗುವಂತೆ ಯಾವುದೇ ಕಾರ್ಯಕ್ರಮಗಳು ನಡೆಯಬಾರದು

ಕಾಂಗ್ರೆಸ್ ಪುನಶ್ಚೇತನ: ಚಟುವಟಿಕೆ ಬಿರುಸು

ನವದೆಹಲಿ: ಕಾಂಗ್ರೆಸ್ ಪುನಶ್ಚೇತನ ಯೋಜನೆಗೆ ಸಂಬಂಧಿಸಿದ ಚಟುವಟಿಕೆಗಳು ವೇಗ ಪಡೆದುಕೊಂಡಿವೆ. ನಾಲ್ಕು ದಿನಗಳಲ್ಲಿ ಮೂರು ಸಭೆ ಮಾಡಲಾಗಿದೆ. ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಸಲ್ಲಿಸಿರುವ 2024ರ ಲೋಕಸಭಾ ಚುನಾವಣೆಯ ಕಾರ್ಯತಂತ್ರ ಪ್ರಸ್ತಾವವನ್ನು ನಾಲ್ವರು ಸದಸ್ಯರ ಸಮಿತಿಯು ಪರಿಶೀಲನೆ ನಡೆಸುತ್ತಿದೆ.

ಪಕ್ಷದ ಮುಖಂಡರಾದ ಮುಕುಲ್ ವಾಸ್ನಿಕ್, ದಿಗ್ವಿಜಯ್ ಸಿಂಗ್, ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸುರ್ಜೇವಾಲಾ ಅವರ ತಂಡವು ಪ್ರಸ್ತಾವದ ಪರಿಶೀಲನೆ ನಡೆಸುತ್ತಿದೆ. ಈ ಪ್ರಸ್ತಾವವನ್ನು ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕಳೆದ ಶನಿವಾರ ಸಲ್ಲಿಸಿದ್ದರು.

ಪಕ್ಷದ ಪುನಶ್ಚೇತನದ ಬಗ್ಗೆ ಚರ್ಚಿಸಲು ಚಿಂತನ ಶಿಬಿರವು ರಾಜಸ್ಥಾನದ ಉದಯಪುರದಲ್ಲಿ ಮೇ 13ರಿಂದ 15ರವರೆಗೆ ನಡೆಯಲಿದೆ. ಸುಮಾರು 400 ಮುಖಂಡರು ಶಿಬಿರದಲ್ಲಿ ಭಾಗಿಯಾಗಲಿದ್ದಾರೆ.

ಪ್ರಶಾಂತ್ ಕಿಶೋರ್ ಸೇರ್ಪಡೆ?: ಸೋನಿಯಾ ಅವರ ಮನೆಗೆ ಕಿಶೋರ್ ಅವರು ಹಲವು ಬಾರಿ ಭೇಟಿ ಕೊಟ್ಟಿದ್ದಾರೆ. ಸಭೆಗಳು ನಡೆಯುವ ಸಂದರ್ಭಗಳಲ್ಲಿಯೂ ಅವರು ಅಲ್ಲಿ ಇದ್ದರು ಎನ್ನಲಾಗಿದೆ. ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂಬುದರ ಸುಳಿವು ಇದು ಎಂದು ಹೇಳಲಾಗುತ್ತಿದೆ.

ಶಾಂಘೈ: ಕೋವಿಡ್‌ನಿಂದ ಏಳು ಸಾವು

ಬೀಜಿಂಗ್ (ಪಿಟಿಐ): ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ಕೋವಿಡ್–19 ನಿಂದಾಗಿ ಮತ್ತೆ ಏಳು ಮಂದಿ ಮೃತಪಟ್ಟಿದ್ದಾರೆ. ದೇಶದಲ್ಲಿ 21,400 ಕ್ಕೂ ಹೆಚ್ಚು ಹೊಸ ಪ್ರಕರಣಗಳು ದಾಖಲಾಗಿದ್ದು, ಸಾವಿನ ಸಂಖ್ಯೆ 4,648 ಕ್ಕೆ ಏರಿದೆ.

'ಕೋವಿಡ್‌ನಿಂದ ಶಾಂಘೈನಲ್ಲಿ ಸೋಮವಾರ ಏಳು ಮಂದಿ ಮೃತಪಟ್ಟ ವರದಿಯಾಗಿದೆ. ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿವೆ. 2019ರಿಂದ ಈವರೆಗೆ 4,648 ಮಂದಿ ಮೃತಪಟ್ಟಿದ್ದಾರೆ' ಎಂಬುವುದು ಚೀನಾದ ರಾಷ್ಟ್ರೀಯ ಆರೋಗ್ಯ ಸಚಿವಾಲಯ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿಅಂಶಗಳಿಂದ ಗೊತ್ತಾಗಿದೆ.

ಮೃತಪಟ್ಟವರು ಹೃದ್ರೋಗ, ರಕ್ತನಾಳ ಸಂಬಂಧಿ ಕಾಯಿಲೆ, ಮಧುಮೇಹ, ಅಧಿಕ ರಕ್ತದೊತ್ತಡ ಹಾಗೂ ಮಿದುಳಿನ ರಕ್ತಸ್ರಾವದಂತಹ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ಆರೋಗ್ಯಾಧಿಕಾರಿಗಳು ಹೇಳಿದ್ದಾರೆ.

ವಿಮಾ ಭದ್ರತೆ ವಿಸ್ತರಣೆ

ನವದೆಹಲಿ (ಪಿಟಿಐ): ಕೋವಿಡ್ ಸಂಬಂಧಿತ ಸೇವೆಗೆ ನಿಯೋಜಿತರಾಗಿರುವ ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ ರೂಪಿಸಿದ್ದ ವಿಮಾ ಯೋಜನೆಯ ಅವಧಿಯನ್ನು ಕೇಂದ್ರ ಸರ್ಕಾರ ಇನ್ನೂ ಆರು ತಿಂಗಳ ಕಾಲ ವಿಸ್ತರಿಸಿದೆ. ಯೋಜನೆಯಡಿ ಈವರೆಗೆ 1,905 ಕ್ಲೇಮುಗಳನ್ನು ಇತ್ಯರ್ಥಪಡಿಸಲಾಗಿದೆ. ವಿಮಾ ಭದ್ರತೆಯನ್ನು ನಿಯೋಜಿತ ಸಿಬ್ಬಂದಿ ಅವಲಂಬಿತರಿಗೂ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋವಿಡ್ ಸೇವೆಗೆ ನಿಯೋಜಿತರಾದ ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ ವಿಮಾ ಭದ್ರತೆ ಒದಗಿಸಲು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ (ಪಿಎಂಜಿಕೆಪಿ) ಅನ್ನು ಮಾರ್ಚ್ 30, 2020ರಲ್ಲಿ ಆರಂಭಿಸಲಾಗಿತ್ತು. ಒಟ್ಟು ₹ 50 ಲಕ್ಷವರೆಗಿನ ವಿಮಾ ಭದ್ರತೆಯನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ.



ಹಲವು ರಾಜ್ಯಗಳಲ್ಲಿ ಕೋವಿಡ್ ಹೆಚ್ಚಳ

ನವದೆಹಲಿ: ಕೋವಿಡ್‌ನ ಹೊಸ ತಳಿ ಬಗ್ಗೆ ಎಚ್ಚರವಹಿಸುವಂತೆ ಸೂಚಿಸಿರುವ ಕೇಂದ್ರ ಸರ್ಕಾರ, ಕೋವಿಡ್ ನಿಯಂತ್ರಣ ಕ್ರಮಗಳನ್ನು ಬಿಗಿಗೊಳಿಸುವಂತೆ ಐದು ರಾಜ್ಯಗಳಿಗೆ ಪತ್ರ ಬರೆದಿದೆ.

ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಮಿಜೋರಾಂನಲ್ಲಿ ಕೋವಿಡ್ ಪತ್ತೆ ಪರೀಕ್ಷೆ ಹೆಚ್ಚಳ ಮಾಡಬೇಕು ಹಾಗೂ ಸ್ವಾಬ್ ಅನ್ನು ಜಿನಿಟಿಕ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ಕಳುಹಿಸಬೇಕು. ಈ ರಾಜ್ಯಗಳು ಹೊಸ ರೂಪಾಂತರಿ ಹರಡುವಿಕೆ ತಡೆಗಟ್ಟುವ ಕಾಳಜಿಯಿಂದ ಅಗತ್ಯವಿದ್ದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಪತ್ರದಲ್ಲಿ ತಿಳಿಸಿದ್ದಾರೆ. ಮಂಗಳವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಹೊಸದಾಗಿ 1,247 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ.

ಧಾರ್ಮಿಕ ಉದ್ದೇಶಕ್ಕೆ ಆಸ್ತಿ ಉಡುಗೊರೆ

ಅವಿಭಕ್ತ ಕುಟುಂಬದ ಮುಖ್ಯಸ್ಥನಿಗೆ ಅವಕಾಶ

ಪ್ರಜಾವಾಣಿ ವಾರ್ತೆ



ನವದೆಹಲಿ: 'ಹಿಂದೂ ಅವಿಭಕ್ತ ಕುಟುಂಬದ ಮುಖ್ಯಸ್ಥನು ಪಿತ್ರಾರ್ಜಿತ ಆಸ್ತಿಯನ್ನು ಧಾರ್ಮಿಕ ಮತ್ತು ದತ್ತಿ ಉದ್ದೇಶಕ್ಕೆ ಉಡುಗೊರೆ ನೀಡಬಹುದು. ಆದರೆ, ಪ್ರೀತಿ ಮತ್ತು ತವಾತ್ಸಲ್ಯದಿಂದ ಆಸ್ತಿಯನ್ನು ಉಡುಗೊರೆ ನೀಡಿದರೆ, ಅದು ಧಾರ್ಮಿಕ ಮತ್ತು ದತ್ತಿ ಉದ್ದೇಶದ ಉಡುಗೊರೆಯಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೆ.ಸಿ.ಚಂದ್ರಪ್ಪ ಗೌಡ ಮತ್ತು ಅವರ ತಂದೆ ಕೆ.ಎಸ್.ಚಿನ್ನೇ ಗೌಡ ಅವರ ನಡುವಣ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಮತ್ತು ಕೃಷ್ಣಮುರಾರಿ ಅವರಿದ್ದ ಪೀಠವು ಹೀಗೆ ಹೇಳಿದೆ. ಜತೆಗೆ ಮೂರು ಸಂದರ್ಭಗಳಲ್ಲಿ ಮಾತ್ರ ಹಿಂದೂ ಅವಿಭಕ್ತ ಕುಟುಂಬದ ಮುಖ್ಯಸ್ಥನು ಆಸ್ತಿಯನ್ನು ಪರಭಾರೆ ಮಾಡಬಹುದು. ಕಾನೂನಾತ್ಮಕವಾಗಿ ಅಗತ್ಯವಾಗಿದ್ದಾಗ, ಸಂಪತ್ತಿನ ಅಭಿವೃದ್ಧಿಗಾಗಿ ಮತ್ತು ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಪಡೆದಿದ್ದಾಗ ಮಾತ್ರ ಮುಖ್ಯಸ್ಥನು ಹೀಗೆ ಮಾಡಬಹುದು ಎಂದು ಪೀಠವು ಹೇಳಿದೆ.

'ಚಿನ್ನೇಗೌಡ ಅವರು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಪಡೆದು ಪರಭಾರೆ ಮಾಡಿಲ್ಲ. ಚಿನ್ನೇಗೌಡ ಅವರು ಆಸ್ತಿಯ ಬಹುಪಾಲನ್ನು ಕೆ.ಸಿ.ಲಕ್ಷ್ಮಣ ಅವರಿಗೆ ಉಡುಗೊರೆ ನೀಡಿದ್ದಾರೆ' ಎಂದು ಚಂದ್ರಪ್ಪ ಗೌಡ ಅರ್ಜಿ ಸಲ್ಲಿಸಿದ್ದರು. ಲಕ್ಷ್ಮಣ ಪರ ವಕೀಲರು, 'ಇದು ಧಾರ್ಮಿಕ ಮತ್ತು ದತ್ತಿ ಉದ್ದೇಶದ ಉಡುಗೊರೆ' ಎಂದು ವಾದಿಸಿದ್ದರು. ಲಕ್ಷ್ಮಣ ಪರ ವಕೀಲರ ವಾದವನ್ನು ನಿರಾಕರಿಸಿದ ಪೀಠವು, 'ಇದು ಧಾರ್ಮಿಕ ಮತ್ತು ದತ್ತಿ ಉದ್ದೇಶದ ಉಡುಗೊರೆಯಲ್ಲ' ಎಂದು ಹೇಳಿದೆ.

ಔಷಧ ಬೆಲೆಗೆ ಮಿತಿ ನಿಗದಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಪ್ರಾಧಿಕಾರವು (ಎನ್‌ಪಿಪಿಎ) ಮಧುಮೇಹ ನಿಯಂತ್ರಣ ಹಾಗೂ ಕೆಲವು ಕಾಯಿಲೆಗಳ ಚಿಕಿತ್ಸೆಗೆ ಬಳಸುವ ಔಷಧಗಳ ರಿಟೇಲ್ ಮಾರಾಟ ದರಕ್ಕೆ ಮಿತಿ ಹೇರಿದೆ.

ಈ ಔಷಧಗಳನ್ನು ತಯಾರಿಸುವ ಕಂಪನಿಗಳು ಇವುಗಳ ಬೆಲೆಯನ್ನು ಎನ್‌ಪಿಪಿಎ ನಿಗದಿ ಮಾಡಿರುವ ಮಟ್ಟದಲ್ಲಿ ಇರಿಸಬೇಕಿದೆ.

ಮೆಟ್‌ಫಾರ್ಮಿನ್ (ಎಕ್ಸ್‌ಟೆಂಡೆಡ್–ರಿಲೀಸ್) + ಟೆನೆಲಿಗ್ಲಿಪ್ಟಿನ್ ಮಾತ್ರೆಯ ಬೆಲೆ ಪ್ರತಿ ಮಾತ್ರೆಗೆ ₹ 7.14ಕ್ಕೆ, ಡಪಾಗ್ಲಿಫ್ಲೋಜಿನ್ + ಮೆಟಾಫಾರ್ಮಿನ್ ಹೈಡ್ರೊಕ್ಲೋರೈಡ್ ಬೆಲೆ ₹ 10.7ಕ್ಕೆ ನಿಗದಿಯಾಗಿದೆ. ಈ ಮಾತ್ರೆಗಳನ್ನು ಮಧುಮೇಹಿಗಳು ಬಳಸುತ್ತಾರೆ.

ಹ್ಯೂಮನ್ ನಾರ್ಮಲ್ ಇಮ್ಯುನೊಗ್ಲೊಬುಲಿನ್ (10 ಎಂಎಲ್ ವಯಲ್‌ಗೆ ₹ 177.85), ಮೆಡ್ರಾಕ್ಸಿಪ್ರೊಜೆಸ್ಟಿರಾನ್ ಅಸಿಟೇಟ್ ಮಾತ್ರೆ (₹ 14.04) ಬೆಲೆಗೂ ಮಿತಿ ವಿಧಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆ: ಹಿಜಾಬ್‌ಗೆ ನಿರ್ಬಂಧ

ಒಂದನೇ ಪುಟದಿಂದ...

ಈ ವ್ಯವಸ್ಥೆ ದುಬಾರಿ ಆದರೂ, ಅಗತ್ಯವಿದೆ. ಜಿಲ್ಲಾ ಖಜಾನೆಗಳಲ್ಲಿ ಪ್ರಶ್ನೆ ಪತ್ರಿಕೆ ಇರಿಸಿದ ಕೊಠಡಿಗಳ ಸುತ್ತ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇರುತ್ತದೆ. ಪ್ರತಿಯೊಬ್ಬರ ಚಲನವಲನದ ಮೇಲೂ ನಿಗಾ ಇಡಲಾಗುತ್ತದೆ. ಪ್ರಶ್ನೆಪತ್ರಿಕೆ ಕೊಠಡಿಗೆ ಹೋಗುವವರ ವಿಡಿಯೋ ರೆಕಾರ್ಡ್ ಆಗುತ್ತದೆ ಎಂದು ನಾಗೇಶ್ ಹೇಳಿದರು.

ಪರೀಕ್ಷಾ ಅಕ್ರಮಗಳ ತಡೆಗೆ 2,152 ವಿಶೇಷ ಜಾಗೃತ ದಳ ರಚಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ 858, ಜಿಲ್ಲಾ ಮಟ್ಟದಲ್ಲಿ 64 ಜಾಗೃತ ದಳವನ್ನು ನಿಯೋಜಿಸಲಾಗುವುದು ಎಂದರು.

ರಾಜ್ಯಾದ್ಯಂತ ಒಟ್ಟು 81 ಮೌಲ್ಯಮಾಪನ ಕೇಂದ್ರಗಳನ್ನು ನಿಗದಿ ಮಾಡಲಾಗಿದೆ. ಹೊಸದಾಗಿ ತುಮಕೂರು, ಹಾಸನ, ಬಳ್ಳಾರಿ ಜಿಲ್ಲೆಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ವಿವರಿಸಿದರು.

ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ

6,84,255	ನೋಂದಾಯಿಸಿಕೊಂಡ ವಿದ್ಯಾರ್ಥಿಗಳು
6,00,519	ರೆಗ್ಯುಲರ್ ವಿದ್ಯಾರ್ಥಿಗಳು
61,808	ಪುನರಾವರ್ತಿತ ವಿದ್ಯಾರ್ಥಿಗಳು
21,928	ಖಾಸಗಿ ಅಭ್ಯರ್ಥಿಗಳು
1076	ಒಟ್ಟು ಪರೀಕ್ಷಾ ಕೇಂದ್ರಗಳು

'ಭಾರತೀಯರಿಗೆ ಈ ವರ್ಷ 8 ಲಕ್ಷ ವೀಸಾ ನೀಡಿಕೆ ಗುರಿ'

ಬೆಂಗಳೂರು: ಭಾರತೀಯರ ವೀಸಾ ಅರ್ಜಿಯ ದೈನಂದಿನ ಸಂದರ್ಶನಗಳ ಸಂಖ್ಯೆ ಹೆಚ್ಚಿಸಲಾಗುವುದು ಎಂದು ಭಾರತದಲ್ಲಿನ ಅಮೆರಿಕದ ಕಾನ್ಸುಲ್ ವ್ಯವಹಾರಗಳ ಮುಖ್ಯಸ್ಥ ಡಾನ್ ಎಲ್. ಹೆಫ್ಲಿನ್ ತಿಳಿಸಿದರು.

ಚೆನ್ನೈನಲ್ಲಿರುವ ಅಮೆರಿಕದ ಕಾನ್ಸುಲ್ ಜನರಲ್ ಕಚೇರಿಯಲ್ಲಿ ಮಂಗಳವಾರ ನಡೆದ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನ್ಸುಲರ್ ಕಚೇರಿಗಳಲ್ಲಿ ಸಿಬ್ಬಂದಿ ಸಂಖ್ಯೆ ಹೆಚ್ಚಿಸುವ ಪ್ರಯತ್ನಗಳು ಚುರುಕುಗೊಂಡಿದ್ದು, ಮುಂದಿನ ಒಂದು ವರ್ಷದಲ್ಲಿ ಸುಮಾರು 8 ಲಕ್ಷ ವೀಸಾಗಳ ಪ್ರಕ್ರಿಯೆ ಪೂರ್ಣಗೊಳಿಸುವ ಆಶಯವನ್ನು ಅಮೆರಿಕ ರಾಯಭಾರ ಕಚೇರಿ ಹೊಂದಿದೆ ಎಂದರು.

ವೀಸಾಗಳ ಸಂದರ್ಶನ ಪ್ರಕ್ರಿಯೆ ಪೂರ್ಣಗೊಳಿಸಲು ಹಲವು ಸ್ಲಾಟ್‌ಗಳನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳ ವೀಸಾ ಕುರಿತು ಶೀಘ್ರದಲ್ಲೇ ನಿರ್ಧರಿಸಲಾಗುವುದು ಎಂದರು. ನವದೆಹಲಿಯಲ್ಲಿರುವ ರಾಯಭಾರ ಕಚೇರಿ ಮತ್ತು ಕೋಲ್ಕತ್ತ, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ನಲ್ಲಿರುವ ಕಾನ್ಸುಲೇಟ್‌ಗಳು ಕೋವಿಡ್ -19 ಸಾಂಕ್ರಾಮಿಕದ ಪೂರ್ವದಲ್ಲಿ ವಾರ್ಷಿಕ 12 ಲಕ್ಷ ವೀಸಾ ಸಂದರ್ಶನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿವೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'2023 ಅಥವಾ 2024ರಲ್ಲಿ 12 ಲಕ್ಷ ವೀಸಾ ವಿತರಣೆಯ ಗುರಿ ಮುಟ್ಟುವ ಆಶಯ ಹೊಂದಿದ್ದೇವೆ. ವೀಸಾ ಮತ್ತು ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಕಾನ್ಸುಲರ್ ಕಚೇರಿಗಳು ಸಹಾಯವಾಣಿಗಳನ್ನು ಸ್ಥಾಪಿಸಿವೆ' ಎಂದು ಹೆಫ್ಲಿನ್ ಹೇಳಿದರು.ಭಾರತೀಯರಿಗೆ ಎಚ್‌1ಬಿ ವೀಸಾಕ್ಕೆ ಹೆಚ್ಚುವರಿ ಸ್ಲಾಟ್‌ಗಳನ್ನು ತೆರೆಯಲಾಗುವುದೇ ಎಂದು ಕೇಳಿದ ಪ್ರಶ್ನೆಗೆ ಹೆಫ್ಲಿನ್, ಅದು ವಾಷಿಂಗ್ಟನ್‌ನಲ್ಲಿ ನಿರ್ಧಾರವಾಗುವ ವಿಷಯ ಎಂದರು.

ದಲಿತ ವಿದ್ಯಾರ್ಥಿಯಿಂದ ಕಾಲು ನೆಕ್ಕಿಸಿದ ಪ್ರಕರಣ: 8 ಮಂದಿ ಬಂಧನ

ರಾಯ್‌ಬರೇಲಿ: 10ನೇ ತರಗತಿಯ ದಲಿತ ವಿದ್ಯಾರ್ಥಿಯನ್ನು ಥಳಿಸಿ, ಮೇಲ್ಜಾತಿಗೆ ಸೇರಿದ ಯುವಕನ ಪಾದಗಳನ್ನು ನೆಕ್ಕುವಂತೆ ಮಾಡಿದ ವಿಡಿಯೊವೊಂದು ವೈರಲ್ ಆಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಮಂದಿ ಆರೋಪಿಗಳನ್ನು ಉತ್ತರಪ್ರದೇಶ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಗಳೆಲ್ಲರೂ ಅಪ್ರಾಪ್ತರು. ಸಣ್ಣ ವಿಚಾರಕ್ಕೆ ಜಗಳವಾದ ಹಿನ್ನೆಲೆಯಲ್ಲಿ ಮೇಲ್ಜಾತಿ ಯುವಕರು ದಲಿತ ವಿದ್ಯಾರ್ಥಿಯ ಮೇಲೆ ಕೋಪಗೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

ಏನಿದು ಘಟನೆ?: ಏಪ್ರಿಲ್ 10ರಂದು ಜಗತ್‌ಪುರ ಪಟ್ಟಣದ ನಿವಾಸಿ ದಲಿತ ವಿದ್ಯಾರ್ಥಿಯನ್ನು ಆತನ ಸ್ನೇಹಿತನೊಬ್ಬ ಬೈಕ್‌ನಲ್ಲಿ ರಾಮ್‌ಲೀಲಾ ಮೈದಾನಕ್ಕೆ ಕರೆದೊಯ್ದಿದ್ದ. ಬಳಿಕ ವಿದ್ಯಾರ್ಥಿಯನ್ನು ಏಕಾಂತ ಸ್ಥಳಕ್ಕೆ ಕರೆದೊಯ್ದಿದ್ದ ಇತರ ಯುವಕರು ಆತನನ್ನು ಥಳಿಸಿ, ಮೇಲ್ಜಾತಿಗೆ ಸೇರಿದ ಯುವಕನ ಪಾದಗಳನ್ನು ನೆಕ್ಕುವಂತೆ ಮಾಡಿದ್ದರು.

ಈ ವೇಳೆ ರೆಕಾರ್ಡ್ ಮಾಡಿಕೊಂಡಿದ್ದ ವಿಡಿಯೊವನ್ನು ಆರೋಪಿಗಳೇ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಇದು ವೈರಲ್ ಆದ ಬೆನ್ನಲ್ಲೇ ಪ್ರಕರಣ ಬೆಳಕಿಗೆ ಬಂದಿತ್ತು. ಬಳಿಕ ವಿದ್ಯಾರ್ಥಿಯ ತಾಯಿಯು ಕೊತ್ವಾಲಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು.

ಖಂಡನೆ: ಘಟನೆಯನ್ನು ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷ ಖಂಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿವೆ.

'ರಾಜ್ಯದಲ್ಲಿ ದಲಿತರು ಸುರಕ್ಷಿತವಾಗಿಲ್ಲ.... ದಲಿತರ ಮೇಲಿನ ಹಲ್ಲೆ ಘಟನೆಗಳು ಹೆಚ್ಚುತ್ತಿವೆ' ಎಂದು ಎಸ್‌ಪಿ ಆರೋಪಿಸಿದೆ. 'ಪೊಲೀಸರು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ವಿಫಲರಾದಾಗ ಇಂತಹ ಘಟನೆಗಳು ನಡೆಯುತ್ತವೆ' ಎಂದು ಬಿಎಸ್‌ಪಿ ದೂರಿದೆ.

ಅಪರಾಧ ಪ್ರಕ್ರಿಯೆ ಮಸೂದೆಗೆ ರಾಷ್ಟ್ರಪತಿ ಅಂಕಿತ

ನವದೆಹಲಿ (ಪಿಟಿಐ): ಅಪರಾಧ ಕೃತ್ಯಗಳಲ್ಲಿ ಆರೋಪಿಗಳ ದೈಹಿಕ, ಜೈವಿಕ ಮಾದರಿ ಸಂಗ್ರಹಿಸಲು ಪೊಲೀಸರಿಗೆ ಅಧಿಕಾರವನ್ನು ನೀಡುವ ಅಪರಾಧ ಪ್ರಕ್ರಿಯೆ (ಗುರುತಿಸುವಿಕೆ) ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ.

'ಕೈದಿಗಳ ಗುರುತಿಸುವಿಕೆ ಕಾಯ್ದೆ 1920'ರ ಬದಲಿಗೆ ಇದು ಜಾರಿಗೆ ಬರಲಿದೆ. ಈ ಮಸೂದೆಗೆ ಸಂಸತ್ತಿನ ಉಭಯ ಸದನಗಳು ಇದೇ ತಿಂಗಳ ಆರಂಭದಲ್ಲಿ ಅನುಮೋದನೆ ನೀಡಿದ್ದವು.

ಲೆಕ್ಕಪರಿಶೋಧಕರು, ಲೆಕ್ಕಾಧಿಕಾರಿಗಳು ಮತ್ತು ಕಂಪನಿ ಕಾರ್ಯದರ್ಶಿಗಳ ನಿರ್ವಹಣೆಗೆ ಸಂಬಂಧಿಸಿ ಕಾಯ್ದೆಯ ತಿದ್ದುಪಡಿ ಮಸೂದೆಗೂ ರಾಷ್ಟ್ರಪತಿ ರಾಮನಾಥ ಕೋವಿಂದ್ ಅನುಮೋದನೆ ನೀಡಿದ್ದಾರೆ.

ಈ ವೃತ್ತಿಗಳಿಗೆ ಸಂಬಂಧಿತ ಕೇಂದ್ರೀಯ ಸಂಸ್ಥೆಗಳು ಇನ್ನಷ್ಟು ಪಾರದರ್ಶಕವಾಗಿ ಕೆಲಸ ಮಾಡಲು ಮಸೂದೆ ಅವಕಾಶ ಕಲ್ಪಿಸಲಿದೆ ಎನ್ನಲಾಗಿದೆ. ಸಂಸತ್ತು ಈ ಮಸೂದೆಯನ್ನು ಏಪ್ರಿಲ್ 5ರಂದು ಅನುಮೋದಿಸಿತ್ತು.

ಸಂಕ್ಷಿಪ್ತ ಸುದ್ದಿ

ಅಪಘಾತ: ಒಂದೇ ಕುಟುಂಬದ 11 ಮಂದಿ ಸಾವು

ಜೈಪುರ (ಪಿಟಿಐ): ನಿಲ್ಲಿಸಿದ್ದ ಟ್ರ್ಯಾಕ್ಟರ್‌ಗೆ, ಚಾಲಕನ ನಿಯಂತ್ರಣ ತಪ್ಪಿದ ಜೀಪ್ ವೇಗವಾಗಿ ಗುದ್ದಿದ ಪರಿಣಾಮ ರಾಜಸ್ಥಾನದ ಜುನ್‌ಜುನು ಜಿಲ್ಲೆಯಲ್ಲಿ ಮಂಗಳವಾರ ಒಂದೇ ಕುಟುಂಬದ 11 ಜನರು ಮೃತಪಟ್ಟಿದ್ದಾರೆ.

'ಮೃತರು ದೇವಸ್ಥಾನದಿಂದ ಮನೆಗೆ ವಾಪಸಾಗುವಾಗ, ಅಪಘಾತ ಸಂಭವಿಸಿದೆ. ಇತರೆ ಎಂಟು ಜನ ಗಾಯಗೊಂಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಕಾರ್ಯಕರ್ತರ ಬಂಧನ

ಪಾಲಕ್ಕಾಡ್ (ಪಿಟಿಐ): ಕೇರಳದ ಪಾಲಕ್ಕಾಡ್‌ನಲ್ಲಿ ನಡೆದ ಪಾಪುಲರ್ ಫ್ರಂಟ್ ಆಫ್ ಇಂಡಿಯಾದ ನಾಯಕ ಸುಬೈರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೂವರು ಕಾರ್ಯಕರ್ತರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ವಿಜಯ್ ಸಾಖರೆ, 'ರಮೇಶ್, ಆರುಮುಗನ್ ಹಾಗೂ ಸರವಣನ್ ಬಂಧಿತ ಆರೋಪಿಗಳಾಗಿದ್ದು, ಇವರು ನವೆಂಬರ್‌ನಲ್ಲಿ ಹತ್ಯೆಗೀಡಾದ ಆರ್‌ಎಸ್‌ಎಸ್ ಕಾರ್ಯಕರ್ತ ಸಂಜಿತ್ ಅವರ ಸ್ನೇಹಿತರು. ಸಂಜಿತ್ ಕೊಲೆಗೆ ಸೇಡು ತೀರಿಸಿಕೊಳ್ಳಲು, ಈ ಮೂವರು ಪಿಎಫ್‌ಐ ನಾಯಕ ಸುಬೈರ್‌ನನ್ನು ಹತ್ಯೆ ಮಾಡಿದ್ದಾರೆ ಎಂದು ಶಂಕಿಸಲಾಗಿದೆ. ಆದರೆ, ಸಂಜಿತ್ ಕೊಲೆ ಪ್ರಕರಣದಲ್ಲಿ ಸುಬೈರ್‌ನ ಪಾತ್ರವಿದೆ ಎಂಬುದು ಖಚಿತವಾಗಿಲ್ಲ' ಎಂದು ಹೇಳಿದರು.

'ರಮೇಶ್ ಹಾಗೂ ಅವರ ಸ್ನೇಹಿತರು, ಸುಬೈರ್‌ನನ್ನು ಕೊಲ್ಲಲು ಎರಡು ಬಾರಿ ಪ್ರಯತ್ನಿಸಿ ಸೋತಿದ್ದರು. ಆದರೆ, ಮೂರನೇ ಬಾರಿ ಅವಕಾಶ ಸಿಕ್ಕ ಕೂಡಲೇ ಕೊಲೆ ಮಾಡಿದ್ದರು. ಈ ಹತ್ಯೆ ಪ್ರಕರಣದಲ್ಲಿ ಬೇರೆಯವರು ಭಾಗಿಯಾಗಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದ್ದೇವೆ' ಎಂದು ಸಾಖರೆ ತಿಳಿಸಿದರು.

'ವಿಚ್ಛೇದಿತ ಮುಸ್ಲಿಂ ಮಹಿಳೆಗೆ ಜೀವನಾಂಶ'

ಅಲಹಾಬಾದ್, ಉತ್ತರ ಪ್ರದೇಶ (ಪಿಟಿಐ): ವಿಚ್ಛೇದಿತ ಮುಸ್ಲಿಂ ಮಹಿಳೆಯು ಮರು ಮದುವೆ ಆಗುವ ವರೆಗೂ ಹಾಗೂ 'ಇದ್ದತ್' ಸಮಯದಲ್ಲಿ ತನ್ನ ಪತಿಯಿಂದ ಜೀವನಾಂಶ ಪಡೆಯಲು ಅರ್ಹರು ಎಂದು ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪನ್ನು ನೀಡಿದೆ. ನ್ಯಾಯಮೂರ್ತಿ ಕರುಣೇಶ್ ಸಿಂಗ್ ಪವಾರ್ ಅವರ ಏಕ ಸದಸ್ಯ ಪೀಠ ಈ ತೀರ್ಪು ನೀಡಿದೆ. ಕೆಳ ಹಂತದ ನ್ಯಾಯಾಲಯವು ವಿಚ್ಛೇದನದ ನಂತರ ಮುಸ್ಲಿಂ ಮಹಿಳೆಯ ಪತಿ ಆಕೆಗೆ ಜೀವನಾಂಶ ನೀಡುವಂತಿಲ್ಲ ಎಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ, ಮಹಿಳೆಯು ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದ್ದತ್ ಎಂದರೆ ಮುಸ್ಲಿಂ ಮಹಿಳೆಯ ಪತಿ ಮರಣ ಹೊಂದಿದರೆ ಅಥವಾ ಪತಿಯಿಂದ ವಿಚ್ಛೇದನ ಹೊಂದಿದರೆ ಮರು ಮದುವೆ ಆಗುವುದಕ್ಕೆ ಇರುವ ಮೂರು ತಿಂಗಳ ಕಾಲಾವಕಾಶ.

ಕಾಬೂಲ್‌ನಲ್ಲಿ ಸ್ಫೋಟ, 6 ಸಾವು

ಕಾಬೂಲ್ (ಎಪಿ/ಎಎಫ್‌ಪಿ): ಅಫ್ಗಾನಿಸ್ತಾನ ರಾಜಧಾನಿ ಕಾಬೂಲ್‌ನಲ್ಲಿ ಪ್ರೌಢಶಾಲೆಗಳನ್ನು ಗುರಿಯಾಗಿಸಿ ಮಂಗಳವಾರ ನಡೆಸಿದ ಸರಣಿ ಬಾಂಬ್ ಸ್ಫೋಟದಲ್ಲಿ ವಿದ್ಯಾರ್ಥಿಗಳೂ ಸೇರಿ ಆರು ಮಂದಿ ಮೃತಪಟ್ಟಿದ್ದು, 17 ಮಂದಿಗೆ ಗಾಯಗಳಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಕಾಬೂಲ್‌ನ ದಶ್ತ್-ಎ-ಬರ್ಚಿ ಬಳಿಯ ಅಬ್ದುಲ್ ರಹೀಮ್ ಶಹೀದ್ ಪ್ರೌಢಶಾಲೆ ಹಾಗೂ ಸಮೀಪದ ಮತ್ತೊಂದು ಶಾಲೆಯಲ್ಲಿ ಸ್ಫೋಟಗಳು ಸಂಭವಿಸಿವೆ. ಈ ದುಷ್ಕೃತ್ಯಕ್ಕೆ ಐಇಡಿ ಬಳಸಲಾಗಿದೆ ಎಂದು ಕಾಬೂಲ್ ಪೊಲೀಸ್‌ನ ವಕ್ತಾರ ಖಾಲಿದ್ ಜದ್ರಾನ್ ತಿಳಿಸಿದ್ದಾರೆ.



ಲಖನೌ ಸೂಪರ್‌ಜೈಂಟ್ಸ್‌ಗೆ ಸೋಲುಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ

ಜೋಶ್, ಫಫ್ ಆಟಕ್ಕೆ ಒಲಿದ ಜಯ

ನವಿ ಮುಂಬೈ: ಫಫ್ ಡುಪ್ಲೆಸಿ ಅಮೋಘ ಬ್ಯಾಟಿಂಗ್ ಮತ್ತು ಜೋಶ್ ಹ್ಯಾಜಲ್‌ವುಡ್ ಚಾಣಾಕ್ಷ ಬೌಲಿಂಗ್ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯಭೇರಿ ಬಾರಿಸಿತು.

ಮಂಗಳವಾರ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 18 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿತು. ಟಾಸ್ ಗೆದ್ದ ಲಖನೌ ತಂಡದ ನಾಯಕ ಕೆ.ಎಲ್.ರಾಹುಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮೊದಲ ಓವರ್‌ನಲ್ಲಿಯೇ ಏಳು ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡ ಬೆಂಗಳೂರು ಸಂಕಷ್ಟಕ್ಕೊಳಗಾಯಿತು. ನಾಯಕನಿಗೆ ತಕ್ಕ ಆಟವಾಡಿದ ಡುಪ್ಲೆಸಿ (96; 64ಎಸೆತ, 4X11, 6X2) ನಾಲ್ಕು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಆದರೆ, ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 181 ರನ್ ಗಳಿಸಲು ಕಾರಣರಾದರು. ಗುರಿ ಬೆನ್ನಟ್ಟಿದ ಲಖನೌ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 163 ರನ್ ಗಳಿಸಲಷ್ಟೇ ಶಕ್ತವಾಯಿತು. ಜೋಶ್ (25ಕ್ಕೆ4) ಮತ್ತು ಹರ್ಷಲ್ ಪಟೇಲ್ (47ಕ್ಕೆ2) ರಾಹುಲ್ ಬಳಗವನ್ನು ಕಟ್ಟಿಹಾಕಿದರು. ಫಫ್ ಬಳಗಕ್ಕೆ ಇದು ಐದನೇ ಜಯ.

ವಿರಾಟ್ ಡಕ್: ಮೊದಲ ಓವರ್‌ನಲ್ಲಿಯೇ ಮಧ್ಯಮವೇಗಿ ದುಷ್ಮಂತ ಚಮೀರಾ ಮೇಲುಗೈ ಸಾಧಿಸಿದರು. ಐದನೇ ಎಸೆತದಲ್ಲಿ ಅನುಜ್ ರಾವತ್ ಬೌಂಡರಿಗಟ್ಟಲು ಪ್ರಯತ್ನಿಸಿದ ಚೆಂಡನ್ನು ಅದ್ಭುತವಾಗಿ ಕ್ಯಾಚ್ ಮಾಡಿದ ರಾಹುಲ್ ಸಂಭ್ರಮಿಸಿದರು. ನಂತರದ ಎಸೆತದಲ್ಲಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ಫೀಲ್ಡರ್ ದೀಪಕ್ ಹೂಡಾಗೆ ಸುಲಭದ ಕ್ಯಾಚ್ ಕೊಟ್ಟ ವಿರಾಟ್ ಕೊಹ್ಲಿ ಸೊನ್ನೆ ಸುತ್ತಿದರು.

ಫಫ್ –ಶಾಬಾಜ್ ಜೊತೆಯಾಟ: ಫಫ್ ಹೋರಾಟಕ್ಕೆ ತಕ್ಕ ಜೊತೆ ನೀಡಿದವರು ಶಾಬಾಜ್ ಅಹಮದ್ (26; 22ಎ) ಒಬ್ಬರೇ. ಇವರಿಬ್ಬರೂ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. 16ನೇ ಓವರ್‌ನಲ್ಲಿ ರಾಹುಲ್ ಚುರುಕಿನ ಫೀಲ್ಡಿಂಗ್ ಮತ್ತು ಜೇಸನ್ ಹೋಲ್ಡರ್ ಕೈಚಳಕದ ಫಲವಾಗಿ ಶಾಬಾಜ್ ರನ್‌ಔಟ್ ಆದರು. ಜೊತೆಯಾಟ ಮುರಿಯಿತು. ಆದರೆ ಫಫ್ ಶತಕದತ್ತ ದಾಪುಗಾಲು ಹಾಕಿದ್ದರು. ಕೊನೆಯ ಓವರ್‌ನವರೆಗೂ ತಂಡದ ಮೊತ್ತ ಹೆಚ್ಚಿಸಲು ಆದ್ಯತೆ ನೀಡಿದರು. ಆದರೆ ಕೊನೆಯ ಓವರ್‌ನಲ್ಲಿ ಔಟಾದರು.

ಕೃಣಾಲ್ ಹೋರಾಟ: ಲಖನೌ ತಂಡದಲ್ಲಿ ಕ್ವಿಂಟನ್ ಡಿಕಾಕ್, ಮನೀಷ್ ಪಾಂಡೆ ಒಂದಂಕಿ ಮೊತ್ತ ಗಳಿಸಿದ್ದು ತಂಡದ ಹಿನ್ನಡೆಗೆ ಕಾರಣವಾಯಿತು. ರಾಹುಲ್ (30 ರನ್), ಕೃಣಾಲ್ ಪಾಂಡ್ಯ (42; 28ಎ) ಹಾಗೂ ಮಾರ್ಕಸ್ ಸ್ಟೊಯಿನಿಸ್ ಅವರ ಹೋರಾಟ ಸಾಕಾಗಲಿಲ್ಲ. ಉತ್ತಮ ಬೌಲಿಂಗ್ ಮಾಡಿದ ಹ್ಯಾಜಲ್‌ವುಡ್ ಲಖನೌಗೆ ಸಿಂಹಸ್ವಪ್ನವಾದರು.



ನಾಯಕ ಫಫ್ ಡುಪ್ಲೆಸಿ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಆರ್‌ಸಿಬಿ
- ಹರ್ಷಲ್ ಪಟೇಲ್‌ಗೆ ಎರಡು ವಿಕೆಟ್



ಜೋಶ್ ಹ್ಯಾಜಲ್‌ವುಡ್

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 181 (20 ಓವರ್)

ಅನುಜ್ ಸಿ ರಾಹುಲ್ ಬಿ ಚಮೀರ 4 (5ಎ, 4X1), ಡುಪ್ಲೆಸಿ ಸಿ ಸ್ಟೋಯಿನಿಸ್ ಬಿ ಹೋಲ್ಡರ್ 96 (64ಎ, 4X11, 6X2), ವಿರಾಟ್ ಸಿ ಹೂಡಾ ಬಿ ಚಮೀರ 0 (1ಎ), ಮ್ಯಾಕ್ಸ್‌ವೆಲ್ ಸಿ ಹೋಲ್ಡರ್ ಬಿ ಕೃಣಾಲ್ 23 (11ಎ, 4X3, 6X1), ಸುಯಶ್ ಸಿ ಕೃಣಾಲ್ ಬಿ ಹೋಲ್ಡರ್ 10 (9ಎ, 6X1), ಶಾಬಾಜ್ ರನೌಟ್ (ರಾಹುಲ್/ಹೋಲ್ಡರ್) 26 (22ಎ, 4X1), ಕಾರ್ತಿಕ್ ಔಟಾಗದೆ 13 (8ಎ, 6X1), ಹರ್ಷಲ್ ಔಟಾಗದೆ 0 (1ಎ)

ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 6) 9

ವಿಕೆಟ್ ಪತನ: 1-7 (ಅನುಜ್ ರಾವತ್, 0.5), 2-7 (ವಿರಾಟ್ ಕೊಹ್ಲಿ, 0.6), 3-44 (ಗ್ಲೆನ್ ಮ್ಯಾಕ್ಸ್‌ವೆಲ್, 5.2), 4-62 (ಸುಯಶ್ ಪ್ರಭುದೇಸಾಯಿ, 7.2), 5-132 (ಶಾಬಾಜ್ ಅಹಮ್ಮದ್, 15.2), 6-181 (ಫಫ್ ಡುಪ್ಲೆಸಿ, 19.5)

ಬೌಲಿಂಗ್: ದುಷ್ಮಂತ್ ಚಮೀರ 3-0-31-2, ಆವೇಶ್ ಖಾನ್ 4-0-33-0, ಕೃಣಾಲ್ ಪಾಂಡ್ಯ 4-0-29-1, ರವಿ ಬಿಷ್ಣೋಯಿ 4-0-47-0, ಜೇಸನ್ ಹೋಲ್ಡರ್ 4-0-25-2, ಮಾರ್ಕಸ್ ಸ್ಟೋಯಿನಿಸ್ 1-0-14-0

ಲಖನೌ ಸೂಪರ್ ಜೈಂಟ್ಸ್ 8ಕ್ಕೆ 163 (20 ಓವರ್)

ಡಿಕಾಕ್ ಸಿ ಮ್ಯಾಕ್ಸ್‌ವೆಲ್ ಬಿ ಹ್ಯಾಜಲ್‌ವುಡ್ 3 (5ಎ), ರಾಹುಲ್ ಸಿ ಕಾರ್ತಿಕ್ ಬಿ ಹರ್ಷಲ್ 30 (24ಎ, 4X3, 6X1), ಮನೀಷ್ ಸಿ ಹರ್ಷಲ್ ಬಿ ಹ್ಯಾಜಲ್‌ವುಡ್ 6 (8ಎ, 4X1), ಕೃಣಾಲ್ ಸಿ ಶಾಬಾಜ್ ಬಿ ಮ್ಯಾಕ್ಸ್‌ವೆಲ್ 42 (28ಎ, 4X5, 6X2), ದೀಪಕ್ ಸಿ ಸುಯಶ್ ಬಿ ಸಿರಾಜ್ 13 (14ಎ, 4X1), ಆಯುಷ್ ಸಿ ಕಾರ್ತಿಕ್ ಬಿ ಹ್ಯಾಜಲ್‌ವುಡ್ 13 (13ಎ, 4X2), ಸ್ಟೋಯಿನಿಸ್ ಬಿ ಹ್ಯಾಜಲ್‌ವುಡ್ 24 (15ಎ, 4X2, 6X1), ಹೋಲ್ಡರ್ ಸಿ ಸಿರಾಜ್ ಬಿ ಹರ್ಷಲ್ 16 (9ಎ, 6X2), ದುಷ್ಮಂತ್ ಔಟಾಗದೆ 1 (3ಎ), ರವಿ ಔಟಾಗದೆ 0 (1ಎ)

ಇತರೆ (ಬೈ 4, ವೈಡ್ 11) 15

ವಿಕೆಟ್ ಪತನ: 1-17 (ಕ್ವಿಂಟನ್ ಡಿಕಾಕ್, 2.5), 2-33 (ಮನೀಷ್ ಪಾಂಡೆ, 4.6), 3-64 (ಕೆ.ಎಲ್. ರಾಹುಲ್, 7.6), 4-100 (ದೀಪಕ್ ಹೂಡಾ, 12.3), 5-108 (ಕೃಣಾಲ್ ಪಾಂಡ್ಯ, 13.4), 6-135 (ಆಯುಷ್ ಬದೋಣಿ, 16.4), 7-148 (ಮಾರ್ಕಸ್ ಸ್ಟೋಯಿನಿಸ್, 18.2), 8-163 (ಜೇಸನ್ ಹೋಲ್ಡರ್, 19.5)

ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-31-1, ಗ್ಲೆನ್ ಮ್ಯಾಕ್ಸ್‌ವೆಲ್ 2-0-11-1, ಜೋಶ್ ಹ್ಯಾಜಲ್‌ವುಡ್ 4-0-25-4, ಶಾಬಾಜ್ ಅಹಮ್ಮದ್ 4-0-25-0, ಹರ್ಷಲ್ ಪಟೇಲ್ 4-0-47-2, ವನಿಂದು ಹಸರಂಗ 2-0-20-0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 18 ರನ್‌ಗಳ ಜಯ

ರಿಷಭ್ –ಮಯಂಕ್ ಮುಖಾಮುಖಿ

ಆಟಗಾರರಿಗೆ ಕೋವಿಡ್: ಪುಣೆಯಿಂದ ಪಂದ್ಯ ಸ್ಥಳಾಂತರ

ಮುಂಬೈ (ಪಿಟಿಐ): ಕೋವಿಡ್ ಪ್ರಕರಣಗಳು ವರದಿಯಾಗಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮತ್ತು ಪಂಜಾಬ್ ಕಿಂಗ್ಸ್ ನಡುವಣ ಪಂದ್ಯವನ್ನು ಪುಣೆಯಿಂದ ಮುಂಬೈಗೆ ಸ್ಥಳಾಂತರಿಸಲಾಗಿದೆ.

ಪಂದ್ಯವು ಬುಧವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಡೆಲ್ಲಿ ತಂಡದ ಆಟಗಾರ ಮಿಚೆಲ್ ಮಾರ್ಷ್, ಫಿಸಿಯೊ ಪ್ಯಾಟ್ರಿಕ್ ಫರ್ಹಾಟ್, ಮಸಾಜ್ ತಜ್ಞ ಚೇತನ್ ಕುಮಾರ್, ವೈದ್ಯ ಅಭಿಜಿತ್ ಸಾಳ್ವಿ ಮತ್ತು ಸಾಮಾಜಿಕ ಜಾಲತಾಣ ನಿರ್ವಾಹಕ ತಂಡದ ಸದಸ್ಯ ಆಕಾಶ್ ಮಾನೆ ಅವರು ಸೋಂಕಿತರಾಗಿದ್ದು, ಪ್ರತ್ಯೇಕವಾಸದಲ್ಲಿದ್ದಾರೆ.

‘ಪೂರ್ವನಿರ್ಧರಿತ ವೇಳಾಪಟ್ಟಿಯ 32ನೇ ಪಂದ್ಯ ಇದಾಗಿದೆ. ಪುಣೆಯಲ್ಲಿ ನಡೆಯಬೇಕಿತ್ತು. ಆದರೆ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿ ಮುಂಬೈಗೆ ಸ್ಥಳಾಂತರಿಸಲಾಗಿದೆ. ಬಸ್‌ನಲ್ಲಿ ದೀರ್ಘ ನಗರಗಳ ನಡುವಣ ಪ್ರಯಾಣದ ಸಂದರ್ಭದಲ್ಲಿ ಕೋವಿಡ್ ಪ್ರಸರಣವು ಉಲ್ಬಣಿಸದಂತೆ ನೋಡಿಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಡೆಲ್ಲಿ ಆಟಗಾರರನ್ನು ಬುಧವಾರ ಬೆಳಿಗ್ಗೆ ಆರ್‌ಟಿಪಿಸಿಆರ್ ಪರೀಕ್ಷೆಗೊಳಪಡಿಸಲಾಗುವುದು. ಸೋಂಕಿನಿಂದ ಮುಕ್ತರಾದರೆ ಮಾತ್ರ ಆಡುವ ಅವಕಾಶ ಪಡೆಯುವರು. ಮಂಗಳವಾರದ ಪರೀಕ್ಷೆಗೊಳಗಾದ ಇನ್ನುಳಿದ ಆಟಗಾರರು ಆರೋಗ್ಯವಾಗಿದ್ದಾರೆ ಎಂದು ತಿಳಿಸಲಾಗಿದೆ. ಡೆಲ್ಲಿ ತಂಡವು ಇದುವರೆಗೆ ಆಡಿರುವ ಐದು ಪಂದ್ಯಗಳಲ್ಲಿ 2ರಲ್ಲಿ ಗೆದ್ದಿದೆ. ಮೂರರಲ್ಲಿ ಸೋತಿದೆ. ಪಂಜಾಬ್ ತಂಡವು 6 ಪಂದ್ಯಗಳಲ್ಲಿ ಆಡಿ 3ರಲ್ಲಿ ಗೆದ್ದು, 3ರಲ್ಲಿ ಸೋತಿದೆ. ಹೋದ ಪಂದ್ಯದಲ್ಲಿ ಗಾಯಗೊಂಡು ಹೊರಗುಳಿದಿದ್ದ ನಾಯಕ ಮಯಂಕ್ ಅಗರವಾಲ್ ಈ ಪಂದ್ಯಕ್ಕೆ ಮರಳುವುದು ಬಹುತೇಕ ಖಚಿತವಾಗಿದೆ. ‘ಪಂದ್ಯ ಆಡಲು ನಾವು ಪುಣೆಗೆ ಪಯಣಿಸಬೇಕಿತ್ತು. ಆದರೆ ಮುಂಬೈನಲ್ಲಿಯೇ ಉಳಿಯುವಂತೆ ಸೂಚನೆ ಬಂದ ಕಾರಣ ಪ್ರಯಾಣ ಮಾಡಲಿಲ್ಲ’ ಎಂದು ಪಂಜಾಬ್ ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್



ಲಿಯಾಮ್ ಲಿವಿಂಗ್‌ಸ್ಟೋನ್



ರಿಷಭ್ ಪಂತ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	6	5	1	0	0	10	0.395
ಬೆಂಗಳೂರು	7	5	2	0	0	10	0.251
ರಾಜಸ್ಥಾನ	6	4	2	0	0	8	0.380
ಲಖನೌ	7	4	3	0	0	8	0.124
ಹೈದರಾಬಾದ್	6	4	2	0	0	8	-0.077
ಕೋಲ್ಕತ್ತ	7	3	4	0	0	6	0.160
ಪಂಜಾಬ್	6	3	3	0	0	6	0.109
ಡೆಲ್ಲಿ	5	2	3	0	0	4	0.219
ಚೆನ್ನೈ	6	1	5	0	0	2	-0.638
ಮುಂಬೈ	6	0	6	0	0	0	-1.048

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	17
ನಟರಾಜನ್	ಹೈದರಾಬಾದ್	12
ಕುಲದೀಪ್	ಡೆಲ್ಲಿ	11

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	375
ರಾಹುಲ್	ಲಖನೌ	265
ಡುಪ್ಲೆಸಿ	ಬೆಂಗಳೂರು	250



ಅರ್ಜುನ್ ಹಲಕುರ್ಕಿ– ಪಿಟಿಐ ಸಂಗ್ರಹ ಚಿತ್ರ

ಏಷ್ಯನ್ ಕುಸ್ತಿ: ಅರ್ಜುನ್, ಸುನಿಲ್, ನೀರಜ್‌ಗೆ ಕಂಚು

ಉಲಾನ್ ಬಾತರ್, ಮಂಗೋಲಿಯಾ (ಪಿಟಿಐ): ಕರ್ನಾಟಕದ ಅರ್ಜುನ್ ಹಲಕುರ್ಕಿ ಸೇರಿ ಭಾರತದ ಮೂವರು ಕುಸ್ತಿಪಟುಗಳು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರೀಕೊ ರೋಮನ್ ವಿಭಾಗದಲ್ಲಿ ಮಂಗಳವಾರ ಕಂಚಿನ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಸುನಿಲ್ ಹಾಗೂ ನೀರಜ್ ಕಂಚು ಗೆದ್ದ ಭಾರತದ ಇನ್ನಿಬ್ಬರು ಪೈಲ್ವಾನರು.

55 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅರ್ಜುನ್, ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಸ್ಥಳೀಯ ಪೈಲ್ವಾನ ದವಾಬಂಡಿ ಮುಂಕ್ ಎರ್ಡನ್ ಸವಾಲು ಮೀರಿದರು. ಅರ್ಜುನ್‌ಗೆ 10–7ರಿಂದ ಜಯ ಒಲಿಯಿತು.ಕ್ವಾರ್ಟರ್‌ಫೈನಲ್‌ನಲ್ಲಿ ಅರ್ಜುನ್ ಕಜಕಸ್ತಾನದ ಅಮಂಗಾಲಿ ಬೆಕ್‌ಬೊಲಾತೊವ್ ಎದುರು ಸೋತಿದ್ದರು. ಬೆಕ್‌ಬೊಲಾತೊವ್ ಫೈನಲ್ ತಲುಪಿದ್ದರಿಂದ ಅರ್ಜುನ್‌ಗೆ ಪ್ಲೇ ಆಫ್ ಆಡುವ ಅವಕಾಶ ಸಿಕ್ಕಿತ್ತು.

2020ರ ಆವೃತ್ತಿಯಲ್ಲೂ ಕರ್ನಾಟಕದ ಕುಸ್ತಿಪಟುವಿಗೆ ಕಂಚು ಒಲಿದಿತ್ತು.

87 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸುನಿಲ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಬಾರಿ ‘ಪೋಡಿಯಂ ಫಿನಿಶ್’ ಮಾಡಿದರು. 2020ರ ಆವೃತ್ತಿಯಲ್ಲಿ ಚಿನ್ನದ ಪದಕದ ಸಾಧನೆ ಮಾಡಿದ್ದ ಅವರು, ಈ ಆವೃತ್ತಿಯ ಕಂಚಿನ ಪದಕದ ಬೌಟ್‌ನಲ್ಲಿ ಮಂಗೋಲಿಯಾದ ಬಾತ್‌ಬಯಾರ್ ಲೂಟ್‌ಬಯಾರ್ ಅವರನ್ನು ಮಣಿಸಿದರು. ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಅವರಿಗೆ ಜಯ ಒಲಿಯಿತು.

ಸೆಮಿಫೈನಲ್‌ನಲ್ಲಿ ಸುನಿಲ್ ಉಜ್ಬೆಕಿಸ್ತಾನದ ಜಲ್ಗಾಸ್‌ಬಾಯ್ ಬೆರ್ಡಿಮುರೊತೊವ್ ವಿರುದ್ಧ ಸೋತಿದ್ದರು. ಮೊದಲ ಸುತ್ತಿನಲ್ಲಿ ಭಾರತದ ಪೈಲ್ವಾನಗೆ ಜಪಾನ್‌ನ ಮಸಾಟೊ ಸುಮಿ ಎದುರು ಗೆಲುವು ಲಭಿಸಿತ್ತು.

63 ಕೆಜಿ ವಿಭಾಗದ ಬೌಟ್‌ನಲ್ಲಿ ನೀರಜ್ 7–4ರಿಂದ ಉಜ್ಬೆಕಿಸ್ತಾನದ ಇಸ್ಲಾಮ್‌ಜಾನ್ ಬಖ್ರಮೊವ್ ಅವರನ್ನು ಚಿತ್ ಮಾಡಿದರು. ಕ್ವಾರ್ಟರ್‌ಫೈನಲ್‌ನಲ್ಲಿ ಕಿರ್ಗಿಸ್ತಾನದ ತೈನಾರ್ ಶರ್ಶೆನ್‌ಬೆಕೊವ್ ಎದುರು ನೀರಜ್ ಸೋತಿದ್ದರು. ಈ ವಿಭಾಗದಲ್ಲಿ ತೈನಾರ್ ಚಿನ್ನ ಗೆದ್ದರು. ನೀರಜ್‌ಗೆ ಪ್ಲೇ ಆಫ್‌ನಲ್ಲಿ ಕಣಕ್ಕಿಳಿಯುವ ಅವಕಾಶ ಲಭಿಸಿತ್ತು.

ವಿಶ್ವ ವಿವಿ ಕ್ರೀಡಾಕೂಟಕ್ಕೆ ರಹದಾರಿ ಖೇಲೊ ಇಂಡಿಯಾ

16 ಸ್ಪರ್ಧೆಗಳ ಆತಿಥ್ಯಕ್ಕೆ ಜೈನ್ ವಿಶ್ವವಿದ್ಯಾಲಯ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯಲ್ಲಿರುವ ಜೈನ್ ವಿಶ್ವವಿದ್ಯಾಲಯದ ಆವರಣಕ್ಕೆ ಈಗ ಹೊಸ ಕಳೆ ಬಂದಿದೆ. ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕೂಟದ ಸ್ಪರ್ಧೆಗಳನ್ನು ಆಯೋಜಿಸಲು ಅಂತಿಮ ಹಂತದ ತಯಾರಿ ಭರದಿಂದ ಸಾಗಿದೆ.

ಇದೇ 24ರಿಂದ ಮೇ 3ರವರೆಗೆ ನಗರದಲ್ಲಿ ಕೂಟವು ನಡೆಯಲಿದೆ. ಜೈನ್ ವಿಶ್ವವಿದ್ಯಾಲಯವು 16 ಕ್ರೀಡೆಗಳಿಗೆ ಆತಿಥ್ಯ ವಹಿಸಲಿದೆ. ಉಳಿದ 4 ಕ್ರೀಡೆಗಳ ಸ್ಪರ್ಧೆಗಳು ಕಂಠೀರವ ಕ್ರೀಡಾಂಗಣ, ಸಾಯ್ ಶೂಟಿಂಗ್ ರೇಂಜ್ ಮತ್ತು ಹಾಕಿ ಮೈದಾನದಲ್ಲಿ ನಡೆಯಲಿವೆ.

ಈ ಕುರಿತು ಮಾಹಿತಿ ನೀಡಿದ ಜೈನ್ ವಿವಿಯ ನಿರ್ದೇಶಕ ಯ.ವಿ. ಶಂಕರ್, ‘ದೇಶದ 200 ವಿವಿಗಳಿಂದ 4500 ಸ್ಪರ್ಧಿಗಳು ಇಲ್ಲಿಗೆ ಬರಲಿದ್ದಾರೆ. ಹತ್ತು ದಿನಗಳ ಕೂಟ ಇದಾಗಿದೆ. ಇಲ್ಲಿ ವಿಜೇತರಾದವರಿಗೆ ಇದೇ ವರ್ಷ ಚೀನಾದಲ್ಲಿ ನಡೆಯಲಿರುವ ವಿಶ್ವ ಯುನಿವರ್ಸಿಟಿ ಗೇಮ್ಸ್‌ಗೆ ಅರ್ಹತೆ ಸಿಗಲಿದೆ’ ಎಂದರು.

‘ಜೂನ್–ಜುಲೈನಲ್ಲಿ ಕೂಟ ನಡೆಯಲಿದೆ. ಆದರೆ, ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ವರದಿಗಳಿವೆ. ಮುಂದಿನ ಬದಲಾವಣೆಗಳ ಬಗ್ಗೆ ಮಾಹಿತಿ ಇಲ್ಲ’ ಎಂದರು.

‘ಕೂಟದಲ್ಲಿ ಭಾಗವಹಿಸುವ ಸ್ಪರ್ಧಿಗಳು ಮತ್ತಿತರರು ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದಿರುವುದು ಕಡ್ಡಾಯ. ಉಳಿದಂತೆ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಲಾಗುವುದು. ಕೋವಿಡ್ ಪತ್ತೆ, ಚಿಕಿತ್ಸೆಗೆ ಪರಿಣತ ವೈದ್ಯರ ತಂಡ, ಐಸೋಲೇಷನ್ ಕೋಣೆಗಳ ವ್ಯವಸ್ಥೆ ಮಾಡಲಾಗಿದೆ. ಕ್ರೀಡಾಕೂಟಕ್ಕೆ ಬ್ಯಾಟರಿಚಾಲಿತ ಬಸ್ ಸೌಲಭ್ಯವನ್ನು ಬಿಎಂಟಿಸಿಯಿಂದ ಪಡೆಯುವ ಯೋಜನೆಯಿತ್ತು. ಆದರೆ ಸ್ಪರ್ಧೆಗಳು ನಡೆಯುವ ಕ್ರೀಡಾಂಗಣಗಳ ನಡುವೆ ಹಾಗೂ ವಿಮಾನನಿಲ್ದಾಣದಿಂದ ವಿಶ್ವವಿದ್ಯಾಲಯಕ್ಕೆ ಬಸ್‌ಗಳ ಓಡಾಟವನ್ನು ಕೈಬಿಡಲಾಗಿದೆ. ಈ ತಾಣಗಳಲ್ಲಿ ಬ್ಯಾಟರಿ ರಿಚಾರ್ಜ್ ಸೌಲಭ್ಯಗಳಿಲ್ಲದಿರುವುದೇ ಅದಕ್ಕೆ ಕಾರಣ. ಆದರೆ, ವಿವಿಯ ಆವರಣದೊಳಗೆ ಬ್ಯಾಟರಿಚಾಲಿತ ವಾಹನ ವ್ಯವಸ್ಥೆ ಮಾಡಲಾಗುತ್ತಿದೆ. ಪರಿಸರಸ್ನೇಹಿ ಕ್ರೀಡಾಕೂಟದಂಗವಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಯೋಜನೆಯಿದೆ. ಆದರೆ ನಾಡಾ ಉದ್ದೀಪನ ಮದ್ದು ಪರೀಕ್ಷೆ ನಡೆಸುವ ಸಂದರ್ಭದಲ್ಲಿ ನೀರಿನ ಬಾಟಲಿಗಳನ್ನು ಒದಗಿಸಲು ಹೇಳಿದೆ. ಆ ವಿಷಯದ ಕುರಿತು ಚರ್ಚೆ ನಡೆಯುತ್ತಿದೆ’ ಎಂದರು.



ಜೈನ್ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸುಸಜ್ಜಿತ ಈಜುಕೊಳ –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಆಳ್ವಾಸ್‌ನ 71 ಮಂದಿ ಆಯ್ಕೆ

ಮೂಡುಬಿದಿರೆ: ‘ಬೆಂಗಳೂರಿನಲ್ಲಿ ನಡೆಯಲಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ ಆಳ್ವಾಸ್ ಕಾಲೇಜಿನಿಂದ 71 ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ’ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಈ ಬಾರಿಯ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿ ಮಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ, ಸಾಧನೆ ಮೆರೆದ ಕ್ರೀಡಾಪಟುಗಳು ಖೇಲೊ ಇಂಡಿಯಾ ಕ್ರೀಡಾಕೂಟಕ್ಕೆ ಅರ್ಹತೆ ಪಡೆದಿದ್ದಾರೆ. ಅಥ್ಲೆಟಿಕ್ಸ್‌ನಲ್ಲಿ ಒಟ್ಟು 41 ಮಂದಿ, ಪುರುಷರ ವಾಲಿಬಾಲ್‌ನಲ್ಲಿ 7, ಮಹಿಳೆಯರ ವಿಭಾಗದ; ಕಬಡ್ಡಿಯಲ್ಲಿ 9, ಹಾಕಿಯಲ್ಲಿ 3, ವೇಟ್ ಲಿಫ್ಟಿಂಗ್‌ನಲ್ಲಿ 3 ಹಾಗೂ ಕುಸ್ತಿಯಲ್ಲಿ ಇಬ್ಬರು ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

‘ಹೊಸದಾಗಿ ಸೇರ್ಪಡೆಗೊಂಡ ದೇಸಿ ಕ್ರೀಡೆ ಮಲ್ಲಕಂಬದಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯದಿಂದ ಆಯ್ಕೆಯಾದ ಏಕೈಕ ವಿಶ್ವವಿದ್ಯಾಲಯವಾಗಿದೆ. ಈ ತಂಡವನ್ನು ಪ್ರತಿನಿಧಿಸಲಿರುವ ಎಲ್ಲ ಆರು ಕ್ರೀಡಾಪಟುಗಳು ಆಳ್ವಾಸ್ ಕಾಲೇಜಿನವರಾಗಿದ್ದಾರೆ. ಒಡಿಶಾದ ಕಳಿಂಗ ವಿವಿಯಲ್ಲಿ ನಡೆದ ಮೊದಲನೇ ಆವೃತ್ತಿಯ ಕ್ರೀಡಾಕೂಟದಲ್ಲಿ ಮಂಗಳೂರು ವಿಶ್ವವಿದ್ಯಾಲಯ ಪುರುಷರ ಹಾಗೂ ಮಹಿಳೆಯರ ವಿಭಾಗದ ಎರಡೂ ತಂಡ ಪ್ರಶಸ್ತಿಯನ್ನು ಗಳಿಸಿತ್ತು’ ಎಂದು ಮೋಹನ ಆಳ್ವ ಹೇಳಿದರು.

ಫುಟ್‌ಬಾಲ್: ಬಳ್ಳಾರಿಯಲ್ಲಿ ಶಿಬಿರ

ನವದೆಹಲಿ (ಪಿಟಿಐ): ಎಎಫ್‌ಸಿ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯ ಅಂತಿಮ ಸುತ್ತಿನ ಅರ್ಹತಾ ಪಂದ್ಯಗಳಿಗಾಗಿ ಭಾರತದ ಸಂಭಾವ್ಯ ತಂಡವನ್ನು ಪ್ರಕಟಿಸಲಾಗಿದೆ.

ಫಾರ್ವರ್ಡ್ ಆಟಗಾರರಾದ ಸುನಿಲ್ ಚೆಟ್ರಿ ಮತ್ತು ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸ್ಥಾನ ಪಡೆದಿದ್ದಾರೆ.

ಜೂನ್ 8ರಿಂದ ಅರ್ಹತಾ ಪಂದ್ಯಗಳು ಕೋಲ್ಕತ್ತದಲ್ಲಿ ನಡೆಯಲಿದ್ದು, ಕರ್ನಾಟಕದ ಬಳ್ಳಾರಿಯಲ್ಲಿ ತಂಡದ ತರಬೇತಿಯು ಇದೇ 23ರಿಂದ ಮೇ 8ರವರೆಗೆ ನಡೆಯಲಿದೆ.

ಅಂತಿಮ ಸುತ್ತಿನ ಅರ್ಹತಾ ಪಂದ್ಯಗಳಿಗೆ ಭಾರತ ತಂಡವು ‘ಡಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಹಾಂಗ್‌ಕಾಂಗ್, ಅಫ್ಗಾನಿಸ್ತಾನ ಮತ್ತು ಕಾಂಬೋಡಿಯಾ ಇದೇ ಗುಂಪಿನಲ್ಲಿವೆ. ಭಾರತ ಮೊದಲ ಪಂದ್ಯದಲ್ಲಿ ಕಾಂಬೋಡಿಯಾವನ್ನು ಎದುರಿಸಲಿದೆ.

ಮಗು ಸಾವು: ಕಣಕ್ಕಿಳಿಯದ ಕ್ರಿಸ್ಟಿಯಾನೊ ರೊನಾಲ್ಡೊ

ಮ್ಯಾಂಚೆಸ್ಟರ್ ಯುನೈಟೆಡ್ (ಎಪಿ): ನವಜಾತ ಅವಳಿ ಮಕ್ಕಳಲ್ಲಿ ಗಂಡು ಮಗು ಸಾವನಪ್ಪಿದ ಕಾರಣ ಮ್ಯಾಂಚೆಸ್ಟರ್ ಯುನೈಟೆಡ್ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಲಿವರ್‌ಪೂಲ್ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ.

ರೊನಾಲ್ಡೊ ಸಂಗಾತಿ ಜಾರ್ಜಿಯಾನ ರೋಡ್ರಿಗ್ವೆಜ್ ಸೋಮವಾರ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದರು. ಅದರಲ್ಲಿನ ಗಂಡು ಮಗು ಸಾವನಪ್ಪಿದ್ದು, ಹೆಣ್ಣುಮಗು ಆರೋಗ್ಯವಾಗಿದೆ.

ಟೆನಿಸ್: ಕ್ವಾರ್ಟರ್‌ಫೈನಲ್‌ಗೆ ಭಾರತೀಯಾನಾ

ಬೆಂಗಳೂರು: ಭಾರತೀಯಾನಾ ಬಿ. ರೆಡ್ಡಿ ಅವರು ಮೂರನೇ ಶ್ರೇಯಾಂಕದ ಉಮಾಮ್ ಅಹಮ್ಮದ್ ಅವರಿಗೆ ಸೋಲುಣಿಸಿ ಎಐಟಿಎ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಮಂಗಳವಾರ ಭಾರತೀಯಾನಾ ಅವರಿಗೆ 7-5, 6-2ರಿಂದ ಗೆಲುವು ಒಲಿಯಿತು.

ಬಾಲಕಿಯರ ವಿಭಾಗದ 16ರ ಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಅಮೋದಿನಿ ನಾಯಕ್ 7-6 (5), 6-0ರಿಂದ ಕಾಶ್ವಿ ಸುನಿಲ್ ಎದುರು, ಧರಣಿ ಧನ್ಯಾಟ 6-4, 6-4ರಿಂದ ಆಯುಷಿ ವಿರುದ್ಧ, ಸುಶ್ಮಿತಾ ರವಿ 6-1, 6-2ರಿಂದ ಅರ್ಚಿಶಾ ಘೋಷ್ ಎದುರು, ವರುಣ್ಯಾ ನವೀನ್ 1-6, 6-3, 10-8ರಿಂದ ದಿಶಾ ಸಂತೋಷ್ ವಿರುದ್ಧ, ಅನುಷ್ಕಾ ಗರಿಮೆಲ್ಲಾ 6-7 (5), 6-3, 10-1ರಿಂದ ಅವ್ವಾಯಿ ವಿವೇಕಾನಂದ ಎದುರು, ಮೇಘನಾ ಜಿ.ಡಿ 6-3, 6-0ರಿಂದ ಜೆನಿಫರ್ ಚಾಕೊ ವಿರುದ್ಧ, ಶ್ರೀ ತನ್ವಿ ದಾಸರಿ ಅವರು ದಿಶಾ ವಿರುದ್ಧ ಗೆದ್ದರು. ಬಾಲಕರ ವಿಭಾಗದ ಪ್ರೀಕ್ವಾರ್ಟರ್‌ಗಳಲ್ಲಿ ಮನದೀಪ್ ರೆಡ್ಡಿ 6-0, 6-3ರಿಂದ ಶ್ರೀಶರಣ್ ಕನುಗೇವಿ ಎದುರು, ವಿಶಾಲ್ ವಾಸುದೇವ್ 7-5, 6-2ರಿಂದ ವಿಷ್ಣು ಎದುರು, ಆರ್ಯ ಗಣಪತಿ 6-3, 7-6ರಿಂದ ಆರ್ಯಂತ್ ಎದುರು ಗೆದ್ದರು.



ರೇವಾ ವಿಶ್ವವಿದ್ಯಾಲಯ ತಂಡವು ಅಖಿಲ ಭಾರತ ಅಂತರಕಾಲೇಜು ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಮಣಿಪಾಲದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ತಂಡವು ಕೂರ್ಗ್ ತಾಂತ್ರಿಕ ಸಂಸ್ಥೆಯ ತಂಡವನ್ನು 6–5ರಿಂದ ಸೋಲಿಸಿತು. ರೇವಾ ವಿಶ್ವವಿದ್ಯಾಲಯ ತಂಡ: ಎಡದಿಂದ (ನಿಂತವರು)– ಯಶವಂತ ರೆಡ್ಡಿ, ದೊಡ್ಡ ಬಸವ, ವ್ಯಾಸ, ನಿಖಿಲ್, ಕಿಶೋರ್, ಯಾಸಿನ್ ವೈ.ಎಚ್, ಭಜನ್, ಅಚ್ಚಯ್ಯ, ಸುಬ್ಬಯ್ಯ, ರೋಹನ್ ಮತ್ತು ರಾಕೇಶ್. (ಕುಳಿತವರು)– ಲೋಕೇಶ್, ಅಭಿನವ್ ಎಚ್.ಕೆ, ಉಮೇಶ್ ರಾಜು (ವಿವಿಯ ಟ್ರಸ್ಟಿ), ಪಿ. ಶ್ಯಾಮ ರಾಜು (ವಿವಿಯ ಕುಲಾಧಿಪತಿ), ಎಂ. ಧನಂಜಯ (ಉಪ ಕುಲಪತಿ), ದೀಪಕ್ ಸಿ.ಎಸ್. (ದೈಹಿಕ ಶಿಕ್ಷಣ ನಿರ್ದೇಶಕ) ಮತ್ತು ರೋಹಿತ್.

ಸಂಕ್ಷಿಪ್ತ ಸುದ್ದಿ

ಬೆಂಗಳೂರು ವಿಶ್ವ 10ಕೆ: ಗ್ಯಾಟ್ಲಿನ್ ರಾಯಭಾರಿ

ಬೆಂಗಳೂರು: ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ ವಿಶ್ವ ಬೆಂಗಳೂರು 10ಕೆಗೆ ರಾಯಭಾರಿಯನ್ನಾಗಿ ಒಲಿಂಪಿಕ್ ಚಿನ್ನದ ಪದಕ ವಿಜೇತ, ಅಮೆರಿಕದ ಅಥ್ಲೀಟ್ ಜಸ್ಟಿನ್ ಗ್ಯಾಟ್ಲಿನ್ ಅವರನ್ನು ನೇಮಕ ಮಾಡಲಾಗಿದೆ.

2004ರ ಒಲಿಂಪಿಕ್ಸ್‌ನ 100 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಜಯಿಸಿರುವ ಗ್ಯಾಟ್ಲಿನ್, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಬಾರಿ ಅಗ್ರಸ್ಥಾನ ಗಳಿಸಿದ್ದಾರೆ. ಅವರನ್ನು ಮೇ 15ರಂದು ನಡೆಯುವ 10ಕೆಗೆ ರಾಯಭಾರಿಯನ್ನಾಗಿ ನೇಮಿಸಲಾಗಿದೆ ಎಂದು ಸ್ಪರ್ಧೆಯ ಪ್ರಾಯೋಜಿಸುವ ಸಂಸ್ಥೆ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಮಂಗಳವಾರ ಪ್ರಕಟಿಸಿದೆ.

2003ರಿಂದ 2019ರ ಅವಧಿಯಲ್ಲಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಛಾಪು ಮೂಡಿಸಿದ್ದ ಗ್ಯಾಟ್ಲಿನ್, ಈ ವರ್ಷದ ಫೆಬ್ರುವರಿಯಲ್ಲಿ ನಿವೃತ್ತಿ ಪ್ರಕಟಿಸಿದ್ದರು.

ಅಂತರರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ 15ಕ್ಕೂ ಹೆಚ್ಚು ಪದಕಗಳು ಅವರ ಮುಡಿಗೇರಿವೆ.

‘ಕಳೆದ ಎರಡು ವರ್ಷಗಳು ನಮಗೆಲ್ಲರಿಗೂ ಸವಾಲಾಗಿತ್ತು ಮತ್ತು ಒಟ್ಟಿಗೆ ಇರುವುದರ ಮಹತ್ವ ಅರಿವಾಗಿದೆ. ಬೆಂಗಳೂರು ವಿಶ್ವ 10ಕೆ ಭಾಗವಾಗಲು ಉತ್ಸುಕನಾಗಿದ್ದೇನೆ’ ಎಂದು ಗ್ಯಾಟ್ಲಿನ್ ಹೇಳಿದ್ದಾರೆ.



ಜಸ್ಟಿನ್ ಗ್ಯಾಟ್ಲಿನ್

ಕುಸ್ತಿ: ಪರಶುರಾಮ, ಕೀರ್ತನ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ಪರಶುರಾಮ ಮತ್ತು ಕೀರ್ತನ್ ಡಿ.ಸಿ ರಾಷ್ಟ್ರೀಯ ಸಬ್‌ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಪರಶುರಾಮ್ 48 ಕೆಜಿ ವಿಭಾಗದ ಫ್ರೀಸ್ಟೈಲ್ ಮತ್ತು ಕೀರ್ತನ್ 48 ಕೆಜಿ ವಿಭಾಗದ ಗ್ರೀಕೊ ರೋಮನ್ ವಿಭಾಗದಲ್ಲಿ ಸ್ಪರ್ಧಿಸಿದ್ದರು. ದಾವಣಗೆರೆ ಕ್ರೀಡಾ ವಸತಿನಿಯಲದ ವಿದ್ಯಾರ್ಥಿಗಳಾಗಿರುವ ಇವರಿಗೆ ಕೆ. ವಿನೋದ್ ಕುಮಾರ್ ಅವರು ತರಬೇತಿ ನೀಡಿದ್ದರು.



ಕೀರ್ತನ್



ಪರಶುರಾಮ